
ಜನಶಕ್ತಿ

ದುಡಿಯುವ ಜನರ ಪ್ರಾಣಮಿತ್ರ

ಕನ್ನಡ ವಾರಪತ್ರಿಕೆ

ಸಂಪುಟ 15 | ಸಂಚಿಕೆ 18 | ಏಪ್ರಿಲ್ 26–ಮೇ 2, 2021| ಪುಟ 16| ರೂ.10/-

https://janashakthi.wordpress.com e-mail : js_weekly@gmail.com



ಎಲ್ಲರಿಗೂ ಲಸಿಕೆ ಎಲ್ಲರಿಗೂ ಆರೋಗ್ಯ – ಮೇ ದಿನ ಪ್ರಣಾಳಿಕೆಯ ಕರೆ



ವಿಫಲಗೊಂಡಿರುವ ‘ವಿಶ್ವಗುರು’



ಆಹಾರ ಭದ್ರತೆಯ ಮೇಲೆಯೇ ದಾಳಿ

ರೈತರ ದಿಲ್ಲಿ ಚಲೋ - 150 ದಿನಗಳು

‘ಆಪರೇಷನ್ ಕ್ಲೀನ್’ ಗೆ ಎದುರಾಗಿ ‘ಆಪರೇಷನ್ ಶಕ್ತಿ’









ಆಕ್ಸಿಜನ್‌ಗಾಗಿ ಹಾಹಾಕಾರ, ಬೆಡ್‌ಗಾಗಿ ಪರದಾಟ

ನಿರ್ದಯಿ..... ನಿಷ್ಕರುಣಿ! ಈ ಆಳುವ ವರ್ಗ

ಆರೋಗ್ಯ ತುರ್ತು ಸ್ಥಿತಿ – ತಕ್ಷಣವೇ ಅಗತ್ಯ ಕ್ರಮಗಳನ್ನು ಕೈಗೊಳ್ಳಬೇಕು

ಆಶಿಷ್ ಯೆಚೂರಿ –ಪೊಲಿಟ್ ಬ್ಯುರೋ ಸಂತಾಪ



ಸಿಪಿಐ(ಎಂ ಪ್ರಧಾನ ಕಾರ್ಯದರ್ಶಿ ಸೀತಾರಾಮ್ ಯೆಚುರಿ ಮತ್ತು ಇಂದ್ರಾಣಿ ಮಜುಂದಾರ್ ಅವರ ಪುತ್ರ, ಆಶೀಶ್ ಯೆಚೂರಿ ಎಪ್ರಿಲ್ 22ರಂದು ಕೋವಿಡ್ ಸಂಬಂಧಿ ತೀವ್ರ ಸಮಸ್ಯೆಗಳಿಂದಾಗಿ ನಿಧನರಾಗಿದ್ದಾರೆ. ಅವರಿಗೆ 35 ವರ್ಷವಾಗಿತ್ತು.

ಸಿಪಿಐ(ಎಂ) ಪೊಲಿಟ್ ಬ್ಯುರೋ ಸೀತಾರಾಮ್ ಯೆಚೂರಿ, ಇಂದ್ರಾಣಿ, ಆಶೀಶ್ ಅವರ ಪತ್ನಿ ಸ್ವಾತಿ, ಸೋದರಿ ಅಖಿಲಾ ಮತ್ತು ದುಃಖ ಸಂತಪ್ತ ಕುಟುಂಬದ ಇತರ ಸದಸ್ಯರಿಗೆ ತನ್ನ ಆಳವಾದ ಸಂತಾಪಗಳನ್ನು ವ್ಯಕ್ತಪಡಿಸಿದೆ.

ದೇಶದಲ್ಲಿ ಉಕ್ಕೇರುತ್ತಿರುವ ಮಹಾಸೋಂಕು ಉಂಟು ಮಾಡುತ್ತಿರುವ ವಿನಾಶದ ಬಗ್ಗೆ ಸಿಪಿಐ(ಎಂ) ಪೊಲಿಟ್ ಬ್ಯುರೋ ಗಂಭೀರ ಆತಂಕವನ್ನು ವ್ಯಕ್ತಪಡಿಸಿದೆ.

ಎಪ್ರಿಲ್ 19ರಂದು ಅದು ನೀಡಿರುವ ಹೇಳಿಕೆಯಲ್ಲಿ ಇಂತಹ ಗಂಭೀರ ಆರೋಗ್ಯ ತುರ್ತು ಸನ್ನಿವೇಶದಲ್ಲಿ ಕೇಂದ್ರ ಸರ್ಕಾರ ಕನಿಷ್ಟ ಈ ಕೆಲಸಗಳನ್ನು ಮಾಡಬೇಕಾಗಿದೆ ಎಂದು ಹೇಳಿದೆ:

* ತಕ್ಷಣವೇ ಸಾರ್ವಜನಿಕ ವಲಯದ ಔಷಧಿ ತಂಯಾರಕಾ ಸೌಕರ್ಯಗಳನ್ನೆಲ್ಲವನ್ನೂ ಲಸಿಕೆ ಉತ್ಪಾದನೆಗೆ ಕಲೆ ಹಾಕಬೇಕು. ತಮಿಳುನಾಡಿನಲ್ಲಿ ಸಾರ್ವಜನಿಕ ವಲಯದಲ್ಲಿರುವ ಸೌಕರ್ಯಗಳಲ್ಲಿ ಒಂದಾದ 'ಸಮಗ್ರ ಲಸಿಕೆ ಸಂಕೀರ್ಣ'(ಇಂಟಿಗ್ರೇಟೆಡ್ ವ್ಯಾಕ್ಸೀನ್ ಕಾಂಪ್ಲೆಕ್ಸ್–ಐವಿಸಿ) ವನ್ನು 600 ಕೋಟಿ ರೂ ವೆಚ್ಚದಲ್ಲಿ ನಿರ್ಮಿಸಿದ್ದರೂ, ಅದಿನ್ನೂ ಬಳಕೆಯಾಗದೆ ಬಿದ್ದಿದೆ ಎಂದು ವರದಿಯಾಗಿದೆ. ಲಸಿಕೆಗಳ ಬೇಡಿಕೆ ಮತ್ತು ಪೂರೈಕೆಯಲ್ಲಿನ ಅಂತರವನ್ನು ತುಂಬಲು ಇಂತಹ ಎಲ್ಲ ಸೌಲಭ್ಯಗಳನ್ನು ಗರಿಷ್ಠ ಪ್ರಮಾಣದಲ್ಲಿ ಬಳಸಿಕೊಳ್ಳಬೇಕಾಗಿದೆ.
* ಸರಕಾರ ಲಸಿಕೆ ತಯಾರಿಕೆಗೆ ಬಜೆಟಿನಲ್ಲಿ ನಮೂದಿಸಿರುವ ಹಣ 35,000 ಕೋಟಿ ರೂ. ಗಳನ್ನು ತಕ್ಷಣವೇ ವೆಚ್ಚ ಮಾಡುವುದು ಅಗತ್ಯವಾಗಿದೆ.
* ಕೋವಿಡ್–19 ಚಿಕಿತ್ಸೆಯಲ್ಲಿ ಬಳಸುವ ಲಸಿಕೆಗಳು ಮತ್ತು ಔಷಧಿಗಳ ಲಭ್ಯತೆ ಮತ್ತು ಹಂಚಿಕೆಯ ಬಗ್ಗೆ ಸಾರ್ವಜನಿಕರಲ್ಲಿ ವಿವಿಧ ಸಂದೇಹಗಳು ಮತ್ತು ಆತಂಕಗಳು ಎದ್ದಿರುವುದರಿಂದ ಅವುಗಳ ಲಭ್ಯತೆ ಮತ್ತು ಹಂಚಿಕೆಯನ್ನು ಪಾರದರ್ಶಕವಾಗಿ ಮಾಡಬೇಕು ಎಂದು ಸಿಪಿಐ(ಎಂ) ಹೇಳಿದೆ.
* ಅಗತ್ಯ ಔಷಧಿಗಳ ಕಳ್ಳ ದಾಸ್ತಾನು ಮತ್ತು ಕಾಳಸಂತೆಯ ವಿರುದ್ಧ ಕಟ್ಟುನಿಟ್ಟಾದ ಕ್ರಮಗಳನ್ನು ಜಾರಿ ಮಾಡಬೇಕು.
* ಭಾರತದಲ್ಲಿ ಲಸಿಕೆ ಉತ್ಪಾದನೆಗೆ ಬೇಕಾಗುವ ಕಚ್ಚಾ ಸಾಮಗ್ರಿಗಳ ಪೂರೈಕೆಯನ್ನು ಖಾತ್ರಿ ಪಡಿಸುತ್ತೇನೆಂಬ ತನ್ನ ವಚನವನ್ನುಅಮೇರಿಕ ಆಡಳಿತ ಪಾಲಿಸಬೇಕೆಂದು ಅದರ ಮೇಲೆ ಕೇಂದ್ರ ಸರಕಾರ ಒತ್ತಡ ಹಾಕಬೇಕು. ಎಂದು ಸಿಪಿಐ(ಎಂ) ಪೊಲಿಟ್ ಬ್ಯುರೋ ಆಗ್ರಹಿಸಿದೆ.

ಆರೋಗ್ಯ ತುರ್ತು ಸನ್ನಿವೇಶವನ್ನು ಅದಕ್ಕೆ ತಕ್ಕುದಾದ ಗಂಭೀರತೆಯೊಂದಿಗೆ ನೋಡಬೇಕು ಎಂದು ಮನವಿ ಮಾಡಿಕೊಂಡಿರುವ ಸಿಪಿಐ(ಎಂ), ಎಲ್ಲ ಸಾಮೂಹಿಕ ಜವಾವಣೆಗಳನ್ನು ಮತ್ತು ದೊಡ್ಡ ಪ್ರಮಾಣದಲ್ಲಿ ಸೋಂಕು ಹರಡಿಸುವ ಸಮಾರಂಭಗಳನ್ನು ನಿಷೇಧಿಸಬೇಕು ಎಂದು ಹೇಳಿದೆ.

ಜನಗಳನ್ನು ದೂಷಿಸುವ, ಮತ್ತು ದೂಷಣೆಗಳನ್ನು ರಾಜ್ಯ ಸರ್ಕಾರಗಳ ಹೆಗಲಿಗೆ ದಾಟಿಸುವ ಅಲ್ಪತನದ ರಾಜಕೀಯವನ್ನು ಕೇಂದ್ರ ಸರಕಾರ ನಿಲ್ಲಿಸಬೇಕು. ಮಹಾ ಸೋಂಕನ್ನು ಮೀರಿ ನಿಲ್ಲಲು ಕೇಂದ್ರ ಮತ್ತು ರಾಜ್ಯ ಸರಕಾರಗಳು ಒಟ್ಟಿಗೆ ಕೆಲಸ ಮಾಡಬೇಕಾದ್ದು ಬಹಳ ಮುಖ್ಯ ಎಂದಿರುವ ಸಿಪಿಐ(ಎಂ) ಪೊಲಿಟ್ ಬ್ಯುರೋ, ಹೇಳತೀರದ ದುರಂತಗಳನ್ನು ಹೇರುತ್ತಿರುವ ಈ ಸವಾಲನ್ನು ಎದುರಿಸಲು ದೇಶ ಒಟ್ಟಾಗಿ ಎದ್ದು ನಿಲ್ಲಬೇಕಾಗಿದೆ ಎಂದು ಹೇಳಿದೆ.

ಈ ಗಂಭೀರ ಅರೋಗ್ಯ ತುರ್ತು ಪರಿಸ್ಥಿತಿಯನ್ನು ಎದುರಿಸಲು ಒಂದು ಸಾರ್ವತ್ರಿಕ ಲಸಿಕೀಕರಣ ಕಾರ್ಯಕ್ರಮ ಅಗತ್ಯವಾಗಿದೆ

ಎಪ್ರಿಲ್ 21 ರಂದು ಕೇಂದ್ರ ಸರಕಾರ ಪ್ರಕಟಿಸಿರುವ ಲಸಿಕೆ ಧೋರಣೆಯು ಮತ್ತೊಮ್ಮೆ ತಾವು ಸೃಷ್ಟಿಸಿದ ಅಗಾಧ ಸ್ವರೂಪದ ಅರೋಗ್ಯ ಬಿಕ್ಕಟ್ಟಿನಿಂದ ಹೊಣೆ ಜಾರಿಸಿಕೊಳ್ಳುವ ಕೇಂದ್ರ ಸರಕಾರದ ಪ್ರಯತ್ನವಾಗಿದೆ, ಸಮಸ್ತ ಜವಾಬ್ದಾರಿಯನ್ನು ರಾಜ್ಯ ಸರಕಾರಗಳ ಮೇಲೆ ದಾಟಿಸುವ ಒಂದು ಪ್ರಯತ್ನ ನಡೆದಿದೆ ಎಂದು ಸಿಪಿಐ(ಎಂ) ಪೊಲಿಟ್ ಬ್ಯುರೋ ಟೀಕಿಸಿದೆ

ಈ ಧೋರಣೆ ಲಸಿಕೆಗಳ ಪೂರೈಕೆಯನ್ನು ಹೆಚ್ಚಿಸದೆಯೇ, ಅವುಗಳ ಮಾರಾಟವನ್ನು ಉದಾರೀಕರಿಸುವ ಮತ್ತು ಬೆಲೆಗಳನ್ನು ನಿಯಂತ್ರಣ–ಮುಕ್ತ ಗೊಳಿಸುವ ಒಂದು ಪ್ರಯತ್ನವೇ ಆಗಿದೆ. ಕೇಂದ್ರ ಸರಕಾರ ಒಂದು ವರ್ಷದಿಂದ ಲಸಿಕೆ ಪೂರೈಕೆಗಳನ್ನು ಸಾಕಷ್ಟು ಮತ್ತು ಅಗತ್ಯ ಪ್ರಮಾಣದಲ್ಲಿ ಹೆಚ್ಚಿಸಲು ಏನೂ ಮಾಡದೇ ವಿಫಲವಾಗಿತ್ತು. ಇದು ಈ ಜೀವರಕ್ಷಕ ಲಸಿಕೆಯನ್ನು ಕೋಟ್ಯಂತರ ಜನಗಳ ಕೈಗೆಟುಕದಂತೆ ಮಾಡಿ ಅವರನ್ನು ಇದರಿಂದ ಹೊರಗಿಡುವ ಸೂತ್ರವಾಗಿದೆ.

ಅಲ್ಲದೆ, ಇದುವರೆಗೆ ಲಸಿಕೆಗಳು ರಾಜ್ಯ ಸರಕಾರಗಳಿಗೆ ಉಚಿತವಾಗಿದ್ದವು. ಈಗ ರಾಜ್ಯಗಳು ಅವನ್ನು ಯಾವುದೇ ಬೆಲೆ ನಿಯಂತ್ರಣವಿಲ್ಲದ 'ಮುಕ್ತ ಮಾರುಕಟ್ಟೆ'ಯಿಂದ "ಖರೀದಿ"ಸಬೇಕು. ಲಸಿಕೆ ಒದಗಿಸುವವವರು, ಈ ಧೋರಣೆಯ ಪ್ರಕಾರ, ತಮ್ಮ 'ಸ್ವಯಂ ನಿರ್ಧಾರಿತ ಲಸಿಕೆ ಬೆಲೆ'ಯನ್ನು ಘೋಷಿಸುತ್ತಾರೆ. ಇದು ಕೂಡ ನಮ್ಮ ಬಹುಪಾಲು ಜನಗಳನ್ನು ಹೊರಗಿಡುವುದು ಖಂಡಿತ ಎಂದು ಪೊಲಿಟ್ ಬ್ಯುರೋ ಹೇಳಿದೆ.

ಅಲ್ಲದೆ, ಈ ಧೋರಣೆ ದೊಡ್ಡಪ್ರಮಾಣದಲ್ಲಿ ಕಾಳಸಂತೆ ಮತ್ತು ಕಳ್ಳ ದಾಸ್ತಾನನ್ನು ಖಂಡಿತಾ ಹುಟ್ಟಿ ಹಾಕುತ್ತದೆ ಎಂದು ಅದು ಎಚ್ಚರಿಸಿದೆ.

ರಾಜ್ಯ ಸರಕಾರಗಳಿಗೆ ಕೇಂದ್ರೀಯ ಖಜಾನೆಯಿಂದ ಲಸಿಕೆಗಳಿಗೆ ನಿಧಿ ಒದಗಿಸಬೇಕು. ಒಂದು ಸಾಮೂಹಿಕ ಲಸಿಕೀಕರಣ ಕಾರ್ಯಕ್ರಮ ಉಚಿತವಾಗಿರಬೇಕು ಮತ್ತು ಸಾರ್ವತ್ರಿಕವಾಗಿರಬೇಕು. ಇದು ಸ್ವತಂತ್ರ ಭಾರತದ ಪರಂಪರೆ ಮತ್ತು ಆಚರಣೆಯಾಗಿದೆ ಎಂದು ನೆನಪಿಸಿರುವ ಸಿಪಿಐ(ಎಂ) ಪೊಲಿಟ್ ಬ್ಯುರೋ ಕೇಂದ್ರದ ಈ ತಾರತಮ್ಯಪೂರ್ಣ, ಸಮತ್ವ–ವಿರೋಧಿ ಮತ್ತು ಅಡ್ಡಾದಿಡ್ಡಿ ಯೋಜನೆಯ ಗುರಿ ತನ್ನನ್ನು ಎಲ್ಲಾ ಜವಾಬ್ದಾರಿಗಳಿಂದ ಮುಕ್ತಗೊಳಿಸಿಕೊಳ್ಳುವುದೇ ಆಗಿದೆ ಎಂದು ಬಲವಾಗಿ ಖಂಡಿಸಿದೆ. ಇದು ಈ ಮಹಾಸೋಂಕನ್ನು ಶಮನಗೊಳಿಸುವುದಿಲ್ಲ, ಅಥವಾ, ನಮ್ಮ ಜನಗಳು ಎದುರಿಸುತ್ತಿರುವ ಅಪಾರವಾದ ಸಾರ್ವಜನಿಕ ಅರೋಗ್ಯ ತುರ್ತು ಪರಿಸ್ಥಿತಿಯನ್ನು ಪರಿಹರಿಸುವುದಿಲ್ಲ. ತದ್ವಿರುದ್ಧವಾಗಿ, ಈ ತಾರತಮ್ಯದ ಧೋರಣೆ ಭಾರತವನ್ನು ಮಹಾಸೋಂಕಿನ ಪ್ರವಾಹಕ್ಕೆ ಮತ್ತಷ್ಟು ಈಡು ಮಾಡುತ್ತದೆ.

ಒಂದು ಸಾಮೂಹಿಕ ಸಾರ್ವತ್ರಿಕ ಲಸಿಕೀಕರಣ ಕಾರ್ಯಕ್ರಮ ಮಾತ್ರವೇ ಈ ತುರ್ತು ಪರಿಸ್ಥಿತಿಯ ಅಗತ್ಯಗಳನ್ನು ಈಡೇರಿಸ ಬಲ್ಲುದು ಎಂದು ಸಿಪಿಐ(ಎಂ) ಪೊಲಿಟ್ ಬ್ಯುರೋ ಹೇಳಿದೆ.

ಅಮೆರಿಕ ತಕ್ಷಣವೇ ಲಸಿಕೆ ಸಾಮಗ್ರಿಗಳ ರಫ್ತು ನಿಷೇಧವನ್ನು ತೆಗೆಯಬೇಕು

ಭಾರತದಲ್ಲಿ ಲಸಿಕೆ ಉತ್ಪಾದನೆಯ ಪ್ರಮಾಣವನ್ನು ಹೆಚ್ಚಿಸುವುದಕ್ಕೆ ಅದಕ್ಕೆ ಬೇಕಾಗುವ ಮಧ್ಯಂತರ ಸಾಮಗ್ರಿಗಳ ಕೊರತೆ ಅಡ್ಡಿಯಾಗಿದೆ. ಇವುಗಳಲ್ಲಿ ಬಹಳಷ್ಟು ಸಾಮಗ್ರಿಗಳು, ಫಿಲ್ಟರ್ ಗಳು, ದ್ರಾವಣಗಳು,, ಪ್ಲಾಸ್ಟಿಕ್ ಚೀಲಗಳು ಮುಂತಾದವು ಅಮೆರಿಕ ಸಂಯುಕ್ತ ಸಂಸ್ಥಾನಗಳಿಂದ ಬರಬೇಕು. ಆದರೆ ಆ ದೇಶದ ಆಡಳಿತ ತನ್ನ 'ರಕ್ಷಣಾ ಉತ್ಪಾದನಾ ಕಾಯ್ದೆ'ಯ ಅಡಿಯಲ್ಲಿ ಲಸಿಕೆ ಸಾಮಗ್ರಿಗಳ ರಫ್ತನ್ನು ನಿಷೇಧಿಸಿದೆ. ಭಾರತೀಯ ಅಧಿಕಾರಿಗಳು ವಿನಂತಿಸಿಕೊಂಡರೂ ಈ ಸಾಮಗ್ರಿಗಳ ರಫ್ತಿನಲ್ಲಿ ಯಾವುದೇ ರಿಯಾಯ್ತಿಯನ್ನು ಅಥವಾ ವಿನಾಯ್ತಿಯನ್ನು ಕೊಟ್ಟಿಲ್ಲ. ದೇಶದ ಅತಿ ದೊಡ್ಡ ಲಸಿಕೆ ತಯಾರಕ ಕಂಪೆನಿಯಾದ ಸೀರಮ್ ಇನ್ಸ್ಟಿಟ್ಯೂಟ್ ಆಫ್ ಇಂಡಿಯಾ ಬಹಳ ಸಮಯದಿಂದ ಈ ಸಮಸ್ಯೆಯತ್ತ ಗಮನ ಸೆಳೆಯುತ್ತ ಬಂದಿದೆ.

ಬಿಡೆನ್ ಆಡಳಿತದ ನಿಲುವಿನಲ್ಲಿ ಎರಡು ನಾಲಗೆಯ ವಾಸನೆ ಬರುತ್ತದೆ ಎಂದು ಸಿಪಿಐ(ಎಂ) ಪೊಲಿಟ್ ಬ್ಯುರೋ ಖೇದ ವ್ಯಕ್ತಪಡಿಸಿದೆ. ಕಳೆದ ತಿಂಗಳಷ್ಟೇ, ಮಾರ್ಚ್ 12 ರಂದು ನಡೆದ ಕ್ವಾಡ್ ಶೃಂಗಸಭೆಯಲ್ಲಿ ಹೊರಡಿಸಿದ ಜಂಟಿ ಹೇಳಿಕೆ "ಆರ್ಥಿಕ ಪುನಶ್ಚೇತನವನ್ನು ತ್ವರಿತಗೊಳಿಸಲು ಮತ್ತು ಜಾಗತಿಕ ಆರೋಗ್ಯದ ಪ್ರಯೋಜನಕ್ಕಾಗಿ ಸುರಕ್ಷಿತ, ಕೈಗೆಟುಕುವ ಮತ್ತು ಪರಿಣಾಮಕಾರಿ ಲಸಿಕೆ ಉತ್ಪಾದನೆ ಹಾಗು ಸಮತ್ವಪೂರ್ಣ ಲಭ್ಯತೆಯನ್ನು ವಿಸ್ತರಿಸಲು ಕೈಜೋಡಿಸುತ್ತೇವೆ" ಎಂದಿತ್ತು. ಅಲ್ಲದೆ ಭಾರತ–ಶಾಂತಸಾಗರ ಪ್ರದೇಶದಲ್ಲಿ ಭಾರತವು ಒಂದು ಲಸಿಕೆ ಉತ್ಪಾದನೆಯ ಜಾಲ ಕೇಂದ್ರವಾಗುವಂತೆ ನೆರವಾಗಲು ಭಾರತೀಯ ಕಂಪನಿ, ಬಯೋಲಾಜಿಕಲ್ ಇ ಲಿಮಿಟೆಡ್ ನಿಂದ ಲಸಿಕೆಗಳ ಉತ್ಪಾದನೆಗೆ ಹಣಕಾಸು ಒದಗಿಸುವುದಾಗಿಯೂ ಆಶ್ವಾಸನೆ ಕೊಟ್ಟಿತ್ತು ಎಂಬ ಸಂಗತಿಯತ್ತ ಸಿಪಿಐ(ಎಂ ಗಮನ ಸೆಳೆದಿದೆ.

ಲಸಿಕೆ ಉತ್ಪಾದನೆಯಲ್ಲಿ ಬಳಸುವ ಸಾಮಗ್ರಿಗಳ ರಫ್ತುಗಳ ಮೇಲೆ ನಿಷೇಧ ಸಂಪೂರ್ಣವಾಗಿ ಈ ಪ್ರಕಟಿತ ಉದ್ದೇಶದ ವಿರುದ್ಧ ಹೋಗುತ್ತದೆ. ಕ್ವಾಡ್ ಮೈತ್ರಿಯನ್ನು ಬಹಳಷ್ಟು ನೆಚ್ಚಿಕೊಂಡಿರುವ ಮೋದಿ ಸರಕಾರ ಬಿಡೆನ್ ಆಡಳಿತ ತನ್ನ ಮಾತಿಗೆ ಬದ್ಧವಾಗಿರುವಂತೆ ಮತ್ತು ತಕ್ಷಣವೇ ಭಾರತಕ್ಕೆ ಅಗತ್ಯ ಲಸಿಕೆ ಸಾಮಗ್ರಿಗಳ ಪೂರೈಕೆಯಾಗುವಂತೆ ಖಾತ್ರಿಪಡಿಸಬೇಕು. ಭಾರತ ಒಂದು ಅಭೂತಪೂರ್ವ ಕೋವಿಡ್ ಸೋಂಕು ಏರಿಕೆಯ ಸಮಯದಲ್ಲಿ ಲಸಿಕೆ ಕೊರತೆಯನ್ನು ಎದುರಿಸುತ್ತಿರುವಾಗ ಇಷ್ಟಾದರೂ ಮಾಡಬೇಕಾಗಿದೆ ಎಂದು ಸಿಪಿಐ(ಎಂ) ಪೊಲಿಟ್ ಬ್ಯುರೋ ಹೇಳಿದೆ.

ಏಪ್ರಿಲ್ 30: ಅಖಿಲ ಭಾರತ ಪ್ರತಿಭಟನಾ ದಿನ–ಕೃಷಿ ಕೂಲಿಕಾರರ ಸಂಘದ ಕರೆ

ಅಖಿಲ ಭಾರತ ಕೃಷಿ ಕೂಲಿಕಾರರ ಸಂಘದ ರಾಷ್ಟ್ರೀಯ ಪದಾಧಿಕಾರಿಗಳು ಎಪ್ರಿಲ್ 21 ರಂದು ಆನ್‌ಲೈನ್ ಸಭೆ ನಡೆಸಿ ಎರಡನೇ ಅಲೆಯ ಕೊರೋನ ಸೋಂಕನ್ನು ತಡೆಯಲು ಕೇಂದ್ರ ಸರ್ಕಾರ ಕೈಗೊಂಡಿರುವ ಕ್ರಮಗಳು ನಿರುಪಯುಕ್ತವಾಗಿವೆ ಎಂದು ಟೀಕಿಸಿದೆ ; ಉಚಿತ ಲಸಿಕೆ, ಉಚಿತ ಪಡಿತರ ಮುಂತಾದ ಏಳು ಹಕ್ಕೊತ್ತಾಯಗಳ ಮೇಲೆ ಒತ್ತಾಯಿಸಿ ಎಪ್ರಿಲ್ 30 ರಂದು ದೇಶಾದ್ಯಂತ ಪ್ರತಿಭಟನಾ ದಿನ ಆಚರಿಸಲು ಕರೆ ನೀಡಿದೆ.

ಎಪ್ರಿಲ್ 20ರ ರಾತ್ರಿ ದೇಶದ ಜನತೆಯನ್ನು ಉದ್ದೇಶಿಸಿ ಮಾತನಾಡಿದ ಪ್ರಧಾನಿ ದೇಶದ ಜನತೆಯಲ್ಲಿ ತೀವ್ರ ನಿರಾಸೆಯನ್ನು ಉಂಟು ಮಾಡಿದ್ದಾರೆ. ಮೊದಲನೆಯ ಭೀಕರ ಸಾಂಕ್ರಾಮಿಕ ಅಲೆಯಿಂದ ಪ್ರಧಾನಿ ಏನೂ ಪಾಠ ಕಲಿಯಲಿಲ್ಲ ಎಂಬುದು ಸಾಬೀತಾಗಿದೆ. ಗುಣಮಟ್ಟದ ವೆಂಟಿಲೇಟರ್‌ಗಳನ್ನು ಸಂಗ್ರಹ ಮಾಡಲಿಲ್ಲ. ಅಗತ್ಯವಿರುವಷ್ಟು ಆಕ್ಸಿಜನ್ ಉತ್ಪಾದನೆಗೆ ಗಂಭೀರ ಪ್ರಯತ್ನ ಮಾಡಲಿಲ್ಲ. ಸರ್ಕಾರಿ ಮತ್ತು ಖಾಸಗಿ ಆಸ್ಪತ್ರೆಗಳಲ್ಲಿ ಅವಶ್ಯವಿರುವಷ್ಟು ಹಾಸಿಗೆಗಳನ್ನು ಒದಗಿಸಲಿಲ್ಲ.

ಇಂತಹ ಗಂಭೀರ ಸನ್ನಿವೇಶದಲ್ಲಿ ಕೇಂದ್ರ ಸರ್ಕಾರ ಉಚಿತ ಮತ್ತು ಸಾರ್ವತ್ರಿಕ ಲಸಿಕಾ ವಿತರಣೆಗೆ ಮುಂದಾಗುವ ಬದಲು ತನ್ನ ಜವಾಬ್ದಾರಿಯನ್ನು ಕೈಬಿಟ್ಟು ಪಲಾಯನಗೈಯುತ್ತಿದೆ. ಲಸಿಕೆಗಳನ್ನು ಮಾರುಕಟ್ಟೆಯಲ್ಲಿ ಮಾರಾಟಕ್ಕೆ ಮುಕ್ತಗೊಳಿಸಲಾಗಿದೆ. ಮುಕ್ತ ಮಾರುಕಟ್ಟೆಯಲ್ಲಿ ಕೊರತೆಯನ್ನು ಸೃಷ್ಟಿಮಾಡಿ ಬಡವರ ಕೈಗೆಟುಕದಂತೆ ಮಾಡಲಾಗಿದೆ. ಸರ್ಕಾರಿ ಆಸ್ಪತ್ರೆಗಳಲ್ಲಿ ಕೊವ್ಯಾಕ್ಸಿನ್ ದರ ರೂ. 400/– ಆಗಿದ್ದು ಖಾಸಗಿ ಆಸ್ಪತ್ರೆಗಳಲ್ಲಿ ಅದು ರೂ. 600/– ಆಗಿದೆ.

ಆಕ್ಸಿಜನ್ ಮತ್ತು ಅಗತ್ಯ ಔಷಧಿಗಳ ಕೊರತೆ, ಪರೀಕ್ಷೆ ಮಾಡಿ ವರದಿ ಕೊಡುವಲ್ಲಿ ಆಗುತ್ತಿರುವ ವಿಳಂಬ ಲಾಕ್‌ಡೌನ್, ಕರ್ಫ್ಯೂದಂತಹ ಕ್ರಮಗಳಿಂದ ಹೆಚ್ಚುತ್ತಿರುವ ನಿರುದ್ಯೋಗದ ಸಂದರ್ಭದಲ್ಲಿ ಪ್ರಧಾನಮಂತ್ರಿ ದೇಶದ ಜನತೆಗೆ ಅಗತ್ಯ ಪರಿಹಾರ ಒದಗಿಸಬಹುದೆಂಬ ನಿರೀಕ್ಷೆ ಇಟ್ಟುಕೊಂಡಿತ್ತು. ಆದರೆ ಪ್ರಧಾನಿಯವರ ಇಡೀ ಬಾಷಣ ನಿರುಸ್ತಾಹ ಉಂಟು ಮಾಡಿತ್ತು.

ಬಡವರಿಗೆ, ಕೃಷಿ ಕೂಲಿಕಾರರಿಗೆ ದುಬಾರಿ ಆರ್‌ಟಿಪಿಸಿಆರ್ ಪರೀಕ್ಷೆಗಳನ್ನು ಮಾಡಿಸಿಕೊಳ್ಳಲು ಸಾಧ್ಯವಾಗದು. ಸರ್ಕಾರಿ ಆಸ್ಪತ್ರೆಗಳು ಮತ್ತು ಪರೀಕ್ಷಾ ಕೇಂದ್ರಗಳಿಗೆ ಕೊರೋನಾ ಪತ್ತೆ ಹಚ್ಚುವ ಜನರ ಬೇಡಿಕೆಯನ್ನು ಪೂರೈಸಲಾಗುತ್ತಿಲ್ಲ. ಇದರಿಂದಾಗಿ ಕಾಯಿಲೆಯ ಲಕ್ಷಣಗಳಿದ್ದರೂ ಪರೀಕ್ಷೆಗೆ ಒಳಪಡಲು ಆಗುತ್ತಿಲ್ಲ.

ಗ್ರಾಮೀಣ ಹಾಗೂ ನಗರ ಪ್ರದೇಶಗಳ ಬಡವರು ಸಾಮಾನ್ಯವಾಗಿ ಒಂದೇ ಕೋಣೆಯನ್ನು ಹೊಂದಿರುವ ಸಣ್ಣ ಮನೆಗಳಲ್ಲಿ ವಾಸ ಇರುತ್ತಾರೆ. ಅವರಲ್ಲಿ ಕಾಯಿಲೆ ಪೀಡಿತರಿಗೆ ಕ್ವಾರೆಂಟೈನ್ ಮಾಡಿಕೊಂಡಿರಲು ಸಾಧ್ಯವಾಗುವುದಿಲ್ಲ. ಅಂತವರಿಗೆ ಸರ್ಕಾರ ಒಳ್ಳೆಯ ಗುಣಮಟ್ಟದ ಕ್ವಾರೆಂಟೈನ್ ಕೇಂದ್ರಗಳನ್ನು ನಿರ್ಮಾಣ ಮಾಡಬೇಕು.

ಆದ್ದರಿಂದ ಈ ಕೆಳಗಿನ ಹಕ್ಕೊತ್ತಾಯಗಳಿಗೆ ಒತ್ತಾಯಿಸಿ ಎಪ್ರಿಲ್ 30 ರಂದು ದೇಶಾದ್ಯಂತ ಪ್ರತಿಭಟನೆ ನಡೆಸಲು ಅಖಿಲ ಭಾರತ ಕೃಷಿ ಕೂಲಿಕಾರರ ಸಂಘವು ತನ್ನ ಎಲ್ಲಾ ಘಟಕಗಳಿಗೆ ಕರೆ ನೀಡಿದೆ.

(1) ಎಲ್ಲರಿಗೂ ಉಚಿತ ಮತ್ತು ಸಾರ್ವತ್ರಿಕ ಲಸಿಕೆ ವಿತರಣೆ.

(2) ಗುಣಮಟ್ಟದ ಸೌಕರ್ಯಗಳನ್ನು ಹೊಂದಿದ ಕ್ವಾರೆಂಟೈನ್ ಕೇಂದ್ರಗಳು.

(3) ರಾಜ್ಯ ಹಾಗೂ ಹೊರ ರಾಜ್ಯಗಳ ಎಲ್ಲರಿಗೂ ಉಚಿತ ಆರ್‌ಟಿ–ಪಿಸಿಟಿ ಪರೀಕ್ಷೆಗಳು ಮತ್ತು ಉಚಿತ ಔಷಧಿಗಳು. (4) ಎಲ್ಲಾ ಕುಟುಂಬಗಳ ಪ್ರತಿಯೊಬ್ಬ ಸದಸ್ಯರಿಗೆ ತಿಂಗಳಿಗೆ ತಲಾ 10 ಕೆ.ಜಿ.ಅಕ್ಕಿ / ಗೋಧಿ ಮತ್ತು ಎಣ್ಣೆ ಹಾಗೂ ಬೇಳೆ ಇತ್ಯಾದಿ.

(5) ತೆರಿಗೆ ವ್ಯಾಪ್ತಿ ಹೊರಗೆ ಇರುವ ಎಲ್ಲ ಕುಟುಂಬಗಳಿಗೆ ತಿಂಗಳಿಗೆ ರೂ. 7500/– ಆರ್ಥಿಕ ನೆರವು.

(6) ಗ್ರಾಮೀಣ ಉದ್ಯೋಗ ಖಾತ್ರಿ ಕೆಲಸ ಮಾಡುವವರಿಗೆ ವರ್ಷಕ್ಕೆ 200 ದಿನಗಳ ಕೆಲಸ ಮತ್ತು ರೂ. 600/– ದಿನಗೂಲಿ.

(7) ವಲಸೆ ಕಾರ್ಮಿಕರರಿಗೆ ಸರಿಯಾದ ಸಾರಿಗೆ ವ್ಯವಸ್ಥೆ.

ಸಂಪಾದಕೀಯ

ನಿರ್ದಯಿ............. ನಿಷ್ಕರುಣಿ!

ಗಂಡನಿಗೆ ಕೂಲಿ ಇಲ್ಲದೆ ಊಟಕ್ಕೆ ತೊಂದರೆ ಉಂಟಾಗಿ, ಮಹಿಳೆಯೊಬ್ಬಳು ತನ್ನ ಮೂರೂವರೆ ವರ್ಷದ ಗಂಡು ಮಗುವಿನೊಂದಿಗೆ ಆತ್ಮಹತ್ಯೆ ಮಾಡಿಕೊಳ್ಳಲು ಮುಂದಾಗಿದ್ದ ಹೃದಯವಿದ್ರಾವಕ ಘಟನೆಯೊಂದು ಚಾಮರಾಜನಗರ ಜಿಲ್ಲೆ ಗುಂಡ್ಲುಪೇಟೆ ತಾಲ್ಲೂಕಿನ ಬೆಳಚಲವಾಡಿ ಗ್ರಾಮದಿಂದ ವರದಿಯಾಗಿದೆ. ಮೈಸೂರಿನ ಒಡನಾಡಿ ಸೇವಾ ಸಂಸ್ಥೆ ನೊಂದ ಈ ತಾಯಿ ಹಾಗು ಮಗುವಿಗೆ ಆಶ್ರಯ ನೀಡಿ ಮಾನವೀಯತೆಯನ್ನು ಮೆರೆದಿದೆ. ಕೋವಿಡ್ ಸಾಂಕ್ರಾಮಿಕದ ಮೊದಲ ಅಲೆಗೆ ತುತ್ತಾದ ಇಂತಹ ಅಸಂಖ್ಯಾತ ಬಡವರು ಬೀದಿಪಾಲಾಗಿ ಒಪ್ಪತ್ತಿನ ಊಟಕ್ಕೂ ಪರದಾಡಿದ್ದರು.

ರಾಜ್ಯದಲ್ಲಿ ಅಂದು ಅಧಿಕಾರದಲ್ಲಿದ್ದ ಅದೇ ನಿರ್ದಯಿ, ನಿರಂಕುಶಶಾಹಿ ಸರ್ಕಾರ ಅಧಿಕಾರದಲ್ಲಿದೆ. ಆದರೆ ಅದು ಪಾಠ ಮಾತ್ರ ಕಲಿಯಲಿಲ್ಲ. ಕೋವಿಡ್ ಎರಡನೇ ಅಲೆ ಹೆಚ್ಚು ಭೀಕರವಾಗಲಿದೆ ಎಂದು ತಜ್ಞರು ಎಚ್ಚರಿಸಿದ್ದಾರೆ. ಆದರೆ, ಕಲ್ಲುಗಳಾದರೂ ಕರಗಬಹುದು. ಮುಖ್ಯ ಮಂತ್ರಿ ಯಡಿಯೂರಪ್ಪರವರ ಕಲ್ಲು ಹೃದಯ ಮಾತ್ರ ಕರಗಲಾರದು ಎಂದು ಅವರೇ ಸಾಬೀತು ಪಡಿಸುತ್ತಿದ್ದಾರೆ.

ಯಡಿಯೂರಪ್ಪರವರಿಗೆ ತಾವು ಚೆನ್ನಾಗಿ ಇರಬೇಕು. ಅವರ ಮಕ್ಕಳು, ಮೊಮ್ಮಕ್ಕಳು ಚೆನ್ನಾಗಿರಬೇಕು. ಅದಕ್ಕಾಗಿ ಅವರು ಅಧಿಕಾರದಲ್ಲಿ ಇರಬೇಕು. ಮತ್ತೆ ಮತ್ತೆ ತಾನೇ ಅಧಿಕಾರಕ್ಕೆ ಬರಬೇಕು. ಗುಂಡ್ಲು ಪೇಟೆಯ ಅವಕಾಶವಂಚಿತ ಜನರು ನ್ಯಾಯಕ್ಕಾಗಿ ಎದ್ದು ನಿಲ್ಲುವುದು ಯಾವಾಗ? ಆ ನತದೃಷ್ಟ ಮಹಿಳೆಯ ಗಂಡನಿಗೆ ಯಾವುದೇ ಕೆಟ್ಟ ಅಭ್ಯಾಸ ಇದ್ದಂತಿಲ್ಲ. ಗ್ರಾಮದ ಸುತ್ತಮುತ್ತ ಎಲ್ಲೂ ಕೂಲಿ ಸಿಗುತ್ತಿಲ್ಲ. ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯ ಕುರಿತು ಆತನಿಗೆ ಯಾವುದೇ ಮಾಹಿತಿ ಇಲ್ಲ. ಉದ್ಯೋಗ ಇಲ್ಲದೆ ಮನೆಗೆ ಬೇಕಾಗುವ ಕನಿಷ್ಠ ದಿನಸಿ ತರಲಾಗುವುದಿಲ್ಲ. ಹಸಿವು ತಾಳಲಾಗುತ್ತಿಲ್ಲ. ಎಲ್ಲಾದರೂ ಕೆಲಸ ಹುಡುಕಿ ತನ್ನ ಹೆಂಡತಿ ಮತ್ತು ಮಗುವನ್ನು ಮನೆಗೆ ಕರೆದುಕೊಂಡು ಹೋಗುವುದಾಗಿ ಆತ ಹೇಳುವಾಗ ಕೇಳುಗರ ಕಣ್ಣು ತೇವಗೊಳ್ಳುತ್ತವೆ. ಮಗುವಿಗೆ ಹಾಲು ಖರೀದಿಸಲೂ ಹಣವಿಲ್ಲ. ಅತ್ತೆ ಮಾವನಿಗೆ ವಯಸ್ಸಾಗಿದೆ ಎಂದು ಕಣ್ಣೀರಿಡುತ್ತಾಳೆ ಆ ತಾಯಿ. ಈಗ ಎರಡನೇ ಅಲೆ ಆರ್ಭಟಿಸುವ ಲಕ್ಷಣಗಳು ಕಾಣುತ್ತಿವೆ. ಇನ್ನೊಂದು ಸುತ್ತಿನ ಕರ್ಫ್ಯೂ, ಲಾಕ್‌ಡೌನ್‌ಗಳ ಹಾವಳಿ ಆರಂಭವಾಗುತ್ತಿದೆ. ಜನರ ಮೇಲೆ ದೌರ್ಜನ್ಯವೆಸಗಿ ಕೋವಿಡ್ ಸೋಂಕನ್ನು ತಡೆಯುವ ನಾಟಕ ಮಾಡುವುದು ಈ ಸರ್ಕಾರದ ಪರಿ ಆಗಿದೆ.

ಕೋವಿಡ್ ಸೋಂಕು ಪರಿಸ್ಥಿತಿ ಕೈಮೀರಿ ಹೋಗುತ್ತಿದೆ ಎಂದು ಸುಪ್ರೀಂ ಕೋರ್ಟ್ ಕಳವಳ ವ್ಯಕ್ತಪಡಿಸಿದೆ. ರಾಜ್ಯಗಳಲ್ಲಿ ಆಕ್ಸಿಜನ್ ಮತ್ತು ಹಾಸಿಗೆಗಳಿಗಾಗಿ ರೋಗಿಗಳ ಹಾಹಾಕಾರ, ನಿತ್ಯ ಎರಡು ಸಾವಿರ ದಾಟುತ್ತಿರುವ ಸಾವಿನ ಸಂಖ್ಯೆಯನ್ನು ಗಮನಿಸಿರುವ ನ್ಯಾಯಾಲಯ ದೇಶದಲ್ಲಿ 'ರಾಷ್ಟ್ರೀಯ ತುರ್ತು ಪರಿಸ್ಥಿತಿ' ಉಂಟಾಗಿದೆ ಎಂದು ಆತಂಕ ವ್ಯಕ್ತಪಡಿಸಿದೆ. ಆದರೆ ಕರ್ನಾಟಕ ಸರ್ಕಾರ ಮಾತ್ರ ಯಾವ ಪರಿಣಾಮಕಾರಿ ಕ್ರಮಗಳನ್ನು ಕೈಗೊಳ್ಳುತ್ತಿಲ್ಲ. ಬದಲಾಗಿ ಜನರನ್ನು ದುರ್ಬಲಗೊಳಿಸುತ್ತದೆ. ಸಾರ್ವಜನಿಕ ಪಡಿತರ ವ್ಯವಸ್ಥೆಯನ್ನು ಬಲಪಡಿಸುವ ಬದಲಾಗಿ ಅಂತ್ಯೋದಯ ಮತ್ತು ಬಿಪಿಎಲ್ ಕಾರ್ಡುದಾರರಿಗೆ ವಿತರಿಸಲಾಗುತ್ತಿದ್ದ ಅಕ್ಕಿಯ ಪ್ರಮಾಣವನ್ನು ಕಡಿತ ಮಾಡಿದೆ.

ಬಿಪಿಎಲ್ ಕಾರ್ಡ್ ಹೊಂದಿದ ಕುಟುಂಬದ ಪ್ರತಿಯೊಬ್ಬ ಸದಸ್ಯನಿಗೆ ಈ ಹಿಂದೆ 5 ಕೆ.ಜಿ. ಅಕ್ಕಿ, 2 ಕೆ.ಜಿ. ಗೋಧಿ ವಿತರಿಸಲಾಗುತಿತ್ತು. ಈಗ ಈ ತಿಂಗಳಿಂದ 2 ಕೆ.ಜಿ. ಅಕ್ಕಿ, 3 ಕೆ.ಜಿ. ರಾಗಿ ಮತ್ತು 2 ಕೆ.ಜಿ. ಗೋಧಿ ನೀಡಲಾಗುತ್ತಿದೆ. ಹೀಗೆ ಪಡಿತರ ಅಕ್ಕಿ ಪ್ರಮಾಣವನ್ನು ಕಡಿತಮಾಡಿ ರಾಜ್ಯ ಬಿಜೆಪಿ ಸರ್ಕಾರ ಬಡವರ ವಿರೋಧಿ ನಿರ್ಣಯವನ್ನು ಕೈಗೊಂಡಿದೆ.

ಬಡವರು, ಕೃಷಿ ಕೂಲಿಕಾರರು ಮತ್ತು ವಿಶೇಷವಾಗಿ ಮಹಿಳೆಯರು ಅಪೌಷ್ಠಿಕತೆಯಿಂದಾಗಿ ನರಳುತ್ತಿರುತ್ತಾರೆ. ಅವರಿಗೆ ಒಳ್ಳೆಯ ಆಹಾರ ದೊರೆಯದಂತಾಗಿ ಅವರಲ್ಲಿ ರೋಗ ನಿರೋಧಕ ಶಕ್ತಿ ವೃದ್ಧಿಯಾಗದೆ ಕೋವಿಡ್ ಅಂತಹ ಸೋಂಕಿಗೆ ಅವರು ಬಹುಬೇಗ ತುತ್ತಾಗುತ್ತಾರೆ. ಕೋವಿಡ್ ಸಾಂಕ್ರಾಮಿಕಕ್ಕೆ ಬಲಿಯಾಗಿ ಪ್ರತಿದಿನ ಗಣನೀಯ ಸಂಖ್ಯೆಯಲ್ಲಿ ಸಾಯುತ್ತಿದ್ದಾರೆ. ಸರ್ಕಾರ ತನ್ನ ನಿರ್ದಯಿ, ನಿರಂಕುಶಶಾಹಿ ಧೋರಣೆಯನ್ನು ಬದಲಾಯಿಸಬೇಕು. ಎಲ್ಲ ಕೃಷಿ ಕೂಲಿಕಾರ ಹಾಗೂ ಇತರ ಗ್ರಾಮೀಣ ಕೆಲಸಗಾರರಿಗೆ ತಿಂಗಳಿಗೆ 10 ಕೆ.ಜಿ. ಅಕ್ಕಿ ಹಾಗೂ ಗೋಧಿಯನ್ನು ಉಚಿತವಾಗಿ ವಿತರಣೆ ಮಾಡಬೇಕು. ಎಲ್ಲ ಬಡವರಿಗೆ ಉಚಿತ ಲಸಿಕೆ ಹಾಗೂ ಅಗತ್ಯ ಔಷಧಿಗಳನ್ನು ನೀಡಬೇಕು. ತೆರಿಗೆ ವ್ಯಾಪ್ತಿಯಿಂದ ಹೊರಗಿರುವ ಬಡ ಕುಟುಂಬಗಳಿಗೆ ತಿಂಗಳಿಗೆ ರೂ. 7500/– ದರದಲ್ಲಿ ಆರ್ಥಿಕ ನೆರವು ನೀಡಬೇಕು. ಇವು ಬಡಜನಗಳ ನ್ಯಾಯಬದ್ಧ ಹಕ್ಕೊತ್ತಾಯಗಳು.

ಈ ಹಕ್ಕೊತ್ತಾಯಗಳಿಗೆ ಕೃಷಿ ಕೂಲಿಕಾರರು ದೇಶಾದ್ಯಂತ ಎಪ್ರಿಲ್ 30 ರಂದು ಪ್ರತಿಭಟನಾ ದಿನವನ್ನು ಆಚರಿಸಲಿದ್ದು ಇತರ ಎಲ್ಲ ಸಾಮೂಹಿಕ ಸಂಘಟನೆಗಳು ಸೌಹಾರ್ದ ಬೆಂಬಲ ನೀಡಬೇಕೆಂದು ಮನವಿ ಮಾಡಲಾಗಿದೆ.

ಕಾರ್ಪೋರೇಟ್ ಕಂಪನಿಗಳ ಲೂಟಿಗೆ ನೆರವಾಗಲು ಪಡಿತರ ಚೀಟಿದಾರರಿಗೆ ರೇಷನ್ ಕಡಿತ – ಸಿಪಿಐ(ಎಂ) ವಿರೋಧ

ಕರ್ನಾಟಕ ಸರಕಾರ ಕೇಂದ್ರ ಸರಕಾರದ ನಿರ್ದೇಶನದಂತೆ ಕಾರ್ಪೋರೇಟ್ ಕಂಪನಿಗಳ ಲೂಟಿಗೆ ದೊಡ್ಡ ಪ್ರಮಾಣದಲ್ಲಿ ನೆರವಾಗುವ ದುರುದ್ದೇಶದಿಂದಲೇ ರಾಜ್ಯದ ಬಡವರಿಗೆ ಅಂದರೇ ಬಿಪಿಎಲ್ ಕಾರ್ಡ್ ದಾರರಿಗೆ ಪಡಿತರ ವ್ಯವಸ್ಥೆಯ ಆಥವಾ ನ್ಯಾಯ ಬೆಲೆ ಅಂಗಡಿಯ ಮೂಲಕ ನೀಡಲಾಗುತ್ತಿದ್ದ ಪಡಿತರವನ್ನು ಫಲಾನುಭವಿಗೆ 10 ಕೇಜಿಯಿಂದ ಈ ಹಿಂದೆ 05 ಕೇಜಿಗೆ ಮತ್ತು ಈಗ ಅದನ್ನು 02 ಕೇಜಿಗೆ ಇಳಿಸಿ ರಾಜ್ಯದ ಬಡವರಿಗೆ ವಂಚನೆ ಎಸಗಿದೆಯೆಂದು ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸವಾದಿ) ಬಲವಾಗಿ ಖಂಡಿಸುತ್ತದೆ. ಇದು, ಅದಾಗಲೇ ಜಾರಿಗೆ ತಂದಿರುವ ಅಗತ್ಯ ವಸ್ತುಗಳ ತಿದ್ದುಪಡಿ ಕಾಯ್ದೆ–2020, ಆಹಾರ ಧಾನ್ಯಗಳನ್ನು/ಪದಾರ್ಥಗಳನ್ನು ಎಥೇಚ್ಛವಾಗಿ ದಾಸ್ತಾನು ಮಾಡಿ ಕಾರ್ಪೋರೇಟ್ ಲೂಟಿಗೆ ಎಲ್ಲ ಗ್ರಾಹಕರನ್ನು ತೆರೆದಿರುವುದಕ್ಕೆ ಪೂರಕವಾಗಿದ್ದು ಕಂಪನಿಗಳ ಲೂಟಿಯನ್ನು ವ್ಯಾಪಕಗೊಳಿಸಲಿದೆಯೆಂದು ಸಿಪಿಐ(ಎಂ) ಬಲವಾಗಿ ಪ್ರತಿರೋಧಿಸುತ್ತದೆ.

ರಾಜ್ಯ ಹಾಗೂ ದೇಶದಲ್ಲಿ ಶೇ. 85 ನಾಗರೀಕರ ತಲಾ ಆದಾಯ ದಿನವೊಂದಕ್ಕೆ 20 ರೂ. ಗಿಂತ ಕಡಿಮೆ ಇರುವಾಗ, 104 ದೇಶಗಳ ಅಪೌಷ್ಟಿಕತೆಯಲ್ಲಿ ನಮ್ಮ ದೇಶದ ಸ್ಥಾನವು ನಾಚಿಕೆ ಗೇಡಿನ 94 ಆಗಿರುವಾಗ, ಅಪೌಷ್ಠಿಕತೆಯನ್ನು ನಿವಾರಿಸಲು ದೇಶದ ಗೋಡೌನ್ ಗಳಲ್ಲಿ ಕೊಳೆಯುತ್ತಿರುವ 42 ಲಕ್ಷ ಟನ್ ಪಡಿತರವನ್ನು ಕಾಪಾಡಿ ವ್ಯಾಪಕವಾಗಿ ಹಂಚಬೇಕಾದ ಕರ್ತವ್ಯವನ್ನು ದುರುದ್ದೇಶದಿಂದಲೇ ಕೈಬಿಟ್ಟು ಬಡಜನತೆಯನ್ನು ಅಪೌಷ್ಠಿಕತೆಯ ಸಾವಿನ ದವಡೆಗೆ ವೇಗವಾಗಿ ತಳ್ಳುವ ನರಹತ್ಯೆಯ ನೀಚ ಕೆಲಸದಲ್ಲಿ ಕೇಂದ್ರ ಹಾಗೂ ರಾಜ್ಯ ಸರಕಾರಗಳು ತೊಡಗಿವೆಯೆಂದು ಸಿಪಿಐ(ಎಂ) ಕಟುವಾಗಿ ವಿಮರ್ಶಿಸುತ್ತದೆ.

ಶ್ರೀ ಯಡಿಯೂರಪ್ಪನವರ ನೇತೃತ್ವದ ಬಿಜೆಪಿ ರಾಜ್ಯ ಸರಕಾರ ಕೇಂದ್ರ ಸರಕಾರ ಹೇರುವ ಎಲ್ಲಾ ಧಾಳಿಗಳನ್ನು ಬಾಯಿ ಮುಚ್ಚಿಕೊಂಡು ಜಾರಿ ಮಾಡುವ ಕಾರ್ಪೊರೇಟ್ ಕಂಪನಿಗಳ ಗುಲಾಮಿ ಸರಕಾರವಾಗಿರುವುದನ್ನು ಇದು ಮತ್ತೊಮ್ಮೆ ಸಾಬೀತು ಪಡಿಸಿದೆ. 2021 ರ ಕೇಂದ್ರ ಸರಕಾರದ ಬಜೆಟ್ ನಲ್ಲಿಯೇ ಆಹಾರದ ಸಹಾಯಧನವನ್ನು 2020 ರ ಬಜೆಟ್ ಗೆ ಹೋಲಿಸಿದರೇ ಶೇ. 41 ರಷ್ಟು ಕಡಿತ ಮಾಡಿದಾಗಲೇ ಯಡಿಯೂರಪ್ಪರವರು ಬಾಯಿ ಮುಚ್ಚಿಕೊಂಡಿದ್ದರು. ಈ ರಾಜ್ಯ ಸರಕಾರಕ್ಕೆ ರಾಜ್ಯದ ಬಡವರು, ದಲಿತರು, ಮಹಿಳೆಯರ ಕುರಿತ ಕಿಂಚಿತ್ತೂ ಕಾಳಜಿ ಇಲ್ಲವೆಂಬುದು ಇದರಿಂದ ಮತ್ತೊಮ್ಮೆ ಸಾಬೀತಾದಂತಾಗಿದೆ.

ರಾಜ್ಯದ ಜನತೆ ಆರ್ಥಿಕ ಬಿಕ್ಕಟ್ಟು ಹಾಗೂ ಕಳೆದ ಮೂರು–ನಾಲ್ಕು ವರ್ಷಗಳಿಂದ ಬರಗಾಲ, ಅತೀವೃಷ್ಟಿ, ಪ್ರವಾಹ, ಕೋವಿಡ್– 19 ಹಾಗೂ ಲಾಕ್ ಡೌನ್ ಗಳಿಂದ ಬಾಧಿತರಾಗಿದೆ.

ಈ ಬಾಧಿತರ ಮೇಲೆ, ಪೆಟ್ರೋಲ್, ಡೀಸೆಲ್, ಗ್ಯಾಸ್, ರಸಾಯನಿಕ ಗೊಬ್ಬರಗಳ ಬೆಲೆ ಏರಿಕೆ ಮತ್ತು ಆಸ್ತಿ ಮತ್ತಿತರೇ ತೆರಿಗೆ ಭಾರಗಳನ್ನು ಈಗಾಗಲೇ ಹೇರಿ ಗಾಯದ ಮೇಲೆ ಬರೆ ಎಳೆಯಲಾಗಿದೆ. ಇದೀಗ ರಾಜ್ಯ ಸರಕಾರ ಪಡಿತರ ಕಡಿತ ಮಾಡಿ ಬರೆ ಎಳೆದ ಗಾಯಕ್ಕೆ ಖಾರ ತುಂಬುವ ಘನಂದಾರಿ ಕೆಲಸ ಮಾಡಿದೆ.

ಈ ಕೂಡಲೇ ಪಡಿತರ ಕಡಿತವನ್ನು ಹಿಂಪಡೆಯುವಂತೆ ಮತ್ತು ತಲಾ ವ್ಯಕ್ತಿಗೆ ಕನಿಷ್ಠ 10 ಕೇಜಿ ಸಮಗ್ರ ಪಡಿತರ ಒದಗಿಸುವಂತೆ ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸವಾದಿ) ಕರ್ನಾಟಕ ರಾಜ್ಯ ಸಮಿತಿ ಮುಖ್ಯ ಮಂತ್ರಿಗಳನ್ನು ಬಲವಾಗಿ ಒತ್ತಾಯಿಸುತ್ತದೆ.

ಅದೇ ರೀತಿ, ರಾಜ್ಯದ ನಾಗರೀಕರು ಬಡವರು, ಸಂಘ ಸಂಸ್ಥೆಗಳು, ಪಕ್ಷದ ಘಟಕಗಳು ಸರಕಾರಗಳ ಈ ದೌರ್ಜನ್ಯವನ್ನು ಬಲವಾಗಿ ಪ್ರತಿರೋಧಿಸುವಂತೆ ಸಿಪಿಐ(ಎಂ) ಕರೆ ನೀಡುತ್ತದೆ.

ಸರ್ಕಾರದ ನೆರವು ಪರಿಹಾರ ಕಳಚಿ ಹಾಕಿ ಬಿಜೆಪಿ ನೆರವಿಗೆ ಅನುವು: ಸಿಪಿಐ(ಎಂ) ಟೀಕೆ

ಕೇಂದ್ರ ಮತ್ತು ರಾಜ್ಯ ಬಿಜೆಪಿ ಸರ್ಕಾರಗಳು ಸಂವಿಧಾನಾತ್ಮಕವಾಗಿ ತಾವು ನಿರ್ವಹಿಸಬೇಕಾದ ಕರ್ತವ್ಯಗಳನ್ನು ನಿರ್ವಹಿಸದೆ ಕೈಚೆಲ್ಲಿ ಜನತೆಯ ಸಾವು ನೋವಿಗೆ ಕಾರಣವಾಗಿರುವಾಗಲೆ ಬಿಜೆಪಿಯ ರಾಜಕೀಯ ನೆರವಿಗೆ ಜನತೆಯನ್ನು ದೂಡಲು ಅನುವುಗೊಳಿಸುತ್ತಿದೆ ಎಂದು ಭಾರತ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸವಾದಿ) ಬೆಂಗಳೂರು ಉತ್ತರ ಮತ್ತು ದಕ್ಷಿಣ ಜಿಲ್ಲಾ ಸಮಿತಿಗಳು ಟೀಕಿಸಿವೆ.

ಕೋವಿಡ್ ಎರಡನೆ ಅಲೆ ಬರುತ್ತದೆ ಎಂಬ ತಜ್ಞರ ಅಭಿಪ್ರಾಯಗಳನ್ನು ಕಡೆಗಣಿಸಿ ಮಾಡಿಕೊಳ್ಳಬೇಕಿದ್ದ ಅಗತ್ಯ ತಯಾರಿಗಳನ್ನು ಮಾಡಿಕೊಳ್ಳದೆ ಜನತೆಯನ್ನು ಇಂತಹ ದುಸ್ಥಿತಿಗೆ ಕೇಂದ್ರ ಮತ್ತು ರಾಜ್ಯ ಬಿಜೆಪಿ ಸರ್ಕಾರಗಳು ದೂಡಿವೆ. ತನ್ನ ರಾಜಕೀಯ ಹಿತಾಸಕ್ತಿಗಾಗಿ ಕೇಂದ್ರ, ರಾಜ್ಯ ಮತ್ತು ಬಿಬಿಎಂಪಿ ಬೆಜೆಟ್ ಗಳನ್ನು ಬಳಸಿ ಕೊಂಡ ಬಿಜೆಪಿ ಸರ್ಕಾರಗಳು ಸಾರ್ವಜನಿಕ ಆಸ್ಪತ್ರೆಗಳನ್ನು ಆರೋಗ್ಯ ವ್ಯವಸ್ಥೆಯನ್ನು ಬಲಪಡಿಸಲು ಅದರ ಸಾಮರ್ಥ್ಯವನ್ನು ಹೆಚ್ಚಿಸುವ ಯಾವುದೆ ಕ್ರಮ ವಹಿಸಲಿಲ್ಲ. ಅದರ ಪರಿಣಾಮಗಳನ್ನು ಇಂದು ಜನತೆ ಎದುರಿಸಬೇಕಾಗಿ ಬಂದಿದೆ.

ಕೋವಿಡ್ ನಿರ್ವಹಣೆಗೆ ಅಗತ್ಯ ಹಣ ಮೀಸಲಿಡದೆ. ಅದಕ್ಕೆ ಅಗತ್ಯವಾದ ಔಷಧಿ, ಆಮ್ಲಜನಕ, ಬೆಡ್ ಗಳು, ಐಸಿಯು, ವೆಂಟಿಲೇಟರ್‌ಗಳನ್ನು ಹೆಚ್ಚಿಸಲು ಯಾವುದೇ ಕ್ರಮ ವಹಿಸಲಿಲ್ಲ. ಮಾತ್ರವಲ್ಲದೆ ಔಷಧಿಯು ಕಾಳಸಂತೆಯಲ್ಲಿ ಮಾರಾಟವಾಗುವರೆಗೆ ಸುಮ್ಮನಿದ್ದು, ಲಸಿಕೆಯನ್ನು ಉಚಿತವಾಗಿ ನೀಡದೆ ರಾಜ್ಯಗಳು ಕೇಂದ್ರ ಸರ್ಕಾರದ ಖರೀದಿ ದರಕ್ಕಿಂತ ಎರಡುವರೆ ಪಟ್ಟು ಹೆಚ್ಚು ದರ ನೀಡಿ ಖರೀದಿಸುವ ಅನಿವಾರ್ಯತೆಗೆ ದೂಡಿರುವ ಬಿಜೆಪಿ ಕೇಂದ್ರ ಸರ್ಕಾರ ಜನತೆಗೆ ದ್ರೋಹ ಎಸಗಿದೆ.

ಪಿಎಂ ಕೇರ್ಸ್ ನಿಧಿಗೆ ಬೆಂಗಳೂರು ಮತ್ತು ರಾಜ್ಯದ ಜನತೆ ಅಪಾರ ನಿಧಿ ನೀಡಿದ್ದಾರೆ ಆದರೂ ಅದರಿಂದ ರಾಜ್ಯದ ಸಾರ್ವಜನಿಕ ಆರೋಗ್ಯ ಬಲಪಡಿಸಲು ಯಾವುದೇ ನಿಧಿ ನೀಡದೆ ಆಮ್ಲಜನಕ ಉತ್ಪಾದನೆಗು ಅನುಗೊಳಿಸದೆ ವಂಚಿಸಿದೆ ಎಂದು ಸಿಪಿಐ(ಎಂ) ಖಂಡಿಸಿದೆ.

ರಾಜ್ಯ ಬಜೆಟ್ ನಲ್ಲಿ ಜಾತಿವಾರು ನಿಗಮ/ ಮಂಡಳಿ ರಚಿಸಿ ಸಾವಿರಾರು ಕೋಟಿ ಹಣ ಮೀಸಲಿಟ್ಟಿರುವ ಬಿಜೆಪಿ ಸರ್ಕಾರ ಅದೆ ಹಣವನ್ನು ಸಾರ್ವಜನಿಕ ಆರೋಗ್ಯಕ್ಕೆ ಮೀಸಲಿಟ್ಟಿದ್ದರೆ ಇಂದು ಎಲ್ಲಾ ಜಾತಿಯ ಜನರ ಜೀವ ಉಳಿಯುತ್ತಿದ್ದವು ಎಂಬುದನ್ನು ಜನತೆ ಅರಿಯಬೇಕು ಹಾಗು ಇದೀಗ ಸರ್ಕಾರಿ ಯಂತ್ರದ ಕ್ರಮಗಳನ್ನು ನಿಷ್ಕ್ರಿಯಗೊಳಿಸುತ್ತ –ವಿಫಲಗೊಳಿಸುತ್ತ ಬಿಜೆಪಿಯ ರಾಜಕೀಯ ಸಂಘಟನೆಗಳ ಮೂಲಕ ನೆರವಿನ ಮಾತುಗಳನ್ನು ಪ್ರಚುರ ಪಡಿಸುತ್ತಿರುವ ಅವರ ರಾಜಕೀಯ ಷಡ್ಯಂತ್ರವನ್ನು ಮನಗಾಣಬೇಕೆಂದು ಸಿಪಿಐ(ಎಂ) ಜನತೆಯಲ್ಲಿ ಮನವಿ ಮಾಡಿದೆ.



ಭಾರತದಲ್ಲಿ ಕೋವಿಡ್ ಲಸಿಕೆ ಉತ್ಪಾದನೆ ಮತ್ತು ಪೂರೈಕೆ ಪ್ರಮಾಣ ಹೇಗಿದೆ?

ಭಾರತದಲ್ಲಿ ನಿರೀಕ್ಷೆ ಮೀರಿ ವ್ಯಾಪಕವಾಗಿ ಹಬ್ಬುತ್ತಿರುವ ಕೊರೊನಾ ಸೋಂಕು ಜನರನ್ನು ಚಿಂತಿಗೀಡು ಮಾಡೀದೆ. ಕೊರೊನಾ ಚಿಕಿತ್ಸೆಯಲ್ಲಿ ಬಳಸಲಾಗುತ್ತಿರುವ ಲಸಿಕೆಯೆ ಕೊರತೆಯೂ ಎದ್ದು ಕಾಣುತ್ತಿದೆ? ಮೇ 01 ರಿಂದ 18 ವರ್ಷದ ಮೇಲ್ಪಟ್ಟವರೆಲ್ಲರಿಗೂ ಲಸಿಕೆ ಪಡೆಯಲು ಅವಕಾಶ ನೀಡಲಾಗಿದೆ. ಇತ್ತ ಉತ್ಪಾದನೆ ಕೊರತೆ ನಡುವೆ ಲಸಿಕೆ ಎಲ್ಲರಿಗೂ ಲಭ್ಯವಾಗಬಹುದಾ? ಲಸಿಕೆ ಬಗ್ಗೆ ಮೂಡಿರುವ ಅನುಮಾನಗಳನ್ನು ನಿವಾರಿಸಲು ಕೇಂದ್ರಸರಕಾರ ಇಲ್ಲಿಯವರೆಗೆ ಮೂಡಿಸಿರುವ ಜನಾಗೃತಿ ಏನು? ಎಂಬ ಪ್ರಶ್ನೆ ಮೂಡುತ್ತಿದೆ.

ಕೋವಿಡ್–19 ಲಸಿಕೆ ಕಾರ್ಯಕ್ರಮದಲ್ಲಿ ಭಾರತವು ಜಗತ್ತಿನಲ್ಲಿ ಮೂರನೇ ಸ್ಥಾನದಲ್ಲಿದೆ. ಆದರೆ ಈ ಲಸಿಕೆ ಕಾರ್ಯಕ್ರಮದ ಪ್ರಗತಿಯನ್ನು ಸೂಕ್ಷ್ಮವಾಗಿ ಗಮನಿಸಿದರೆ, ಭಾರತದಲ್ಲಿ ಈ ಕಾರ್ಯಕ್ರಮ ಮಂದಗತಿಯಲ್ಲಿ ಸಾಗುತ್ತಿದೆ ಎಂಬ ಅಂಶ ನಿಶ್ಚಯವಾಗುತ್ತದೆ. ಭಾರತದಲ್ಲಿ ಈವರೆಗೆ ಕೇವಲ 12 ಕೋಟಿ ಲಸಿಕೆಗಳನ್ನು ಮಾತ್ರ ಹಾಕಲಾಗಿದೆ. ಅಂದ್ರೆ ಶೇ 11 ರಷ್ಟು ಜನರಿಗೆ ಮಾತ್ರ ಲಸಿಕೆ ಹಾಕಲಾಗಿದೆ. 91, ಲಕ್ಷದ 5 ಸಾವಿರದ 429 ಜನ ಆರೋಗ್ಯ ಕಾರ್ಯಕರ್ತರಿಗೆ ಮೊದಲ ಡೋಸ್ ನೀಡಲಾಗಿದೆ. 56 ಲಕ್ಷದ 70 ಸಾವಿರದ 818 ಜನ ಆರೋಗ್ಯ ಕಾರ್ಯಕರ್ತರು 2 ನೇ ಡೋಸ್ ತೆಗೆದುಕೊಂಡಿದ್ದಾರೆ.

ಕೊರೊನಾ ವಾರಿಯರ್ಸ್ ಗಳಲ್ಲಿ ಮೊದಲ ಡೋಸ್ ಪಡೆದವರ ಸಂಖ್ಯೆ 1 ಕೋಟಿ, 11 ಲಕ್ಷದ 44 ಸಾವಿರದ 69 ಇದ್ರೆ, ಎರಡನೇ ಡೋಸ್ ಪಡೆದವರ ಸಂಖ್ಯೆ 54 ಲಕ್ಷದ 8 ಸಾವಿರದ 572. 65 ವರ್ಷ ಮೇಲ್ಪಟ್ಟವರು ಪಡೆದ ಮೊದಲ ಡೋಸ್ ಸಂಖ್ಯೆ 4 ಕೋಟಿ, 49 ಲಕ್ಷದ 35 ಸಾವಿರದ 11, ಎರಡನೇ ಡೋಸ್ ಪಡೆದವರ ಸಂಖ್ಯೆ 34 ಲಕ್ಷದ 88 ಸಾವಿರದ 257, 45 ವರ್ಷ ಮೇಲ್ಪಟ್ಟವರಲ್ಲಿ ಮೊದಲ ಡೋಸ್ ಪಡೆದವರ ಸಂಖ್ಯೆ 3 ಕೋಟಿ 92 ಲಕ್ಷದ 23 ಸಾವಿರದ 975, ಎರಡನೇ ಡೋಸ್ ಪಡೆದವರ ಸಂಖ್ಯೆ 9 ಲಕ್ಷದ 61 ಸಾವಿರದ 610 ಇದೆ.

ಲಸಿಕೆ ಕಾರ್ಯಕ್ರಮ ಆರಂಭವಾಗಿ 100 ದಿನ ಕಳೆದ ಬಳಿಕವೂ ಭಾರತದ ಪ್ರಗತಿ ಈ ನಿಟ್ಟಿನಲ್ಲಿ ಕುಂಟುತ್ತಾ ಸಾಗಿದೆ. 12 ಕೋಟಿ ಜನರಿಗೆ ಲಸಿಕೆಯನ್ನು ವಿತರಿಸಲು ಭಾರತ ಬರೋಬ್ಬರಿ 100 ದಿನಗಳನ್ನು ತೆಗೆದುಕೊಂಡಿದೆ. ಭಾರತದಲ್ಲಿ ಒಟ್ಟು ಜನಸಂಖ್ಯೆ 138 ಕೋಟಿ ಇದ್ದು ಇದರಲ್ಲಿ ಲಸಿಕೆ ಪಡೆಯುವವರ ಸಂಖ್ಯೆ ಎಷ್ಟಿದೆ ಎಂಬುದನ್ನು ನೋಡೋಣ, 18 ರಿಂದ 65 ವರ್ಷ ವಯಸ್ಸಿನವರ ಸಂಖ್ಯೆ ಶೇ 67 ರಷ್ಟಿದೆ. 65 ವರ್ಷ ವಯಸ್ಸು ಮೇಲ್ಪಟ್ಟವರ ಸಂಖ್ಯೆ ಶೇ 6. 38 ರಷ್ಟಿದೆ. ಒಟ್ಟು ಲಸಿಕೆ ಪಡೆಯುವವರ ಪ್ರಮಾಣ ಎಷ್ಟಿದೆ ಅಂದ್ರೆ ಶೇ 74 ರಷ್ಟಿದೆ ಅಂದ್ರೆ ಅಂದಾಜು 95 ಕೋಟಿ ಜನರಿಗೆ ಲಸಿಕೆಯನ್ನು ಉತ್ಪಾದನೆ ಮಾಡಬೇಕಿದೆ.

ಲಸಿಕೆ ಉತ್ಪಾದನಾ ಪ್ರಮಾಣ ಹಾಗೂ ಬಳಕೆ ಪ್ರಮಾಣದ ನಡುವಣ ಹೆಚ್ಚುತ್ತಿರುವ ಅಂತರ, ತುರ್ತು ಕ್ರಮದ ಅನಿವಾರ್ಯತೆಯನ್ನು ಎತ್ತಿ ತೋರಿಸುತ್ತದೆ. ಭಾರತದಲ್ಲಿ ಸದ್ಯ, ದಿನಕ್ಕೆ 30 ಲಕ್ಷ ಡೋಸ್ ಲಸಿಕೆಯ ಬೇಡಿಕೆ ಇದೆ. ಅಂದರೆ ತಿಂಗಳಿಗೆ 9 ಕೋಟಿ ಡೋಸ್ ನ ಅಗತ್ಯವಿದೆ. ಆದರೆ ಭಾರತದಲ್ಲಿ ಇಲ್ಲಿಯವರೆಗೆ ಕೋವಿಶೀಲ್ಡ್ ಲಸಿಕೆ ಒಂದು ತಿಂಗಳಲ್ಲಿ 7 ಕೋಟಿ ಡೋಸ್ ಉತ್ಪಾದನೆಯನ್ನು ಮಾಡಿದ್ದರೆ, ಕೋವ್ಯಾಕ್ಸಿನ್ 40 ಕೋಟಿ ಡೋಸ್ ನ್ನು ಉತ್ಪಾದನೆ ಮಾಡಿದೆ. ಈ ಅಂತರವನ್ನು ಕಡಿಮೆ ಮಾಡಿಕೊಳ್ಳಲು ಪರದಾಡುವ ಬೆನ್ನಲ್ಲಿಯೇ ಈಗ ಅಮೇರಿಕಾ ಲಸಿಕಾ ಉತ್ಪಾದನೆಗೆ ಬೇಕಾಗಿರುವ ಕಚ್ಚಾ ಸಾಮಗ್ರಿಗಳ ರಫ್ತಿಗೆ ಅಮೇರಿಕಾ ನಿಷೇಧವನ್ನು ಹೇರಿದೆ.

ಲಸಿಕೆ ಉತ್ಪಾದನಯೇ ಸಂಕೀರ್ಣ ಪ್ರಕ್ರಿಯೆ, ಇದಕ್ಕೆ ಬೇಕಾಗಿರುವ ಕಚ್ಚಾ ವಸ್ತುಗಳು, ಬಿಡಿಭಾಗಗಳ ಸರಣಿಯನ್ನು ಹೊಂದಿಸಿಕೊಳ್ಳಬೇಕು. ಡಬ್ಲೂ.ಎಚ್.ಓ ಪ್ರಕಾರ 9 ಸಾವಿರ ವಿವಿಧ ಕಚ್ಚಾ ಸಾಮಗ್ರಿಗಳನ್ನು ಬಳಸಲಾಗುತ್ತಿದೆ. ಪ್ರಮುಖವಾಗಿ ಬೇಕಿರುವ ಫಿಲ್ಟರ್, ಸೊಲ್ಯೂಷನ್, ಪ್ಲಾಸ್ಟಿಕ್ ಬ್ಯಾಗ್‌ಗಳು ಅಮೆರಿಕದಿಂದಲೇ ಬರಬೇಕಿದೆ. ಆದರೆ, ರಕ್ಷಣಾ ಉತ್ಪನ್ನಗಳ ಕಾಯ್ದೆಯಡಿ ಅಮೆರಿಕ ಇವುಗಳ ರಫ್ತಿಗೆ ನಿರ್ಬಂಧ ಹೇರಿದೆ' ಎಂದಿದೆ. ಇದರೊಂದಿಗೆ ಕೋವಿಡ್ 19 ಲಸಿಕೆ ಉತ್ಪಾದನೆಗೆ ಅಮೇರಿಕಾದ ಅವಲಂಬನೆಯ ತೀವ್ರತೆಯನ್ನು ಇದು ಎತ್ತಿ ತೋರಿಸುತ್ತದೆ. ಕೂಡಲೆ ಉಲ್ಬಣಗೊಂಡಿರುವ ಸಮಸ್ಯೆಯನ್ನು ಬಗೆಹರಿಸಿಕೊಳ್ಳಲು ಕೇಂದ್ರ ಸರಕಾರ ದಿಟ್ಟ ಹೆಜ್ಜೆಯನ್ನು ಹಾಕಬೇಕಿದೆ.

ಇದರ ಜೊತೆಗಿನ ಇನ್ನೊಂದು ಸಮಸ್ಯೆ ಎಂದರೆ, ಸರ್ಕಾರದಿಂದ ಆದ್ಯತೆಯ ಮೇರೆಗೆ ಗುರುತಿಸಲ್ಪಟ್ಟ ಹಲವಾರು ಮಂದಿ ಈ ಲಸಿಕೆ ತೆಗೆದುಕೊಳ್ಳಲು ಹಿಂಜರಿಯುತ್ತಿರುವುದು. ಅವರಲ್ಲಿನ ಅಂಜಿಕೆಗಳು, ಅನುಮಾನಗಳು, ಅವರನ್ನು ಲಸಿಕೆ ತೆಗೆದುಕೊಳ್ಳದಂತೆ ಮಾಡಿವೆ. ಹೀಗಾಗಿ, ಲಸಿಕೆ ಶಿಬಿರಗಳತ್ತ ತುಂಬಾ ಜನ ಹೆಜ್ಜೆ ಇಡುತ್ತಿಲ್ಲ. ಅನೇಕ ವೈದ್ಯರು, ಶಾಸಕರು, ಸಚಿವರುಗಳು ಲಸಿಕೆ ಹಾಕಿಸಿಕೊಂಡಿಲ್ಲ ಎಂಬ ಮಾಹಿತಿಗಳು ಲಭ್ಯವಾಗುತ್ತಿವೆ. ಇದು ಲಸಿಕೆಯ ಸುತ್ತ ಎದ್ದಿರುವ ಪ್ರಶ್ನೆಗಳ ಹುತ್ತ ಬೆಳೆಯುವಂತೆ ಮಾಡುತ್ತದೆ.

ಆರಂಭದಿಂದಲೂ ಲಸಿಕೆಯನ್ನು ಯಾರು ಪಡೆಯಬೇಕು, ಎಲ್ಲರೂ ಪಡೆಯಬೇಕಾ, ಯಾವ ವಯಸ್ಸಿನವರು ಪಡೆಯಬೇಕು, ಇತರೆ ರೋಗ ಇರುವವರು ಪಡೆಯಬಹುದಾ ಎಂಬೆಲ್ಲ ಪ್ರಶ್ನೆಗಳಿದ್ದವು ಇಲ್ಲಿಯವರೆಗೆ ಕೇಂದ್ರ ರಾಜ್ಯ ಸರಕಾರಗಳು ಆ ಸಮಸ್ಯೆಗಳನ್ನು ನಿವಾರಿಸಿ ಜಾಗೃತಿ ಮೂಡಿಸುವಲ್ಲಿ ಸಂಪೂರ್ಣವಾಗಿ ವಿಫಲರಾದ ಕಾರಣ ಲಸಿಕೆಯ ಬಗ್ಗೆ ಜನರಿಗೆ ಸರಿಯಾದ ತಿಳುವಳಿಕೆ ಬಂದಿಲ್ಲ. ಹಾಗಾಗಿ ಎಲ್ಲರು ಲಸಿಕೆ ತೆಗೆದುಕೊಳ್ಳುವಂತೆ ಮಾಡುವುದು ಸರ್ಕಾರದ ಮುಂದಿನ ಇನ್ನೊಂದು ದೊಡ್ಡ ಸವಾಲು ಆಗಿದೆ.

ದೇಶದಲ್ಲಿ 10 ಕ್ಕೂ ಹೆಚ್ಚು ರಾಜ್ಯಗಳು ಹೆಚ್ಚಿನ ಲಸಿಕೆ ವಿತರಿಸುವಂತೆ ಕೇಂದ್ರ ಸರಕಾರಕ್ಕೆ ಒತ್ತಾಯವನ್ನು ಮಾಡುತ್ತಿವೆ. ಕೊರೊನಾ ವ್ಯಾಕ್ಸಿನ್ ತಯಾರಿಕೆಗೆ ವೇಗ ನೀಡಲು ಕೇಂದ್ರ ಸರ್ಕಾರ ಭಾರತ್ ಬಯೋಟೆಕ್ ಮತ್ತು ಸೀರಮ್ ಇನ್ ಸ್ಟಿಟ್ಯೂಟ್‌ಗೆ ಒಟ್ಟು 4,500 ಕೋಟಿ ಹಣ ಬಿಡುಗಡೆ ಮಾಡಿದೆ. ಭಾರತ್ ಬರೋಟೆಕ್‌ಗೆ 1,500 ಕೋಟಿ ಹಾಗೂ ಸೀರಮ್ ಇನ್‌ಸ್ಟಿಟ್ಯೂಟ್‌ಗೆ 3,000 ಕೋಟಿ ರೂಗಳನ್ನು ಕೇಂದ್ರ ಸರ್ಕಾರ ಮುಂಗಡವಾಗಿ ಬಿಡುಗಡೆ ಮಾಡಿದೆ ಎನ್ನಲಾಗುತ್ತಿದೆ. ಇದು ಖುಷಿಯ ವಿಚಾರ, ಇಷ್ಟೆ ಸಾಕಾಗುವುದಿಲ್ಲ. ತಕ್ಷಣವೇ ಸಾರ್ವಜನಿಕ ವಲಯದ ಔಷಧಿ ತಯಾರಕಾ ಸೌಕರ್ಯಗಳನ್ನೆಲ್ಲವನ್ನೂ ಲಸಿಕೆ ಉತ್ಪಾದನೆಗೆ ಕಲೆ ಹಾಕಲು ಮುಂದಾಗಬೇಕಿದೆ.

ತಮಿಳುನಾಡಿನಲ್ಲಿ ಸಾರ್ವಜನಿಕ ವಲಯದಲ್ಲಿರುವ ಸೌಕರ್ಯಗಳಲ್ಲಿ ಒಂದಾದ 'ಸಮಗ್ರ ಲಸಿಕೆ ಸಂಕೀರ್ಣ'(ಇಂಟಿಗ್ರೇಟೆಡ್ ವ್ಯಾಕ್ಸೀನ್ ಕಾಂಪ್ಲೆಕ್ಸ್–ನ್ನು 600 ಕೋಟಿ ರೂ ವೆಚ್ಚದಲ್ಲಿ ನಿರ್ಮಿಸಿದ್ದರೂ, ಅದಿನ್ನೂ ಬಳಕೆಯಾಗದೆ ಬಿದ್ದಿದೆ. ಲಸಿಕೆಗಳ ಬೇಡಿಕೆ ಮತ್ತು ಪೂರೈಕೆಯಲ್ಲಿನ ಅಂತರವನ್ನು ತುಂಬಲು ಇಂತಹ ಎಲ್ಲ ಸೌಲಭ್ಯಗಳನ್ನು ಗರಿಷ್ಠ ಪ್ರಮಾಣದಲ್ಲಿ ಬಳಸಿಕೊಳ್ಳಬೇಕಾಗಿದೆ.

ಸರಕಾರ ಲಸಿಕೆ ತಯಾರಿಕೆಗೆ ಬಜೆಟಿನಲ್ಲಿ ನಮೂದಿಸಿರುವ ಹಣ 35000 ಕೋಟಿ ರೂ. ಗಳನ್ನು ತಕ್ಷಣವೇ ವೆಚ್ಚ ಮಾಡುವುದು ಅಗತ್ಯವಾಗಿದೆ. ಕೋವಿಡ್–19 ಚಿಕಿತ್ಸೆಯಲ್ಲಿ ಬಳಸುವ ಲಸಿಕೆಗಳು ಮತ್ತು ಔಷಧಿಗಳ ಲಭ್ಯತೆ ಮತ್ತು ಹಂಚಿಕೆಯ ಬಗ್ಗೆ ಸಾರ್ವಜನಿಕರಲ್ಲಿ ವಿವಿಧ ಸಂದೇಹಗಳು ಮತ್ತು ಆತಂಕಗಳು ಎದ್ದಿರುವುದರಿಂದ ಅವುಗಳ ಲಭ್ಯತೆ ಮತ್ತು ಹಂಚಿಕೆಯನ್ನು ಪಾರದರ್ಶಕವಾಗಿ ಮಾಡಬೇಕು ಅಗತ್ಯ ಔಷಧಿಗಳ ಕಳ್ಳ ದಾಸ್ತಾನು ಮತ್ತು ಕಾಳಸಂತೆಯ ವಿರುದ್ಧ ಕಟ್ಟುನಿಟ್ಟಾದ ಕ್ರಮಗಳನ್ನು ಜಾರಿ ಮಾಡಬೇಕು. ಲಸಿಕೆಯನ್ನು ಮೇ 01 ರಿಂದ ಮುಕ್ತ ಮಾರುಕಟ್ಟೆಗೆ ಬಿಡಲಾಗಿದೆ. ಅಲ್ಲಿ ಭ್ರಷ್ಟಾಚಾರಕ್ಕೆ ಹೆಚ್ಚು ಅವಕಾಶವಾಗದಂತೆ ನೋಡಿಕೊಳ್ಳಬೇಕಿದೆ.

ಕೇಂದ್ರ ಸರಕಾರದ ಲಸಿಕೆ ವಿತರಣಾ ಶೈಲಿಗೆ ಆರ್ಥಿಕ ತಜ್ಞ ಮತ್ತು ಕೇರಳ ಯೋಜನಾ ಆಯೋಗದ ಸದಸ್ಯ ಪ್ರೊ. ರಾಮ ಕುಮಾರ್ ಕಳವಳ ವ್ಯಕ್ತಪಡಿಸಿದ್ದಾರೆ. ಮೂಲಭೂತವಾಗಿ ಭಾರತ ಸರಕಾರ ರಾಜ್ಯಗಳಿಗೆ ಲಸಿಕೆಗಳನ್ನು ಖಾತ್ರಿಪಡಿಸುವ ತನ್ನ ಹೊಣೆಗಾರಿಕೆಯಿಂದ ಹಿಂದಕ್ಕೆ ಸರಿದಿದೆ. ಕಳೆದ ನಾಲ್ಕು ತಿಂಗಳಲ್ಲಿ ಲಸಿಕೆ ಕೊರತೆಯನ್ನು ನಿರ್ಮಿಸಿದ ಕೇಂದ್ರ ಸರಕಾರ ಈಗ ರಾಜ್ಯ ಸರಕಾರಗಳಿಗೆ ಲಸಿಕೆ ತಯಾರಕರಿಂದ ನೇರವಾಗಿಯೇ ಖರೀದಿಸಿ ಎಂದು ಹೇಳುತ್ತಿದೆ. ಮೇ 1ರಿಂದ ಲಸಿಕೆಗಳ ಕೊರತೆಯಾದರೆ, ಅದಕ್ಕೆ ರಾಜ್ಯ ಸರಕಾರಗಳೇ ಹೊಣೆಯಾಗುತ್ತವೆ. ಕೇಂದ್ರ ಸರಕಾರದ ಹೊಣೆ ಕೇವಲ ಮೊದಲ 30 ಕೋಟಿ ಆದ್ಯತೆಯ ವಿಭಾಗಗಳಿಗೆ ಉಚಿತವಾಗಿ ಲಸಿಕೆ ಹಾಕಿಸುವಷ್ಟಕ್ಕೇ ಸೀಮಿವಾಗುತ್ತದೆ. ಉಳಿದವರೆಲ್ಲರೂ ಈಗ ತೆರುವುದಕ್ಕಿಂತ ಹೆಚ್ಚಿನ ಬೆಲೆ ತೆತ್ತು ಲಸಿಕೆ ಹಾಕಿಸಿಕೊಳ್ಳಬೇಕಾಗುತ್ತದೆ ಎಂದು ಪ್ರೊ.ರಾಮ ಕುಮಾರ್ ಆರೋಪಿಸಿದ್ದಾರೆ.

ಈ ವೇಗದಲ್ಲಿ ಲಸಿಕೆ ನೀಡುತ್ತಾ ಹೋದರೆ, ದೇಶದ ಎಲ್ಲಾ ನಾಗರಿಕರಿಗೆ ಲಸಿಕೆ ನೀಡಲು ಸುಮಾರು ಐದು ವರ್ಷಗಳೇ ಬೇಕಾಗಬಹುದು. ಅದರಲ್ಲೂ ಇದು ಗ್ರಾಮೀಣ ಭಾಗದ ಜನರಿಗೆ ತಲುಪಲು ತುಂಬಾ ಸಮಯ ತೆಗೆದುಕೊಳ್ಳಬಹುದು. ಹಾಗಾಗಿ ಈಗ ಎದುರಾಗಿರುವ ಆರೋಗ್ಯ ಬಿಕ್ಕಟ್ಟನ್ನು ಕೇಂದ್ರ ಸರಕಾರ ಇತರ ರಾಜ್ಯಗಳ ಜೊತೆ ವಿಶ್ವಾಸವನ್ನು ಬೆಳಿಸಿಕೊಂಡು, ತಾರತಮ್ಯ ಮಾಡದ ಕೊರೊನಾ ವಿರುದ್ಧ ಹೋರಾಟವನ್ನು ಮಾಡಲು ಮುಂದಾಗಬೇಕಿದೆ.

ವರದಿ: **ಗುರುರಾಜ ದೇಸಾಯಿ**

ಮಂಗಳೂರಿನಲ್ಲಿ ಕಟ್ಟಡ ಕಾರ್ಮಿಕರ ಪ್ರತಿಭಟನೆ

ವರದಿ: ವಾ.ಉ.

ಕಟ್ಟಡ ಕಾರ್ಮಿಕರ ಸವಲತ್ತುಗಳ ವಿತರಣೆಯಲ್ಲಿ ನಿರಾಕರಣೆ ಹಾಗೂ ಮೀನಾಮೇಷ ಎಣಿಸುತ್ತಿರುವುದು ಅನ್ಯಾಯ ಎಂದು ಸಿಐಟಿಯು ದ.ಕ.ಜಿಲ್ಲಾ ಸಮಿತಿಯ ಅಧ್ಯಕ್ಷರಾದ ಜೆ.ಬಾಲಕೃಷ್ಣ ಶೆಟ್ಟಿಯವರು ಆಕ್ರೋಶ ವ್ಯಕ್ತಪಡಿಸಿ ಮಾತನಾಡಿದರು. ದಿನಾಂಕ 19–04–2021 ರಂದು ಸಹಾಯಕ ಕಾರ್ಮಿಕ ಆಯುಕ್ತರ ಕಚೇರಿ ಮುಂದುಗಡೆ ನಡೆದ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಪ್ರತಿಭಟನಾ ಪ್ರದರ್ಶನವನ್ನು ಉದ್ದೇಶಿಸಿ ಮಾತನಾಡುತ್ತಿದ್ದರು. ಅವರು ಮುಂದುವರಿದು ಕೊರೋನಾ ಪರಿಹಾರ ಮೊತ್ತ ರೂ.5,000/–ವನ್ನು ಕಟ್ಟಡ ಕಾರ್ಮಿಕರ ಸಮುದಾಯಕ್ಕೆ ಬಾಕಿ ಇರಿಸಿಕೊಂಡಿರುವ ಸರ್ಕಾರದ ನೀತಿ ಖಂಡನೀಯ. ಕಲ್ಯಾಣ ಮಂಡಳಿಯಲ್ಲಿ ಕಟ್ಟಡ ಕಾರ್ಮಿಕರ ಕೋಟಿಗಟ್ಟಲೆ ಹಣ ಇರುವಾಗ ಈ ಹಣವನ್ನು ನೀಡದಿರುವುದು ಸರಿಯಾದ ವಿಧಾನ ಅಲ್ಲ. 2017 ರಿಂದ ವಿದ್ಯಾರ್ಥಿ ವೇತನ, ಮದುವೆ ಸಹಾಯ ಧನ, ಪಿಂಚಣಿ ಬಾಕಿ ಮೊತ್ತ, ಮರಣ ಪರಿಹಾರ ನಿಧಿಯನ್ನು ಇನ್ನೂ ನೀಡದಿರುವುದು ಕಾರ್ಮಿಕರ ಆಕ್ರೋಶಕ್ಕೆ ಕಾರಣವಾಗಿದೆ ಎಂದ ಅವರು, ಕೊರೋನಾ ಲಾಕ್‌ಡೌನ್ ಅವಧಿಯಲ್ಲಿ ಕಾರ್ಪೊರೇಟ್ ಬಂಡವಾಳ ಲಾಭದಾಯಕವಾಗಿತ್ತು. ಆದರೆ ಕಾರ್ಮಿಕರು ಊಟಕ್ಕೂ ಪರದಾಡುವ ಸ್ಥಿತಿಯು ಕೇಂದ್ರ ಹಾಗೂ ರಾಜ್ಯ ಸರಕಾರದ ನೀತಿಗಳಿಂದ ಆಗಿತ್ತು ಎಂದು ಹೇಳಿದರು.

ಫೆಡರೇಶನ್ ಜಿಲ್ಲಾಧ್ಯಕ್ಷರಾದ ವಸಂತ ಆಚಾರಿಯವರು ಮಾತನಾಡುತ್ತಾ ಮಾಸ್ಕ್ ಹಾಕಿ ದೈಹಿಕ ಅಂತರದೊಂದಿಗೆ ಕಾರ್ಮಿಕರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದಾರೆ. ಆದರೆ ಸರ್ಕಾರದ ಕಾರ್ಯಕ್ರಮಗಳು ತಾರತಮ್ಯಗಳಿಂದ ಕೂಡಿದೆ. ಕಾರ್ಮಿಕರಿಗೊಂದು ನ್ಯಾಯ, ಶ್ರೀಮಂತರಿಗೆ ಇನ್ನೊಂದು ನ್ಯಾಯ. ಕೊರೋನಾ ಜಾಸ್ತಿಯಾಗಲು ಸರ್ಕಾರದ ವಿಫಲತೆಯೇ ಕಾರಣ. ಪ್ರಸ್ತುತ ಕಟ್ಟಡ ಕಾರ್ಮಿಕರ ಬೇಡಿಕೆಗಳು ಈಡೇರದಿದ್ದರೆ ಚಳುವಳಿಯನ್ನು ತೀವ್ರಗೊಳಿಸಲಾಗುವುದು ಎಂದು ಎಚ್ಚರಿಕೆ ನೀಡಿದರು. ಪ್ರಾರಂಭದಲ್ಲಿ ➚






ಆಕ್ಸಿಜೆನ್ ಗಾಗಿ ಹಾಹಾಕಾರ, ಬೆಡ್‌ಗಾಗಿ ಪರದಾಟ, ಇದು ಕರ್ನಾಟಕದ ಕರುಣಾಜನಕ ಕತೆ

ಗುರುರಾಜ ದೇಸಾಯಿ

ಕೊರೊನಾದ ಎರಡನೇ ಅಲೆ 'ಬಿರುಗಾಳಿಯಾಗಿ ಅಪ್ಪಳಿಸಿರುವಾಗ' ಕೇಳಬರುತ್ತಿರುವ ಒಂದು ಪ್ರಧಾನ ಕೂಗು ಎಂದರೆ ಆಕ್ಸಿಜನ್ ಕೊರತೆ, ಹೌದು ಆಕ್ಸಿಜೆನ್ ಆಕ್ಸಿಜೆನ್ ಆಕ್ಸಿಜೆನ್ ಎಲ್ಲೆಲ್ಲೂ ಆಕ್ಸಿಜೆನ್ ಗಾಗಿ ಹಾಹಾಕಾರ. ಬೆಡ್‌ಗಾಗಿ ಪರದಾಟ, ಇದು ಕರ್ನಾಟಕದ ಕರುಣಾಜನಕ ಕತೆ.

ಕರೊನಾ ಎರಡನೇ ಅಲೆಯ ಆರ್ಭಟ ಹಲವು ಸಂಕಷ್ಟಗಳನ್ನು ತಂದಿದೆ. ದಿನದಿಂದ ದಿನಕ್ಕೆ ಸೋಂಕಿತರ ಸಂಖ್ಯೆ, ಮರಣ ಪ್ರಮಾಣ ಹೆಚ್ಚುತ್ತಿದೆ. ಬೆಂಗಳೂರಿನ ಸ್ಥಿತಿಯಂತೂ ಅಯೋಮಯವಾಗಿದೆ. ಜಿಲ್ಲಾಕೇಂದ್ರಗಳಲ್ಲೂ ಪ್ರಕರಣಗಳ ಸಂಖ್ಯೆ ಹೆಚ್ಚುತ್ತಲೇ ಇದೆ. ಕಳೆದ ಬಾರಿ ಕರೊನಾ ಎದುರಿಸುವುದು ಆರೋಗ್ಯ ಇಲಾಖೆಗೆ, ಮತ್ತು ಸರ್ಕಾರಕ್ಕೆ ಹೊಸದಾಗಿತ್ತು. ಏನು ಕ್ರಮ ಕೈಗೊಳ್ಳಬೇಕು, ಸೋಂಕು ಪ್ರಸರಣದ ವೇಗ ತಗ್ಗಿಸುವುದು ಹೇಗೆ ಎಂಬ ಬಗ್ಗೆ ಹಲವು ಪ್ರಶ್ನೆ, ಅನುಮಾನಗಳಿದ್ದವು.

ಒಂದು ವರ್ಷದ ಅನುಭವದ ಬಳಿಕ ಅಧಿಕಾರಿಗಳು ಯಾವುದೇ ಲೋಪಗಳಿಗೆ ಆಸ್ಪದ ನೀಡದಂತೆ ಕಾರ್ಯನಿರ್ವಹಿಸಬೇಕಿತ್ತು. ಸೋಂಕು ಪ್ರಕರಣಗಳು ಏರಿಕೆ ಕಾಣುತ್ತಿದ್ದಂತೆ ಆರೋಗ್ಯ ಇಲಾಖೆಯ ತಯಾರಿ ಕೊರತೆ ಢಾಳಾಗಿ ಗೋಚರಿಸಿವೆ. ಎಲ್ಲೂ ಸಮರ್ಪಕವಾದ ಔಷಧಗಳಿಲ್ಲ, ಆಕ್ಸಿಜನ್ ಗಂತೂ ಭಾರಿ ಪರದಾಟ ನಡೆಸುವ ಸ್ಥಿತಿ ಬಂದೊದಗಿದೆ. ರೋಗಿಗಳನ್ನು ಚಿಕಿತ್ಸೆಗೆ ದಾಖಲು ಮಾಡಬೇಕಾದರೆ ದೊಡ್ಡ ಹೋರಾಟ ನಡೆಸುವಂತಾಗಿದೆ.

ಹೇಳುವಂತೆ ಬೆಂಗಳೂರಿನಲ್ಲಿ ಬೆಡ್ ಗಾಗಿ, ಆಕ್ಸಿಜನ್ ಗಾಗಿ, ಚಿತಾಗಾರಕ್ಕಾಗಿ ಪರದಾಡುವ ಸ್ಥಿತಿ ನಿರ್ಮಾಣವಾಗಿದ್ದು ನಿಜ, ಇಲ್ಲಿ ಎರಡ ಮೂರು ಘಟನೆಗಳು ನಾವು ನೋಡೋಣ, ನಗರದ ಮತ್ತಿಕೆರೆ ನಿವಾಸಿಯೊಬ್ಬರು ತಂದೆಯ ಅಂತ್ಯ ಸಂಸ್ಕಾರಕ್ಕೆ ತಾಳಿ ಮಾರಲು ಮುಂದಾದ ಘಟನೆ ನಡೆದಿದೆ. ಕೋವಿಡ್ ಸೋಂಕಿನಿಂದ ಮೃತಪಟ್ಟ ತಂದೆಯು ಬದುಕಿರಬಹುದೆಂದು ಆಂಬ್ಯುಲೆನ್ಸ್ ಮೂಲಕ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದಾರೆ. ಅದರೆ, ವೈದ್ಯರು ಪರೀಕ್ಷಿಸಿ ಸಾವನ್ನಪ್ಪಿದ್ದಾರೆ ಎಂದು ತಿಳಿಸಿದರು. ಅದೇ ಆಯಂಬುಲೆನ್ಸ್‌ನಲ್ಲಿ ಸಿಬ್ಬಂದಿ ಮೃತದೇಹ ತರಲು 60 ಸಾವಿರ ರೂ. ಡಿಮ್ಯಾಂಡ್ ಮಾಡಿದ್ದಾರೆ.

ಆಕ್ಸಿಜನ್ ಸಿಗದ ಕೊರೊನಾ ಸೋಂಕಿತ ಟೆಕ್ಕಿ ಸುಬ್ರಹ್ಮಣ್ಯ, ಆಸ್ಪತ್ರೆಗೆ ಸಾಗಿಸುವ ಮಾರ್ಗಮಧ್ಯೆಯೇ ಸಾವನ್ನಪ್ಪುತ್ತಾರೆ, ಆರಂಭದಲ್ಲಿ ಮೃತರ ಪತ್ನಿ ಕೊರೊನಾ ಸೋಂಕಿಗೆ ತುತ್ತಾಗಿದ್ದು, ಅವರು ಚೇತರಿಸಿಕೊಂಡಿದ್ದರು. ಬಳಿಕ ಸುಬ್ರಹ್ಮಣ್ಯ ಅವರಿಗೆ ಸೋಂಕು ತಗಲಿದ್ದು, ಅವರನ್ನು ಬನಶಂಕರಿಯ ದೇವಗಿರಿ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಸುಬ್ರಹ್ಮಣ್ಯ ಅವರಿಗೆ ಆಮ್ಲಜನಕ ಪೂರೈಕೆ ಅನಿವಾರ್ಯವಾದ ಕಾರಣ ವೈದ್ಯರು ಬೇರೆ ಆಸ್ಪತ್ರೆಗೆ ಸ್ಥಳಾಂತರಿಸುವಂತೆ ಸಲಹೆ ನೀಡಿದ್ದರು. "ಸಾಕಷ್ಟು ಆಸ್ಪತ್ರೆಗಳಿಗೆ ಕರೆ ಮಾಡಿ ಆಕ್ಸಿಜನ್ ಇರುವ ಹಾಸಿಗೆಗಾಗಿ ಪ್ರಯತ್ನಿಸಿದ್ದೆ. ನೋಡಲ್ ಅಧಿಕಾರಿ, ಸ್ಥಳೀಯ ಅಧಿಕಾರಿ, ಸಚಿವ ಸುಧಾಕರ್ ಅವರ ಕಚೇರಿ, ಬಿಬಿಎಂಪಿ ಅಧಿಕಾರಿಗಳಿಗೆ ಕರೆ ಮಾಡಿದ್ದರೂ ಸಹಾಯ ಸಿಗಲಿಲ್ಲ.

ಬೀದರ್ ನಲ್ಲೂ ಈಗ ಹಾಸಿಗೆ ಅಭಾವ ಸೃಷ್ಟಿಯಾಗಿದೆ, ಹಾಸಿಗೆ ಸಿಗದೆ ಸೋಂಕಿತರು ಪರದಾಡುತ್ತಿದ್ದಾರೆ. ಹಾಸಿಗೆ ಇಲ್ಲದಿದ್ದರೂ ಸರಿ ನೆಲದ ಮೇಲೆ ಮಲಗಿಸಿಯಾದರೂ ಚಿಕಿತ್ಸೆ ಕೊಡಿಸುವಂತೆ ರೋಗಿಗಳು ಅಂಗಲಾಚುತ್ತಿದ್ದ ದೃಶ್ಯ ಕರ್ನಾಟಕದ ಚಿಂತಾಜನಕ ಸ್ಥಿತಿಯನ್ನು ತೆರೆದಿಡುತ್ತದೆ. ಹುಬ್ಬಳ್ಳಿ ಕಿಮ್ಸ್ ಆಸ್ಪತ್ರೆಯಲ್ಲಿ ದಾಖಲಾಗಿರುವ ಕೋವಿಡ್ ಸೋಂಕಿತ ವ್ಯಕ್ತಿಯ ಆರೈಕೆಯನ್ನು ಆತನ ಮಗಳೇ ಮಾಡುತ್ತಿದ್ದಾಳೆ, ಕೋವಿಡ್ ಸೋಂಕಿತರು ಇರುವ ಈ ಆಸ್ಪತ್ರೆಯ ಒಳಗೆ ಯಾರೆಂದರೆ ಅವರನ್ನು ಯಾವ ನಿರ್ಬಂಧವೂ ಇಲ್ಲದೆ ಬಿಡಲಾಗ್ತಿದೆಯಂತೆ. ಹುಬ್ಬಳ್ಳಿ ಆಸ್ಪತ್ರೆಯ ಈ ಬೇಕಾಬಿಟ್ಟಿ ಧೋರಣೆ ಮತ್ತು ನಿರ್ಲಕ್ಷ್ಯವನ್ನು ಸೋಂಕು ಹರಡಲು ಕಾರಣವಾಗುತ್ತಿಲ್ಲವೆ ಎಂಬ ಪ್ರಶ್ನೆ ಮೂಡುತ್ತದೆ.




ಮೊನ್ನೆ ಏಪ್ರಿಲ್ 17ರಂದು ನಟಿ ಅನು ಪ್ರಭಾಕರ್ ಗೆ ಕೊರೋನಾ ಸೋಂಕು ಇರುವುದು ಗೊತ್ತಾಯಿತು. ಅದಾಗಿ ಐದು ದಿನ ಕಳೆದರೂ ಇನ್ನೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಕಡೆಯಿಂದ ಪ್ರತಿಕ್ರಿಯೆಯೇ ಬಂದಿಲ್ಲವಂತೆ. ಕೊರೋನಾ ದೃಢಪಟ್ಟು 5 ದಿನವಾಗಿದೆ, ಹೋಂ ಐಸೊಲೇಷನ್ ನಲ್ಲಿದ್ದೇನೆ. ಆದರೆ ಬಿಬಿಎಂಪಿ ಕಡೆಯಿಂದ ಯಾವ ಫೋನ್ ಬಂದಿಲ್ಲ, ಕೋವಿಡ್ ವಾರ್ ವೆಬ್ ಸೈಟ್ ನಲ್ಲಿ ತಮ್ಮ ಹೆಸರು ಅಪ್ಡೇಟ್ ಕೂಡ ಆಗಿಲ್ಲ, ಇನ್ನೂ ನನಗೆ ಬಿಯು ಸಂಖ್ಯೆ ಬಂದಿಲ್ಲ, ಈ ವಿಷಯವನ್ನು ನಿಮ್ಮ ಗಮನಕ್ಕೆ ತರುತ್ತಿದ್ದೇನೆ ಎಂದು ಆರೋಗ್ಯ ಸಚಿವ ಸುಧಾಕರ್ ಅವರ ಟ್ವಿಟ್ಟರ್ ಖಾತೆಯನ್ನು ಟ್ಯಾಗ್ ಮಾಡಿ ಪೋಸ್ಟ್ ಮಾಡಿದ್ದಾರೆ.

ಈ ಎಲ್ಲಾ ಅಂಕಿಅಂಶಗಳು ಬೆಂಗಳೂರಿನಲ್ಲಿ ದಿನೇ ದಿನೇ ಆಕ್ಸಿಜನ್ ಮತ್ತು ಹಾಸಿಗೆಯ ಕೊರತೆ ಎಷ್ಟರ ಮಟ್ಟಿಗೆ ಉಂಟಾಗುತ್ತಿದೆ. ಎಂಬುದನ್ನು ತೋರಿಸುತ್ತವೆ. ಆದರೆ ಸರಕಾರ ಮಾತ್ರ ಈ ನ್ಯೂನ್ಯತೆಯನ್ನು ಒಪ್ಪಿಕೊಳ್ಳುವ ಬದಲು ಹಾಸಿಗೆ, ಆಕ್ಸಿಜನ್ ಕೊರತೆ ಇಲ್ಲ ಎಂದು ನುಣಿಚಿಕೊಳ್ಳುವ ಪ್ರಯತ್ನ ಮಾಡುತ್ತಿದೆ. ಸದ್ಯ ಏರುತ್ತಿರುವ ಪ್ರಮಾಣವನ್ನು ನೋಡಿದರೆ ಬೆಂಗಳೂರಿನಲ್ಲಿ 10,000 ಬೆಡ್ ಗಳ ಅಗತ್ಯವಿದೆ, 3000 ಕ್ಕೂ ಹೆಚ್ಚು ಐಸಿಯು ಬೆಡ್ ಗಳ ಅಗತ್ಯತೆ ಇದೆ. ಈಗಿರುವ ಬಹುತೇಕ ಬೆಡ್ ಗಳು ಭರ್ತಿಯಾಗಿವೆ. ಕಳೆದ ಬಾರಿ ತುಮಕೂರು ರಸ್ತೆಯಲ್ಲಿ 10 ಸಾವಿರದ 100 ಹಾಸಿಗೆಗಳನ್ನು ಹೊಂದಿದ್ದ ಕೋವಿಡ್ ಕೇರ್ ಸೆಂಟರ್ ನ್ನು ಸೆಪ್ಟಂಬರ್ ನಲ್ಲಿ ಮುಚ್ಚಲಾಗಿದೆ. ಈ ರೀಯಲ್ಲಿ ಮತ್ತೆ ದೊಡ್ಡದಾದ ಕೋವಿಡ್ ಸೆಂಟರ್ ಆರಂಭಿಸುವ ಅಗತ್ಯತೆ ಇದೆ.

ದಿಲ್ಲಿ, ಉತ್ತರಪ್ರದೇಶ, ಮಧ್ಯಪ್ರದೇಶ ಮತ್ತು ಕರ್ನಾಟಕವೂ ಸೇರಿದಂತೆ ಈ ಎರಡನೇ ಅಲೆಯಲ್ಲಿ ಬಹಳಷ್ಟು ಸಾವುಗಳು ಆಕ್ಸಿಜನ್ ಕೊರತೆಯಿಂದಾಗಿಯೆ ಸಂಭವಿಸಿವೆ, ಇವುಗಳ ನಡುವೆ, ಕೇರಳ ರಾಜ್ಯದಲ್ಲಿ ಮಾತ್ರವೇ ಆಕ್ಸಿಜನ್ ನ ಕೊರತೆ ಇಲ್ಲದೆ, ಇತರೆ ರಾಜ್ಯಗಳಿಗೆ ಪೂರೈಕೆ ಮಾಡುತ್ತಿದ್ದಾರೆ. ಆ ರಾಜ್ಯದ ಸ್ವಂತ ಅಗತ್ಯಗಳನ್ನು ಪೂರೈಸುವುದಲ್ಲದೇ ಕಳೆದ ವಾರ ಗೋವ, ಕರ್ನಾಟಕ ಮತ್ತು ತಮಿಳುನಾಢಿಗೆ ಕೇರಳದಿಂದ ವೈದ್ಯಕೀಯ ಆಕ್ಸಿಜನ್ ಟ್ಯಾಂಕರುಗಳು ಸರಬರಾಜು ಮಾಡಲಾಗಿದೆ. ಇದು ಕೇರಳ ರಾಜ್ಯದಲ್ಲಿನ ಸಾರ್ವತ್ರಿಕ ಆರೋಗ್ಯ ವ್ಯವಸ್ಥೆ ಹೇಗಿದೆ ಎಂಬುದನ್ನು ತೋರಿಸುತ್ತದೆ. ಆದರೆ ಕರ್ನಾಟಕದಲ್ಲಿ ಮಾತ್ರ ಆಕ್ಸಿಜನ್ ಗಾಗಿ ಪರದಾಡುವ ಸ್ಥಿತಿ ನಿರ್ಮಾಣವಾಗಿದೆ. ರಾಜ್ಯದಲ್ಲಿ ಅಂದಾಜು 1500 ಮೆಟ್ರಿಕ್ ಟನ್ ನಷ್ಟು ಆಕ್ಸಿಜನ್ ನ ಅಗತ್ಯವಿದೆ ಎಂಬ ಮಾಹಿತಿ ಈಗ ಲಭ್ಯವಾಗಿದೆ.

ಈ ಎಲ್ಲಾ ಅಂಶಗಳನ್ನು ಗಮನಿಸುತ್ತಿದ್ದರೆ, ಆರೋಗ್ಯ ವ್ಯವಸ್ಥೆಯ ಮೇಲಿನ ಒತ್ತಡ ಹೆಚ್ಚಿದೆ ಎನ್ನುವುದು ನಿಜವಾದರೂ, ಪರಿಸ್ಥಿತಿ ನಿಭಾಯಿಸುವಲ್ಲಿ ಸರಕಾರ ಎಡವಿರುವುದು ಸ್ಪಷ್ಟವಾಗಿ ಗೋಚರವಾಗುತ್ತಿದೆ. ಸರ್ಕಾರಿ ಆಸ್ಪತ್ರೆಗಳಲ್ಲಿ ಹಾಸಿಗೆ ಲಭ್ಯ ಇಲ್ಲ, ಹಾಸಿಗೆ ಇದ್ದರೆ ಐಸಿಯು, ಇತರ ವೈದ್ಯಕೀಯ ಸೇವೆಗಳಿಲ್ಲ. ಖಾಸಗಿ ಆಸ್ಪತ್ರೆಗಳ ದುಬಾರಿ ಶುಲ್ಕವನ್ನು ಭರಿಸಲು ಎಲ್ಲರಿಂದಲೂ ಸಾಧ್ಯವಿಲ್ಲ. ಸರ್ಕಾರದ ಆಂಬುಲೆನ್ಸ್‌ಗಳೂ ಸಿಗುತ್ತಿಲ್ಲ. ಖಾಸಗಿ ಅಂಬುಲೆನ್ಸ್ ಗಳು ಕೆಲವೇ ಗಂಟೆಗೆ ಸಾವಿರಾರು ರೂಪಾಯಿ ವಸೂಲಿ ಮಾಡುತ್ತಿವೆ. ಹೋಮ್ ಐಸೋಲೇಷನ್ ನಲ್ಲಿರುವವರಿಗೂ ಅಗತ್ಯ ಸೌಲಭ್ಯಗಳು ಸಿಗುತ್ತಿಲ್ಲ, ಹಣ ಕೊಟ್ಟು ಕೊಂಡುಕೊಳ್ಳಲಾಗದ ಸ್ಥಿತಿ ಅನೇಕ ಕಡೆಗಳಲ್ಲಿ ಕಂಡು ಬಂದಿದೆ.

ಕೋವಿಡ್ ರೋಗಿಗಳಿಗಾಗಿರುವ ರಾಜ್ಯದ 'ಆಪ್ತಮಿತ್ರ' ಹಾಗೂ ಬಿಬಿಎಂಪಿ ಸಹಾಯವಾಣಿ ನೆರವಿಗೆ ಬರುತ್ತಿಲ್ಲ. ಮೊದಲನೇ ಅಲೆ ಸಂದರ್ಭದಲ್ಲಿ 'ಆಪ್ತಮಿತ್ರ' ಸಹಾಯವಾಣಿ ಲಕ್ಷಾಂತರ ರೋಗಿಗಳಿಗೆ ಸಹಾಯ ಮಾಡಿತ್ತು. ಆದರೀಗ ಯಾವುದೇ ಸ್ಪಂದನೆ ಸಿಗುತ್ತಿಲ್ಲ. ಬಿಬಿಎಂಪಿ ಕೋವಿಡ್ ವಾರ್ ರೂಮ್ ಸ್ಥಾಪಿಸಿರುವ ಸಹಾಯವಾಣಿಯಿಂದಲೂ ಯಾವುದೇ ನೆರವು ಸಿಗುತ್ತಿಲ್ಲ. ಹೀಗೆ ಸಾಲು ಸಾಲು ನಿರ್ಲಕ್ಷ್ಯಗಳು ಅನಾವರಣಗೊಳ್ಳುತ್ತ ಹೋಗುತ್ತವೆ.


ಕಳೆದ ವರ್ಷ ಕೋವಿಡ್ ಮೊದಲನೇ ಅಲೆ ಕಾಣಿಸಿಕೊಂಡಾಗ ಆರೋಗ್ಯ ವ್ಯವಸ್ಥೆ ಸ್ವಲ್ಪವಾದರೂ ಎಚ್ಚೆತ್ತುಕೊಂಡಿತ್ತು, ಈ ಬಾರಿ ಆ ಉತ್ಸಾಹ, ಕಾಳಜಿ ಎರಡೂ ಕಾಣುತ್ತಿಲ್ಲ. ಸೋಂಕಿತರಲ್ಲಿ ಅರಿವು ಮೂಡಿಸುವ ಪ್ರಯತ್ನಗಳು ನಡೆಯುತ್ತಿಲ್ಲ. ಸೋಂಕಿತರ ಸಂಪರ್ಕಕ್ಕೆ ಬಂದವರನ್ನು ಪತ್ತೆ ಹಚ್ಚುವ ಪ್ರಕ್ರಿಯೆ ನಿಂತುಹೋಗಿದೆ. ಈ ಬಗೆಯ ಅಧ್ವಾನಗಳಿಂದ ಇನ್ನಷ್ಟು ಅನಾಹುತಗಳು ಸೃಷ್ಟಿಯಾಗುತ್ತಿವೆ.

ಇದೊಂದು ಮಾನವೀಯ ಸಂಕಟವಾಗಿದ್ದು, ಸರಕಾರ ಇನ್ನಾದರೂ ಎಚ್ಚೆತ್ತುಕೊಳ್ಳಬೇಕಿದೆ, ಅಧಿಕಾರಿಗಳು, ಸರ್ಕಾರ ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸಬೇಕು. ಒಂದೊಂದು ಜೀವದ ಮೌಲ್ಯವನ್ನೂ ಅರ್ಥಮಾಡಿಕೊಂಡು ಕೆಲಸವನ್ನು ಮಾಡುವುದಕ್ಕೆ ಸರಕಾರ ಮತ್ತು ಆರೋಗ್ಯ ವ್ಯವಸ್ಥೆ ಸಿದ್ಧವಾಗಬೇಕಿದೆ. ■

➘ ಪ್ರಧಾನ ಕಾರ್ಯದರ್ಶಿ ಯು.ಜಯಂತ ನಾಯ್ಕ್‌ರವರು ಸ್ವಾಗತಿಸಿ ಪ್ರಸ್ತಾವನೆಗೈದರು. ಜಿಲ್ಲಾ ಮುಂದಾಳು ಬೆಳ್ತಂಗಡಿಯ ವಸಂತ ನಡರವರು ಧನ್ಯವಾದ ನೀಡಿದರು. ಪ್ರತಿಭಟನೆಯ ನೇತೃತ್ವವನ್ನು ರವಿಚಂದ್ರ ಕೊಂಚಾಡಿ, ಜನಾರ್ಧನ ಕುತ್ತಾರ್, ಚಂದ್ರಹಾಸ ಪಿಲಾರ್, ರೋಹಿದಾಸ್, ಅಶೋಕ್, ಪಾಂಡುರಂಗ, ಯೋಗೀಶ್ ಜಪ್ಪಿನಮೊಗರು, ಶಂಕರ್ ಮೂಡಬಿದ್ರಿ, ಸದಾಶಿವ ದಾಸ್, ವಸಂತಿ, ಗಂಗಯ್ಯ ಅಮೀನ್, ನೋಣಯ್ಯ ಗೌಡ, ಯಶೋಧ, ಶಿವರಾಮ ಗೌಡ, ಪ್ರಸಾದ್, ನಾಗರಾಜ್ ಸುಳ್ಯ, ಜಯಶೀಲ, ರಾಧ, ಗಿರಿಜ, ಮೋಹನರವರು ನೇತೃತ್ವ ವಹಿಸಿದ್ದರು. ತರುವಾಯ ಸಹಾಯಕ ಕಾರ್ಮಿಕ ಆಯುಕ್ತರ ಮುಖಾಂತರ ಕಾರ್ಮಿಕ ಸಚಿವರಿಗೆ ಮನವಿ ಹಾಗೂ ಜಿಲ್ಲಾ ಮಟ್ಟದ ಸಮಸ್ಯೆಗಳ ಬಗ್ಗೆ ಚರ್ಚಿಸಲಾಯಿತು.









ಅಭಿವ್ಯಕ್ತಿಯ ನಿಷೇಧ ಸಂಸ್ಕೃತಿಯ ಅವಾಂತರಗಳು

ಬಿ. ಶ್ರೀಪಾದ ಭಟ್

1980ರಲ್ಲಿ ರಾಜ್ಯಸಭಾ ಸದಸ್ಯರಾಗಿ ನೇಮಕಗೊಂಡಿದ್ದ ಕಲಾವಿದೆ ನರ್ಗಿಸ್ ದತ್ ಅವರು ಸಂಸತ್ತಿನಲ್ಲಿ ಮಾತನಾಡುತ್ತ 'ಭಾರತದಲ್ಲಿ ಕೇವಲ ಬಡತನವಿದೆ, ಹಸಿವಿದೆ ಎಂದು ಬಿಂಬಿಸುವ ಸತ್ಯಜಿತ್ ರೇಯವರ ಸಿನಿಮಾಗಳು ವಿದೇಶಗಳಲ್ಲಿ ಭಾರತದ ಕುರಿತು ತಪ್ಪು ಸಂದೇಶ ರವಾನಿಸುತ್ತಿವೆ, ರೇ ಸಿನಿಮಾಗಳನ್ನು ವಿದೇಶಗಳಲ್ಲಿ ಪ್ರದರ್ಶಿಸಬಾರದು' ಎಂದು ಹೇಳಿದ್ದರು. ಇದು ಆಗ ವಿವಾದಗಳಿಗೂ ಕಾರಣವಾಗಿತ್ತು. ಸಿನಿಮಾ ಎನ್ನುವುದು ಕಲೆಯ ನಿಜದ ಅವ್ಯಕ್ತಿ, ಇದು ದೇಶ, ಬಾಶೆಗಳ ಗಡಿಯನ್ನು ಮೀರಿದೆ. ಸಿನಿಮಾದಲ್ಲಿ ಅಬಿಪ್ರಾಯಗಳನ್ನು ನಿರೂಪಿಸಲಾಗುತ್ತದೆ ಆದರೆ ಅದು ನಿರ್ದಾರಗಳಲ್ಲ. ಸಮಾಜೋ–ಸಾಂಸ್ಕೃತಿಕ–ರಾಜಕೀಯ ವ್ಯವಸ್ಥೆಯ ವಾಸ್ತವವನ್ನು ಸಿನಿಮಾ ಮಾದ್ಯಮದಲ್ಲಿ ಕಲಾತ್ಮಕವಾಗಿ, ಈಸ್ತಟಿಕ್ ಪ್ರಜ್ಞೆಯಿಂದ ಅಳವಡಿಸಿಕೊಳ್ಳುವ ಈ ಹೊಸ ಅಲೆಯ ಸಿನಿಮಾಗಳಿಗೆ ಹೇರಲ್ಪಡುವ ಈ ಸಂಕುಚಿತ ಕಟ್ಟುಪಾಡುಗಳಿಂದ ಅದರ ಸೃಜನಶೀಲತೆ ಮತ್ತು ಕ್ರಿಯಾಶೀಲತೆಯನ್ನು ನಾಶ ಮಾಡುತ್ತದೆ ಎಂದು ಚಿಂತಕರು ವಾದಿಸಿದ್ದರು. ಆಗ ಅಬಿವ್ಯಕ್ತಿ ಸ್ವಾತಂತ್ರಕ್ಕೆ ಮುಕ್ತ ವಾತಾವರಣವಿತ್ತು. ನರ್ಗಿಸ್ ದತ್‌ರನ್ನು ತಾರ್ಕಿಕವಾಗಿ ವಿರೋದಿಸಿದವರಿಗೂ ಮನ್ನಣೆಯಿತ್ತು. ಸರಕಾರದ ನೀತಿಗಳನ್ನು ಟೀಕಿಸುವವರಿಗೆ ಘನತೆಯಿತ್ತು. ಇದಾಗಿ ನಲವತ್ತು ವರ್ಶಗಳು ಕಳೆದಿವೆ. ಆದರೆ ಈಗ ಪರಿಸ್ಥಿತಿ ಬಿಗಡಾಯಿಸಿದೆ. ನಿರಂಕುಶ ಪ್ರಬುತ್ವವು ಅದಿಕಾರದಲ್ಲಿರುವುದರಿಂದ ಇಲ್ಲಿನ ಕಲೆ, ಸಂಗೀತ ಮತ್ತು ಸಾಹಿತ್ಯದ ಮೇಲೆ, ಅಬಿವ್ಯಕ್ತಿ ಸ್ವಾತಂತ್ರ್ಯದ ಮೇಲೆ ಪ್ರತಿ ಹಂತ, ಪ್ರತಿ ಕ್ಷಣಕ್ಕೂ ಸಂಕೋಲೆಗಳು, ಭಯ, ಆತಂಕ ಕಾಡುತ್ತಿದೆ. ಅಬಿವ್ಯಕ್ತಿ ಸ್ವಾತಂತ್ರ್ಯವು ಸಂವಿದಾನವು ಕೊಟ್ಟಂತಹ ಉಲ್ಲಂಘಿಸಲಾಗದ ಹಕ್ಕು ಎನ್ನುವ ಆಶಯವೂ ಕಣ್ಣ ಮುಂದೆ ಕರಗುತ್ತಿದೆ. ಅನುಚ್ಚೇದ 19(1)(ಎ)ದ 'ಪ್ರತಿಯೊಬ್ಬರಿಗೂ ಅಬಿವ್ಯಕ್ತಿ ಸ್ವಾತಂತ್ರ್ಯವಿದೆ' ಎನ್ನುವ ಹಕ್ಕು ಇಂದು ಅಣಕಗೊಳ್ಳುತ್ತಿದೆ.

ತೀರಾ ಇತ್ತೀಚೆಗೆ ಎಪ್ರಿಲ್ 2021ರಲ್ಲಿ 'ನೆಟ್‌ಪ್ಲಿಕ್ಸ್' ಓಟಿಟಿ ಪ್ಲಾಟ್‌ಫಾರ್ಮನಲ್ಲಿ ಬಿಡುಗಡೆಯಾದ 'ಬಾಂಬೆ ಬೇಗಮ್ಸ್' ಎನ್ನುವ ಆರು ಎಪಿಸೋಡ್‌ಗಳ ವೆಬ್ ಸರಣಿಯ ವಿರುದ್ದ ಮಕ್ಕಳ ಹಕ್ಕುಗಳ ರಾಷ್ಟ್ರೀಯ ಆಯೋಗವು (ಎನ್‌ಸಿಪಿಸಿಆರ್) ನೋಟೀಸು ನೀಡಿದೆ. 'ಈ ಸರಣಿಯ ಕೆಲ ಭಾಗಗಳಲ್ಲಿ ಮಕ್ಕಳನ್ನು ಹಸಿಬಿಸಿಯಾಗಿ ಬಿಂಬಿಸಲಾಗಿದೆ. ಅವರು ಕೊಕೇನ್, ಸಿಗರೇಟ್ ಸೇದುವುದು, ಮಕ್ಕಳು ಲೈಂಗಿಕ ಕ್ರಿಯೆಯಲ್ಲಿ ಆಸಕ್ತಿ ವಹಿಸುವುದುನ್ನು ಸಾಮಾನ್ಯೀಕರಣಗೊಳಿಸುವುದು, ಹುಡುಗಿಯರ ದೇಹದ ಭಾಗಗಳ ಫೋಟೋ ಕ್ಲಿಕ್ಕಿಸುವುದು' ಇತ್ಯಾದಿ ದೃಶ್ಯಗಳು ಯುವಜನತೆಯ ಮನಸ್ಸನ್ನು ಹಾಳು ಮಾಡುತ್ತವೆ, ಕಲುಶಿಷಗೊಳಿಸುತ್ತವೆ ಮತ್ತು ಮಕ್ಕಳ ಶೋಷಣೆಗೆ ಪ್ರೋತ್ಸಾಹ ನೀಡುತ್ತವೆ' ಎಂದು ಎನ್‌ಸಿಪಿಸಿಆರ್ ತನ್ನ ಷೋಕಾಸ್ ನೋಟೀಸ್‌ನಲ್ಲಿ ಆಕ್ಷೇಪಿಸಿದೆ. ಸಾಮಾಜಿಕ ಜಾಲತಾಣಗಳಲ್ಲಿ ಸ್ವಘೋಷಿತ ನೈತಿಕ ಪೋಲೀಸ್‌ಗಿರಿ ಮಾಡುವ, ಹಿಂದೂ ಬಹುಸಂಖ್ಯಾತವಾದದ ಸಮರ್ಥಕರಾದ @ಜೆಮ್ಸ್‌ಆಫ್‌ಬಾಲಿವುಡ್‌ನ ಟ್ವಿಟ್ಟರ್ ಖಾತೆಯಲ್ಲಿ ಈ ಕುರಿತು ಲಗತ್ತಿಸಿದ ಸರಣಿ ಟ್ವೀಟ್‌ಗಳನ್ನು ಆದರಿಸಿ ಮತ್ತು ಪುರುಷರ ಹಕ್ಕುಗಳ ಹೋರಾಟಗಾರ್ತಿ ದೀಪಿಕಾ ನಾರಾಯಣ್ ಧನರಾಜ್‌ರ ಟ್ವೀಟ್ ಆದರಿಸಿ ಎನ್‌ಸಿಪಿಸಿಆರ್ ಈ ನೋಟೀಸ್ ನೀಡಿದೆ. ಆದರೆ ಈ ಟ್ವೀಟರ್ ಖಾತೆಯ ವ್ಯಕ್ತಿಗಳು, ಸಂಘಟನೆಗಳಿಗೆ ಯಾವುದೇ ಅದಿಕೃತ ಮಾನ್ಯತೆ ಇರುವುದಿಲ್ಲ ಎನ್ನುವುದು ಇಲ್ಲಿ ಮುಖ್ಯವಾಗುವುದಿಲ್ಲ. ಬದಲಿಗೆ ಅದಿಕಾರ ನಡೆಸುವ ಪಕ್ಷದ ಸಿದ್ದಾಂತಗಳು ಪ್ರಾಮುಖ್ಯತೆ ಪಡೆದುಕೊಳ್ಳುತ್ತವೆ. ಗುಲಾಮಗಿರಿ ದ್ಯೇಯವಾಗುತ್ತದೆ ಮತ್ತು ನಾಗರಿಕ ಸಮಾಜದ, ಪ್ರಜಾಪ್ರಬುತ್ವದ ಸೋಲು ಇಲ್ಲಿಂದ ಶುರುವಾಗುತ್ತದೆ. ಸ್ವಯಂಪ್ರೇರಿತವಾಗಿ ಎನ್‌ಸಿಪಿಸಿಆರ್ ದೂರು ದಾಖಲಿಸಿದೆಯೆಂದರೆ ಅದರ ಅರ್ಥ ಸ್ವತಃ ಆ ಸಂಸ್ಥೆಗೇ ಈ ಸರಣಿ ದಾರವಾಹಿಯ ಕುರಿತು ಅಸಹನೆಯಿದೆ. ಅಷ್ಟಕ್ಕೂ 'ಬಾಂಬೆ ಬೇಗಮ್ಸ್' ಸರಣಿಯ ಕತೆಯಲ್ಲಿ ಸಮಾಜದ ಬಿನ್ನ ವರ್ಗ, ದರ್ಮ, ಜಾತಿಗಳಿಂದ ಬಂದ ಐವರು ಮಹಿಳೆಯರ ಕನಸುಗಳು ಮತ್ತು ಬಯಕೆಗಳ ಕುರಿತು ಮತ್ತು ಮುಂಬೈನಲ್ಲಿ ಮಹಿಳೆಯಾಗಿ ತಮ್ಮ ಆಸ್ತಿತ್ವಕ್ಕಾಗಿ ಹೆಣಗುವ ಪಡಿಪಾಟಲುಗಳ ಕುರಿತು ನಾಟಕೀಯವಾಗಿ ನಿರೂಪಿತವಾಗಿದೆ. ಇಲ್ಲಿ ಕತೆ ಹೇಳುವ ಶೈಲಿ ತೆಳುವಾಗಿದೆ ಮತ್ತು ಆಳವಾದ ಒಳನೋಟಗಳಿಲ್ಲ. ಸಿನಿಮಾ ಚೌಕಟ್ಟಿಗೆ ಅಗತ್ಯವಾದ ಕಲಾವಂತಿಕೆ ಮತ್ತು ಅದರ ಸ್ವರೂಪದ ಕುರಿತು ನಿರ್ದೇಶಕರು ನಿರ್ಲಕ್ಷ್ಯವಹಿಸಿದ್ದಾರೆ. ಆದರೆ ಇದೆಲ್ಲದರಾಚೆ ಚಿತ್ರಕತೆಗೆ ಅನುಗುಣವಾಗಿ ದೃಶ್ಯಗಳನ್ನು ಹೆಣೆಯುವ ಮತ್ತು ಕತೆಗೆ ಪೂರಕವಾಗಿ ವ್ಯವಸ್ಥೆಯ ವಿವಿದ ಮಗ್ಗುಲುಗಳನ್ನು ಪ್ರದರ್ಶಿಸುವ ಸ್ವಾತಂತ್ರ ಪ್ರತಿಯೊಬ್ಬ ಸಿನಿಮಾ ನಿರ್ದೇಶಕರಿಗಿರುತ್ತದೆ. ಈ ಸರಣಿ ದಾರವಾಹಿಯಲ್ಲಿ 13 ವರ್ಶದ ಮಕ್ಕಳು ಕೊಕೇನ್ ತೆಗೆದುಕೊಳ್ಳುವ ದೃಶ್ಯವನ್ನು ವೈಬವೀಕರಿಸಿಲ್ಲ ಬದಲಿಗೆ ಹೇಗೆ ಹದಿಹರೆಯದ ಮಕ್ಕಳು ಬಲಿಯಾಗುತ್ತಿದ್ದಾರೆ ಎನ್ನುವ ಒರಟಾದ ನಿರೂಪಣೆಯಿದೆ. ಆದರೆ ಸಮಾಜದ ವಾಸ್ತವಕ್ಕೆ ಕನ್ನಡಿ ಹಿಡಿಯುವುದನ್ನೆ ತಿರುಚಿ ಮಕ್ಕಳನ್ನು ಪ್ರಚೋದಿಸುತ್ತದೆ ಎನ್ನುವ ಎನ್‌ಸಿಪಿಸಿಆರ್‌ನ ಏಕಪಕ್ಷೀಯ ದುರ್ಬಲ ವಾದವೇ ಪ್ರಜಾಪ್ರಬುತ್ವದ ಆಶಯಗಳಿಗೆ ಮಾರಕವಾಗಿದೆ. ಇಲ್ಲಿ ಸಿನಿಮಾದ ಗುಣಮಟ್ಟ ಮತ್ತು ನಿರ್ದೇಶಕರ ಸಾಮರ್ಥ್ಯದ ಕುರಿತು ವಿಮರ್ಶೆ ಮಾಡುವುದು ಪ್ರಜಾಪ್ರಬುತ್ವದಲ್ಲಿನ ಸಹಜ ಚಟುವಟಿಕೆಗಳು. ಈ ಪ್ರಕ್ರಿಯೆಯಲ್ಲಿ ಆ ದೃಶ್ಯಗಳು ಹಸಿಬಿಸಿಯಾಗಿವೆ, ಜಾಳುಜಾಳಾಗಿವೆ ಮತ್ತು ಸಮಾಜದ ಸ್ವಾಸ್ಥ್ಯವನ್ನು ಕೆಡಿಸುತ್ತವೆ ಎನ್ನುವ ಟೀಕೆಗಳು ವಸ್ತುನಿಷ್ಟವಾಗಿರಬೇಕು, ಒಂದು ಮೌಲಿಕ ವಿಮರ್ಶೆಯಾಗಿರಬೇಕು. ಆದರೆ ಇದೆಲ್ಲವೂ ಕಾಣೆಯಾಗಿ ಆಡಳಿತದಲ್ಲಿರುವ ಪಕ್ಷದ ಗುಲಾಮಗಿರಿತನ ಮತ್ತು ದಾರ್ಮಿಕ ಮತಾಂದತೆಯ ಹಿಂಸೆ ಮುಖ್ಯವಾಗಿಬಿಡುವುದು ಇಲ್ಲಿನ ಬಲು ದೊಡ್ಡ ಬಿಕ್ಕಟ್ಟು. ಇದರಿಂದಾಗಿ ಸಿನಿಮಾ, ನಾಟಕಗಳು ಕಲಾವಿದ, ನಿರ್ದೇಶಕರ ಸೃಜನಶೀಲ ಪ್ರಯೋಗಗಳಿಗೆ ಸೂಕ್ತ ವೇದಿಕೆಗಳು ಎನ್ನುವ ಮೂಲಭೂತ ಆಶಯವೇ ಕಣ್ಮರೆಯಾಗುತ್ತಿದೆ. ಈ ಅಪಾಯಕಾರಿ ಅವಾಂತರಗಳಿಗೆ ಕಳಸವಿಟ್ಟಂತೆ ಕೇಂದ್ರ ವಾರ್ತಾ ಮತ್ತು ಪ್ರಚಾರ ಇಲಾಖೆಯು ಸಾಮಾಜಿಕ ಜಾಲತಾಣ ಮತ್ತು ಓಟಿಟಿ ಪ್ಲಾಟ್‌ಫಾರ್ಮಗಳನ್ನು ನಿಯಂತ್ರಿಸಲು ಹೊಸ ನೀತಿಸಂಹಿತೆಗಳನ್ನು ಪ್ರಕಟಿಸಿದೆ. ಇಲ್ಲಿ ಕಲಾವಿದರು, ನಿರ್ದೇಶಕರು ತಮ್ಮ ಕ್ರಿಯಾಶೀಲತೆ ಮತ್ತು ಸೃಜನಶೀಲವನ್ನು ಫ್ಯಾಸಿಸ್ಟ್ ಪ್ರಬುತ್ವ ಹಾಗೂ ಮತಾಂದ ಸಮಾಜಕ್ಕೆ ಒತ್ತೆ ಇಡಬೇಕಾದಂತಹ ದುಸ್ಥಿತಿಯಿದೆ.

ಸಿನಿಮಾದ ಗುಣಮಟ್ಟ ಮತ್ತು ನಿರ್ದೇಶಕರ ಸಾಮರ್ಥ್ಯದ ಕುರಿತು ವಿಮರ್ಶೆ ಮಾಡುವುದು ಪ್ರಜಾಪ್ರಭುತ್ವದಲ್ಲಿನ ಸಹಜ ಚಟುವಟಿಕೆಗಳು. ಈ ಪ್ರಕ್ರಿಯೆಯಲ್ಲಿ ಆ ದೃಶ್ಯಗಳು ಹಸಿಬಿಸಿಯಾಗಿವೆ, ಜಾಳುಜಾಳಾಗಿವೆ ಮತ್ತು ಸಮಾಜದ ಸ್ವಾಸ್ಥ್ಯವನ್ನು ಕೆಡಿಸುತ್ತವೆ ಎನ್ನುವ ಟೀಕೆಗಳು ವಸ್ತುನಿಷ್ಟವಾಗಿರಬೇಕು, ಒಂದು ಮೌಲಿಕ ವಿಮರ್ಶೆಯಾಗಿರಬೇಕು. ಆದರೆ ಇದೆಲ್ಲವೂ ಕಾಣೆಯಾಗಿ ಆಡಳಿತದಲ್ಲಿರುವ ಪಕ್ಷದ ಗುಲಾಮಗಿರಿತನ ಮತ್ತು ಧಾರ್ಮಿಕ ಮತಾಂಧತೆಯ ಹಿಂಸೆ ಮುಖ್ಯವಾಗಿಬಿಡುವುದು ಇಲ್ಲಿನ ಬಲು ದೊಡ್ಡ ಬಿಕ್ಕಟ್ಟು. ಇದರಿಂದಾಗಿ ಸಿನಿಮಾ, ನಾಟಕಗಳು ಕಲಾವಿದ, ನಿರ್ದೇಶಕರ ಸೃಜನಶೀಲ ಪ್ರಯೋಗಗಳಿಗೆ ಸೂಕ್ತ ವೇದಿಕೆಗಳು ಎನ್ನುವ ಮೂಲಭೂತ ಆಶಯವೇ ಕಣ್ಮರೆಯಾಗುತ್ತಿದೆ. ಈ ಅಪಾಯಕಾರಿ ಅವಾಂತರಗಳಿಗೆ ಕಳಸವಿಟ್ಟಂತೆ ಕೇಂದ್ರ ವಾರ್ತಾ ಮತ್ತು ಪ್ರಚಾರ ಇಲಾಖೆಯು ಸಾಮಾಜಿಕ ಜಾಲತಾಣ ಮತ್ತು ಓಟಿಟಿ ಪ್ಲಾಟ್ಫಾರ್ಮಗಳನ್ನು ನಿಯಂತ್ರಿಸಲು ಹೊಸ ನೀತಿಸಂಹಿತೆಗಳನ್ನು ಪ್ರಕಟಿಸಿದೆ. ಇಲ್ಲಿ ಕಲಾವಿದರು, ನಿರ್ದೇಶಕರು ತಮ್ಮ ಕ್ರಿಯಾಶೀಲತೆ ಮತ್ತು ಸೃಜನಶೀಲವನ್ನು ಫ್ಯಾಸಿಸ್ಟ್ ಪ್ರಭುತ್ವ ಹಾಗೂ ಮತಾಂಧ ಸಮಾಜಕ್ಕೆ ಒತ್ತೆ ಇಡಬೇಕಾದಂತಹ ದುಸ್ಥಿತಿಯಿದೆ.

ಇದೇ ಸಂದರ್ಬದಲ್ಲಿ ಮಾರ್ಚ 2021ರಲ್ಲಿ ದಕ್ಷಿಣದಲ್ಲಿ ಕೇರಳದ 'ಬ್ರಾಹ್ಮಣ ವೇದಿಕೆ'ಯು 'ಪತ್ತರೊಡೆ ಮಟನ್ ಕರ್ರಿ' ಎಂಬ ಮಲೆಯಾಳಂ ಕಿರುಚಿತ್ರವನ್ನು ವಿರೋದಿಸಿದ್ದಾರೆ. ಈ ಶೀರ್ಷಿಕೆಯು ಬ್ರಾಹ್ಮಣ ಸಂಸ್ಕೃತಿಗೆ ಅವಮಾನಿಸುತ್ತದೆ ಎಂಬುದು ಅವರ ದೂರು. ಆದರೆ ಅದು ಹೇಗೆ? ಎನ್ನುವುದಕ್ಕೆ ಯಾವುದೇ ಸಮಂಜಸವಾದ ಉತ್ತರ ದೊರಕುತ್ತಿಲ್ಲ. ಮುಂದಿನ ದಿನಗಳಲ್ಲಿ ಬ್ರಾಹ್ಮಣ ಜಾತಿಯಲ್ಲಿನ ಕರ್ಮಠತನ, ಸನಾತನವಾದ, ಜಾತಿ ದೌರ್ಜನ್ಯದ ಕುರಿತು ಸಿನಿಮಾ, ನಾಟಕಗಳನ್ನು ನಿರ್ಮಿಸುವುದು ಕಷ್ಟವಾಗಬಹುದು. ಏಕೆಂದರೆ ಈ 'ಬ್ರಾಹ್ಮಣರ ಶೋಷಣೆ ಸಂಸ್ಕೃತಿ'ಯನ್ನು ಇದ್ದ ಹಾಗೆ ನಿರೂಪಿಸಿದರೆ ಕಂಡದ್ದು ಕಂಡ ಹಾಗೆ ಹೇಳಿದರೆ ಸಂಬಂದಿಸಿದ ಜಾತಿಯವರಿಗೆ ಅವಮಾನವಾಗುತ್ತದೆ ಎನ್ನುವ ವಾದಕ್ಕೆ ಈ ಮತಾಂದರ ಆಡಳಿತದಲ್ಲಿ ಗೌರವಪೂರ್ವಕ ಮನ್ನಣೆ ದೊರಕುತ್ತದೆ ಹಾಗೂ ಸತ್ಯವನ್ನು ಹೇಳುವ ಕಲಾವಿದರು ಜೈಲುವಾಸಿಯಾಗುತ್ತಾರೆ.

ಇದಕ್ಕೂ ಕೆಲ ತಿಂಗಳುಗಳ ಮುಂಚೆ ಫೆಬ್ರವರಿ 2021ರಲ್ಲಿ ಅಮೇಜಾನ್ ಓಟಿಟಿಯಲ್ಲಿ 'ತಾಂಡವ್' ವೆಬ್ ಸರಣಿಯ ವಿರುದ್ದವೂ ಬ್ರಾಹ್ಮಣರನ್ನು ನಿಂದನೆ ಮಾಡಲಾಗಿದೆ ಎನ್ನುವ ಆರೋಪದ ಮೇಲೆ ಅದರ ಪ್ರಸಾರವನ್ನು ನಿರ್ಬಂದಿಸಬೇಕೆಂದು ಬ್ರಾಹ್ಮಣ ಜಾತಿ ಒಕ್ಕೂಟ ಗಲಾಟೆ ಮಾಡಿತು. ಅಲ್ಲಿನ ಶಿವನ ಪಾತ್ರವನ್ನು ಮಹಮ್ಮದ್ ಜೀಶಾನ್ ಮಾಡಿದ್ದ ಮತ್ತು ಆತನ ಪಾತ್ರದ ಮೂಲಕ ಶಿವನನ್ನು ವಿಡಂಬನಾತ್ಮಕವಾಗಿ ಚಿತ್ರಿಸಲಾಗಿದೆಯೆಂದು 'ತಾಂಡವ್' ವೆಬ್ ಸರಣಿಯ ವಿರುದ್ದ ಬಹುಸಂಖ್ಯೆಯಲ್ಲಿ, ಬೇರೆ ಬೇರೆ ರಾಜ್ಯಗಳಲ್ಲಿ ಎಫ್‌ಐಆರ್ ದಾಖಲಿಸಲಾಯಿತು. ಇದರ ನಿರ್ದೇಶಕ ಸಾರ್ವಜನಿಕವಾಗಿ ಕ್ಷಮಾಪಣೆ ಕೇಳಿದ. ಆದರೆ ಸುಪ್ರೀಂ ಕೋರ್ಟ ನಿರ್ಮಾಪಕರಿಗೆ ಬಂದನದಿಂದ ರಕ್ಷಣೆ ಕೊಡಲು ನಿರಾಕರಿಸಿತು. ನಟ ಮಹಮ್ಮದ್ ಜೀಶಾನ್‌ನ ವಕೀಲರು 'ಆತ ಆ ಸರಣಿಯಲ್ಲಿ ಒಂದು ಪಾತ್ರವಾಗಿ ಅಬಿನಯಿಸುತ್ತಿದ್ದಾನೆ ಮಾತ್ರ' ಎಂದು ಗೋಗೆರೆದರೂ ಸಹ ಒಪ್ಪದ ಸುಪ್ರೀಂ ಕೋರ್ಟ ಪೀಠವು ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ 'ಇತರರ ದಾರ್ಮಿಕ ಭಾವನೆಗಳಿಗೆ ದಕ್ಕೆ ಉಂಟು ಮಾಡುವ ಪಾತ್ರಗಳಲ್ಲಿ ನೀನು ಅಬಿನಯಿಸಬಾರದು' ಎಂದು ಹೇಳಿದೆ. ನ್ಯಾಯಾಂಗವೇ ಕೈಕೊಟ್ಟ ಮೇಲೆ ಪ್ರಜ್ಞಾವಂತರು ಕಲೆ, ಅಬಿವ್ಯಕ್ತಿ ಸ್ವಾತಂತ್ರ್ಯ, ಸಂವಿದಾನ ಎಂದು ಬಡಬಡಿಸುವುದು ಅರಣ್ಯರೋದನವಾಗುತ್ತದೆ ಎಂಬುದು ಸಾಬೀತಾಯಿತು.

100 ವರ್ಶಗಳ ಹಿಂದೆ 1921ರಲ್ಲಿ 'ಟೈಮ್ಸ್ ಆಫ್ ಇಂಡಿಯಾ' ದಿನಪತ್ರಿಕೆಯಲ್ಲಿ 'ಹಿಂದೂ ದೇವರನ್ನು ಯಾರು ಅವಮಾನಿಸುತ್ತಾರೆ' ಎನ್ನುವ ಶಿರೋನಾಮೆಯಡಿ ಪತ್ರವೊಂದು ಪ್ರಕಟವಾಗಿತ್ತು. ಆ ಪತ್ರದಲ್ಲಿ 'ಬಟ್ಟೆಗಳ ಮೇಲೆ, ಕಡ್ಡಿಪೊಟ್ಟಣದ ಮೇಲೆ, ಸಿನಿಮಾಗಳಲ್ಲಿ ಹಿಂದೂ ದೇವರುಗಳನ್ನು ಛಾಪಿಸಿರುತ್ತಾರೆ ಮತ್ತು ಇದನ್ನು ಎಲ್ಲರೂ ನೋಡುತ್ತಾರೆ ಅಲ್ಲದೆ ಎಲ್ಲಾ ಜನಾಂಗಗಳು ಹಿಂದೂ ದೇವರುಗಳ ಪಾತ್ರಗಳಲ್ಲಿ ಅಬಿನಯಿಸುತ್ತಾರೆ, ಈ ಅವಮಾನದ ವಿರುದ್ದ ಯಾರಾದರೂ ಪ್ರತಿಭಟಿಸಿದ್ದಾರೆಯೇ' ಎನ್ನುವ ಸಾರಾಂಶವಿತ್ತು. ಇದು ಸ್ವಾತಂತ್ರ್ಯಪೂರ್ವದಲ್ಲಿನ ಮತಾಂದತೆಯ ಮನಸ್ಥಿತಿ. ಬಹುಶಃ ಆಗ ಸ್ವಾತಂತ್ರ್ಯ ಬರಲಿ ಎಲ್ಲವೂ ಸರಿ ಹೋಗಬಹುದು ಎಂದು ಸಮಾದಾನಪಟ್ಟಿಕೊಂಡಿದ್ದರೇನೋ!! ಆದರೆ ಸ್ವಾತಂತ್ರ್ಯ ಬಂದು 74 ವರ್ಶಗಳಾದವು. ಆದರೆ ಆ ಪತ್ರದ ಹಿಂದಿನ ಮತಾಂದತೆ ಮತ್ತಷ್ಟು ವಿಕೃತಗೊಂಡಿದೆಯೆಂಬುದಕ್ಕೆ ಮೇಲಿನ ಘಟನೆಯೇ ಸಾಕ್ಷಿ.

ಇದಕ್ಕೂ ಕೆಲ ತಿಂಗಳುಗಳ ಮುಂಚೆ ನವೆಂಬರ್ 2020ರಲ್ಲಿ ನೆಟ್‌ಪ್ಲಿಕ್ಸ್‌ನಲ್ಲಿ ಪ್ರದರ್ಶನಗೊಂಡ 'ಸ್ಯೂಟೆಬಲ್ ಬಾಯ್' ವೆಬ್ ಸರಣಿಯ ದೃಶ್ಯವೊಂದರಲ್ಲಿ ದೇವಸ್ಥಾನದ ಹಿನ್ನಲೆಯಲ್ಲಿ 'ಲತಾ' ಎನ್ನುವ ಪಾತ್ರವು 'ಕಬೀರ್' ಎನ್ನುವ ಪಾತ್ರದೊಂದಿಗೆ ತುಟಿಗೆ ಮುತ್ತಿಡುವ ದೃಶ್ಯಕ್ಕೆ ವಿರೋದ ವ್ಯಕ್ತವಾಯಿತು. ಇದರ ಆಸುಪಾಸಿನಲ್ಲಿ 'ತಾನಿಷ್ಟ್' ಎನ್ನುವ ಆಭರಣದ ಕಂಪನಿಯ ಜಾಹೀರಾತಿನಲ್ಲಿ ಹಿಂದೂ ಮಹಿಳೆಯು ಮುಸ್ಲಿಂ ಅತ್ತೆ–ಮಾವನ ಮನೆಯಲ್ಲಿ ತನ್ನ ಸೀಮಂತನವನ್ನು ಸಂಭ್ರಮಿಸುವ ದೃಶ್ಯಕ್ಕೆ ವ್ಯಾಪಕ ಟೀಕೆಗಳು ಹರಿದುಬಂದ ನಂತರ ಆ ಜಾಹೀರಾತನ್ನು ಹಿಂಪಡೆಯಲಾಯಿತು

ಈ 'ರದ್ದು ಸಂಸ್ಕೃತಿ'ಗೆ ಆಹುತಿಯಾದ ಆಂಧೀ, ಕಿಸ್ಸಾ ಕುರ್ಸೀಕಾ, ಫೈರ್, ಕಾಮಸೂತ್ರ, ಪಾಂಚ್, ಹವಾ ಆಣೆ ದೇ, ಬ್ಲಾಕ್ ಫ್ರೈಡೆ, ವಾಟರ್, ಪಿಂಕ್ ಮಿರರ್, ಪರ್ಜಾನಿಯಾ, ಪದ್ಮಾವತಿ, ಲಿಪ್‌ಸ್ಟಿಕ್ ಅಂಡರ್ ಮೈ ಬುರ್ಕಾ ಇತ್ಯಾದಿ ಬಲಿಪಶುಗಳ ಪಟ್ಟಿಯೇ ಇದೆ

ಈ 'ರದ್ದು ಸಂಸ್ಕೃತಿ'ಯು ಕೇವಲ ಸಿನಿಮಾಗಳಿಗೆ ಮಾತ್ರ ಸೀಮಿತವಾಗಿಲ್ಲ. ಇದರ ದಾಳಿಗೆ ನಾಟಕಗಳೂ ಸಹ ಬಲಿಯಾಗಿವೆ. ಕೆಲ ದಿನಗಳ ಹಿಂದೆ ಮಾರ್ಚ 2021ರಲ್ಲಿ ಮದ್ಯಪ್ರದೇಶದಲ್ಲಿ ಇಪ್ಟಾ ಸಂಘಟನೆಯು ಆಯೋಜಿಸಿದ್ದ ರಂಗ ಉತ್ಸವವನ್ನು ಬಜರಂಗದಳ ಸಂಘಟನೆಯು ದಬ್ಬಾಳಿಕೆಯ ಮೂಲಕ ಬಲವಂತವಾಗಿ ರದ್ದುಗೊಳಿಸಿದೆ. ಆ ಉತ್ಸವದಲ್ಲಿ ವಿಜಯ್ ತೆಂಡೂಲ್ಕರ್‌ರವರ ನಾಟಕ 'ಜಾತ್ ಹಿ ಪೂಚೋ ಸಾಧೂ ಕಿ'ಯ ಶಿರೋನಾಮೆಯಲ್ಲಿ 'ಸಾಧು' ಎನ್ನುವ ಹೆಸರು ಈ

ಪುಟ 10 ಕ್ಕೆ



ವಾವ್! ಎಂತಹಾ ರ್‍ಯಾಲಿ!

ವ್ಯಂಗ್ಯಚಿತ್ರ : ಸತೀಶ ಆಚಾರ್ಯ

ಸಾವು ಮತ್ತು ವಿನಾಶದ ಎರಡನೇ ಅಲೆ ಎದುರಿಸಲು ದೇಶ ಒಂದಿಷ್ಟೂ ಸಿದ್ಧವಾಗಿಲ್ಲದಿದ್ದುದಕ್ಕೆ ಮೋದಿ ಸರ್ಕಾರವೇ ಹೊಣೆ ಎಂಬುದಕ್ಕೆ ಈಗ ಎಳ್ಳಷ್ಟೂ ಸಂದೇಹವಿಲ್ಲ. ಮೋದಿ ಸರ್ಕಾರದ ಸಂತೃಪ್ತ ಮನೋಭಾವ, ಕೆಟ್ಟ ನಿರ್ವಹಣೆ ಮತ್ತು ದೂರದೃಷ್ಟಿಯಿಲ್ಲದ ಧೋರಣೆಯಿಂದಾಗಿಯೇ ಭಾರತದ ಮೇಲೆ ಈ ಸಾರ್ವಜನಿಕ ಆರೋಗ್ಯ ವಿಪತ್ತು ಎರಗಿದೆ. ದೀರ್ಘಕಾಲದಿಂದ ಸಾರ್ವಜನಿಕ ಆರೋಗ್ಯವನ್ನು ನಿರ್ಲಕ್ಷಿಸಿದ್ದು ಹಾಗೂ ಕಳೆದ ಮೂರು ದಶಕಗಳಲ್ಲಿ ಆರೋಗ್ಯ ಕ್ಷೇತ್ರವನ್ನು ಖಾಸಗೀಕರಿಸಲು ನಡೆಸಿದ ಪ್ರಯತ್ನಗಳ ದುಷ್ಫಲವೂ ಇದಾಗಿದೆ.

ವಿಫಲಗೊಂಡಿರುವ 'ವಿಶ್ವ ಗುರು'

ಮೋದಿ–ಷಾ ಜೋಡಿ ಎರಡನೇ ಅಲೆಯ ಅನಾಹುತಕ್ಕೆ ಕ್ರಿಮಿನಲ್ ಹೊಣೆಗಾರರು

* ಪ್ರಕಾಶ್ ಕಾರಟ್

ಪ್ರಧಾನಿ ನರೇಂದ್ರ ಮೋದಿ ಏಪ್ರಿಲ್ 17ರಂದು ಪಶ್ಚಿಮ ಬಂಗಾಳದ ಅಸನ್ಸೋಲ್‌ನಲ್ಲಿ ಚುನಾವಣಾ ರ‍್ಯಾಲಿಗೆ ದೊಡ್ಡ ಸಂಖ್ಯೆಯಲ್ಲಿ ಬಂದದ್ದಕ್ಕಾಗಿ ಜನಗಳನ್ನು ಅಭಿನಂದಿಸುತ್ತಿರುವಾಗಲೇ ಕೊವಿಡ್–19 ಹೊಸ ಪ್ರಕರಣಗಳು 2,34,000 ದಾಟಿತ್ತು. ತಾವು ಯಾವತ್ತೂ ರ‍್ಯಾಲಿಯಲ್ಲಿ ಈ ಪರಿಯ ಜನಸ್ತೋಮ ಕಂಡಿರಲಿಲ್ಲ ಎಂದು ಅವರು ಸಾರಿದರು.

ಸಾವಿರಾರು ಜನರ ಜೀವನವನ್ನು ಅಪಾಯಕ್ಕೊಡ್ಡುವ ಈ ನಿರ್ದಯ ರಾಜಕೀಯವು ಎಲ್ಲೆಡೆ ಮಹಾಸೋಂಕಿನ ವಿನಾಶಲೀಲೆಗೆ ಮೋದಿ–ಷಾ ಜೋಡಿಯ ಕ್ರಿಮಿನಲ್ ಹೊಣೆಗಾರಿಕೆ ಒಳ್ಳೆಯ ಉದಾಹರಣೆಯಾಗಿದೆ. ಒಂದು ವಾರ ಕಾಲ ದೇಶದಲ್ಲಿ ದೈನಿಕ ಕೊವಿಡ್–19 ಪ್ರಕರಣಗಳ ಸಂಖ್ಯೆ ಎರಡು ಲಕ್ಷ ದಾಟುತ್ತಿದ್ದಾಗ, ಬಂಗಾಳದಲ್ಲಿ ಮೋದಿ ಮತ್ತು ಷಾ, ಸರದಿಯಂತೆ ಪ್ರಚಾರ ರ‍್ಯಾಲಿಗಳಲ್ಲಿ ಭಾಷಣ ಮಾಡುತ್ತಿದ್ದರು.

ಜನರ ಮೇಲೆರಗಿರುವ ಅನಾಹುತ ಅತ್ಯಂತ ಯಾತನಾಮಯ. ಆಸ್ಪತ್ರೆಗಳಲ್ಲಿ ಬೆಡ್‌ಗಳು ಸಿಗುತ್ತಿಲ್ಲ. ರೋಗಿಗಳಿಗೆ ಆಮ್ಲಜನಕ ಲಭ್ಯವಾಗುತ್ತಿಲ್ಲ. ಸಮಯಕ್ಕೆ ಸರಿಯಾಗಿ ಕೊವಿಡ್ ಟೆಸ್ಟ್ ನಡೆಯುತ್ತಿಲ್ಲ. ಲಸಿಕೆಗಳು ಖಾಲಿಯಾಗಿವೆ. ಸತ್ತವರ ಅಂತ್ಯಕ್ರಿಯೆ ನಡೆಸಲು ಸ್ಮಶಾನಗಳಲ್ಲಿ ಸ್ಥಳವಿಲ್ಲ.

ಇಂಥ ಮಾನವ ನಿರ್ಮಿತ ಆಪತ್ತಿನ ನಡುವೆಯೇ ಮೋದಿ ಮತ್ತು ಷಾ ಬಂಗಾಳವನ್ನು ತೆಕ್ಕೆಗೆ ಹಾಕಿಕೊಳ್ಳಲು ಹೊರಟಿದ್ದಾರೆ. ಏನಾದರೂ ಮಾಡಿ ಚುನಾವಣೆಯಲ್ಲಿ ಗೆಲ್ಲಬೇಕೆಂಬುದಷ್ಟೇ ಅವರ ಗುರಿ. ಜನರ ಪಾಡು ಏನಾದರೆ ನಮಗೇನು ಎಂಬ ತಾತ್ಸಾರ ಭಾವನೆ.

ಸಾವು ಮತ್ತು ವಿನಾಶದ ಎರಡನೇ ಅಲೆ ಎದುರಿಸಲು ದೇಶ ಒಂದಿಷ್ಟೂ ಸಿದ್ಧವಾಗಿಲ್ಲದಿದ್ದುದಕ್ಕೆ ಮೋದಿ ಸರ್ಕಾರವೇ ಹೊಣೆ ಎಂಬುದಕ್ಕೆ ಈಗ ಎಳ್ಳಷ್ಟೂ ಸಂದೇಹವಿಲ್ಲ.

ಜಗತ್ತಿಗೇ ಸ್ಫೂರ್ತಿಎಂಬ ಭ್ರಮೆ

ಜನವರಿಯಲ್ಲಿ, ಮಹಾಸೋಂಕಿನ ವಿರುದ್ಧದ ಹೋರಾಟದಲ್ಲಿ ದೇಶ ಯಶಸ್ವಿಯಾಗಿದೆ ಎಂದು ಮೋದಿ ಘೋಷಿಸಿದರು. ಜನವರಿ 29ರಂದು 'ವಿಶ್ವ ಆರ್ಥಿಕ ವೇದಿಕೆ'ಯ ದಾವೋಸ್ ಸಮಾವೇಶ ಉದ್ದೇಶಿಸಿ ಮಾತನಾಡಿದ ಮೋದಿ, ಕೊವಿಡ್–19 ಮಹಾಸೋಂಕನ್ನು ನಿಭಾಯಿಸುವಲ್ಲಿ ಭಾರತದ ಪ್ರಗತಿಯನ್ನು ಶ್ಲಾಘಿಸುತ್ತ, "ಭಾರತ ಕೊವಿಡ್–19ನ್ನು ನಿರ್ವಹಿಸುವ ಮೂಲಕ ಜಗತ್ತನ್ನು ಮಹಾ ದುರಂತದಿಂದ ರಕ್ಷಿಸಿದೆ' ಎಂದಿದ್ದರು. "ಸದ್ಯಕ್ಕೆ ನಮ್ಮಲ್ಲಿ ಎರಡು ಭಾರತದಲ್ಲಿ ಮಾಡಿದ ಲಸಿಕೆಗಳಿವೆ. ಮುಂದಿನ ದಿನಗಳಲ್ಲಿ ಇನ್ನಷ್ಟು ಲಸಿಕೆಗಳು ಲಭ್ಯವಾಗಲಿವೆ. ಇತರ ದೇಶಗಳಿಗೂ ದೊಡ್ಡ ಪ್ರಮಾಣದಲ್ಲಿ ಹಾಗೂ ವೇಗವಾಗಿ ಬೆಂಬಲ ನೀಡಲು ಇದರಿಂದ ಸಾಧ್ಯವಾಗುತ್ತದೆ" ಎಂದೂ ಅವರು ಹೇಳಿದ್ದರು.

ಫೆಬ್ರವರಿಯಲ್ಲಿ, ಭಾರತದ ಕೊವಿಡ್–ವಿರೋಧಿ ಹೋರಾಟ ಇಡೀ ಜಗತ್ತಿಗೆ ಸ್ಫೂರ್ತಿದಾಯಕವಾಗಿದೆ ಎಂದು ಮೋದಿ ಹೇಳಿದ್ದರು. ಮಾರ್ಚ್ 11ರಂದು ನಡೆದ ಕ್ವಾಡ್ ಸಮ್ಮೇಳನದಲ್ಲಿ, ಭಾರತ–ಶಾಂತಸಾಗರ ವಲಯಕ್ಕೆ ಲಸಿಕೆ ಸರಬರಾಜು ಮಾಡುವ ಮಹಾನ್ ಪಾತ್ರವನ್ನು ಭಾರತಕ್ಕೆ ವಹಿಸಲಾಯಿತು. ಅಮೆರಿಕ ಅಧ್ಯಕ್ಷ ಬೈಡೆನ್ ಭಾರತಕ್ಕೆ ಈ ಕೆಲಸ ವಹಿಸಿದ್ದರು. ಆದರೆ, ಅದೇ ಹೊತ್ತಿಗೆ ಲಸಿಕೆ ತಯಾರಿಸಲು ಬೇಕಾದ ವಸ್ತುಗಳನ್ನು ಭಾರತಕ್ಕೆ ರಫ್ತು ಮಾಡುವುದನ್ನು ಅಮೆರಿಕ ನಿಷೇಧಿಸಿತ್ತು.

ಭಾರತ "ವಿಶ್ವ ಗುರು'ವಿನ ಪಾತ್ರವನ್ನು ನಿರ್ವಹಿಸುತ್ತಿದೆ ಎಂದು ಮೋದಿಯವರು ಉಬ್ಬಿ ಹೋಗಿದ್ದರು. ವಿಶ್ವ ಗುರು ಎಂಬುದು ಆರ್‌ಎಸ್‌ಎಸ್‌ನ ಬಹುಪ್ರಿಯ ಪದಪುಂಜ. ಆದರೆ ದುರದೃಷ್ಟವಶಾತ್, ಇಂಥದ್ದೊಂದು ದುರಹಂಕಾರಕ್ಕೆ ದೇಶವೇ ಭಾರಿ ಬೆಲೆ ತೆರುವಂತೆ ಆಗಿದೆ.

ಈ ಸಂಕೇತವನ್ನು ಅನುಸರಿಸಿ ಕೇಂದ್ರ ಆರೋಗ್ಯ ಸಚಿವ ಹರ್ಷ ವರ್ಧನ್ "ಭಾರತ ಕೊವಿಡ್–19 ಆಟದ ಕೊನೆ ಹಂತದಲ್ಲಿದೆ' ಎಂದು ಮಾರ್ಚ್‌ನಲ್ಲಿ ಘೋಷಿಸಿದ್ದರು. ವಾಸ್ತವವಾಗಿ ದೇಶದಲ್ಲಿ ಸೋಂಕಿನ ಪ್ರಕರಣಗಳು ಹೆಚ್ಚುತ್ತಿದ್ದ ಸಮಯದಲ್ಲಿ ಅವರು ಮಾತನ್ನು ಹೇಳಿದ್ದರು. ಸರಳ ಸಂಗತಿಯೆಂದರೆ, ವ್ಯಾಧಿಯ ವಿರುದ್ಧ ಯಶಸ್ಸು ಸಾಧಿಸಲಾಗಿದೆ ಎಂದು ಘೋಷಿಸಿದ್ದರಿಂದ ಸರಕಾರ ಮತ್ತು ಆರೋಗ್ಯ ಅಧಿಕಾರಿಗಳು ತಮ್ಮ ಅಸ್ತ್ರಗಳನ್ನು ಕೆಳಗೆ ಇಳಿಸಿದ್ದರು ಎನ್ನುವುದು ಸ್ಪಷ್ಟ.

ಜನರ ನಿರ್ಲಕ್ಷ್ಯ ಎಂಬ ದೂಷಣೆ

ವೈರಸ್ ಮತ್ತೆ ಮೇಲೆದ್ದು ಬಂದು ಹಾವಳಿ ಆರಂಭಿಸಿದಾಗ ಆಳುವ ವಲಯಗಳು ಜನರ ನಿರ್ಲಕ್ಷ್ಯವೇ, ಕೊವಿಡ್ ನಡವಳಿಕೆಗಳನ್ನು ಪಾಲಿಸದಿದ್ದುದೇ ಇದಕ್ಕೆ ಹೊಣೆಯೆಂದು ದೂರಲು ಆರಂಭಿಸಿದವು. ವಾಸ್ತವವಾಗಿ ಒಂದು ಹೊಸ ದುಪ್ಪಟ್ಟು ರೂಪಾಂತರಿ ಭಾರತೀಯ ಪ್ರಭೇದದ ವೈರಾಣು ಇರುವಿಕೆ ಕುರಿತ ಹೆಚ್ಚುತ್ತಿರುವ ಪುರಾವೆಯನ್ನು ಕಡೆಗಣಿಸಲಾಯಿತು. ಈ ಪ್ರಬೇಧದ ಮೊದಲ ಸ್ಯಾಂಪಲ್ ಕಳೆದ ವರ್ಷ ಅಕ್ಟೋಬರ್ 5ರಂದೇ ಜಿನೋಮ್ ಸೀಕ್ವೆನ್ಸಿಂಗ್‌ನಿಂದ ಗೊತ್ತಾಗಿತ್ತು ಎನ್ನುವುದು ಈಗ ತಿಳಿದು ಬಂದಿರುವ ಸಂಗತಿ. ಆದರೆ ಜೀನ್ ಸೀಕ್ವೆನ್ಸಿಂಗ್ ಮುಂದುವರಿಸಲು ಸರಿಯಾದ ಮಾರ್ಗದರ್ಶನ ನೀಡಲಿಲ್ಲ ಅಥವಾ ಪ್ರಯತ್ನಗಳನ್ನು ನಡೆಸಿಲ್ಲ. ತುಂಬಾ ದುಬಾರಿ ಹಾಗೂ ಹೆಚ್ಚು ಸಮಯ ಬೇಕಾಗುವ ಈ ಪ್ರಕ್ರಿಯೆಗೆ ಕೇವಲ 80 ಕೋಟಿ ರೂಪಾಯಿ ಒದಗಿಸಲಾಗಿತ್ತೆನ್ನುವುದು ಇಂಡಿಯನ್ ಎಕ್ಸ್‌ಪ್ರೆಸ್ ಪತ್ರಿಕೆಯ ವರದಿಯಿಂದ ತಿಳಿದು ಬಂದಿದೆ. ಹೆಚ್ಚು ಸೋಂಕುಕಾರಕವಾದ ಪ್ರಭೇದವನ್ನು ಪತ್ತೆ ಹಚ್ಚುವಲ್ಲಿ ವೈಫಲ್ಯ ಹಾಗೂ ಅದು ಹರಡಿದ್ದೇ ಈ ಎಲ್ಲದರ ಒಟ್ಟಾರೆ ಫಲಶೃತಿಯಾಗಿದೆ.

ಮಹಾರಾಷ್ಟ್ರ, ದೆಹಲಿ ಮತ್ತು ದೇಶದ ಇತರ ಭಾಗಗಳಲ್ಲಿ ವೈದ್ಯಕೀಯ ಆಮ್ಲಜನಕದ ಕೊರತೆ ಕಾಡುತ್ತಿದೆ. ಆಸ್ಪತ್ರೆಗಳಲ್ಲಿ ಆಕ್ಸಿಜನ್ ಇಲ್ಲದೆ ರೋಗಿಗಳು ಸಾಯುತ್ತಿದ್ದಾರೆ. ಮೊದಲ ಅಲೆಯ ನಂತರ ಮೆಡಿಕಲ್ ಆಕ್ಸಿಜನ್ ಉತ್ಪಾದನೆ ಹೆಚ್ಚಿಸಲು ಕೇಂದ್ರ ಸರ್ಕಾರ ವಿಫಲವಾಗಿದೆ. ದೇಶದಾದ್ಯಂತ 150 ಜಿಲ್ಲಾ ಆಸ್ಪತ್ರೆಗಳಲ್ಲಿ ಆಕ್ಸಿಜನ್ ಸ್ಥಾವರ ಸ್ಥಾಪಿಸಲು ಕೇವಲ 200 ಕೋಟಿ ರೂಪಾಯಿಯ ಟೆಂಡರ್‌ಅನ್ನು ಆರೋಗ್ಯ ಸಚಿವಾಲಯದ ಸಂಸ್ಥೆಯೊಂದು ಕರೆದಿತ್ತೆನ್ನುವುದು ಈಗ ತಿಳಿದು ಬಂದಿದೆ. ಮಹಾಸೋಂಕು ದಾಂಗುಡಿಯಿಟ್ಟ ಎಂಟು ತಿಂಗಳ ನಂತರ ಇದನ್ನು ಮಾಡಲಾಗಿತ್ತು. ಈ ವರ್ಷದ ಮಾರ್ಚ್ ಹೊತ್ತಿಗೆ ಕೇವಲ 33 ಸ್ಥಾವರಗಳನ್ನು ಸ್ಥಾಪಿಸಲಾಗಿದೆ.

*** ಅವೈಜ್ಞಾನಿಕ ಲಸಿಕೆ ನೀತಿ**

ಇನ್ನು, ಲಸಿಕೆಗಳ ಬಗ್ಗೆ ಹೇಳುವುದಾದರೆ, ಭಾರತದಲ್ಲೇ ತಯಾರಾದ (ಮೇಡ್ ಇನ್ ಡಿಂಡಿಯಾ) ಎರಡು ಲಸಿಕೆಗಳು ಲಭ್ಯವಿದ್ದು ಲಸಿಕೆ ಅಭಿಯಾನದ ಮೊದಲ ಹಂತದಲ್ಲಿ 30 ಕೋಟಿ ಜನರಿಗೆ ಅದು ಸಾಕಾಗುತ್ತದೆ ಎಂದು ಮೋದಿ ಸರ್ಕಾರ ಟಾಂಟಾಂ ಬಾರಿಸಿತ್ತು. ನಿಜ ಹೇಳಬೇಕೆಂದರೆ ಮೇಡ್ ಇನ್ ಇಂಡಿಯಾ ಲಸಿಕೆ ಎನ್ನುವುದೇ ಒಂದು ಬೋಗಸ್ ಘೋಷಣೆ. ಯಾಕೆಂದರೆ ಪ್ರಮುಖ ಲಸಿಕೆಯಾದ ಕೋವಿಶೀಲ್ಡ್‌ಅನ್ನು ಅಸ್ಟ್ರಾಜೆನೆಕಾ–ಆಕ್ಸ್‌ಫರ್ಡ್ ಯೋಜನೆ ಅಭಿವೃದ್ಧಿಪಡಿಸಿದ್ದು ಅದನ್ನು ಭಾರತದಲ್ಲಿ ಉತ್ಪಾದಿಸಲು ಪುಣೆಯ ಸೀರಂ ಸಂಸ್ಥೆಗೆ ಲೈಸೆನ್ಸ್ ನೀಡಲಾಗಿದೆ, ಅಷ್ಟೆ. ಲಭ್ಯವಿರುವ ಕಡೆಯಿಂದೆಲ್ಲ ದೊಡ್ಡ ಪ್ರಮಾಣದಲ್ಲಿ ಲಸಿಕೆ ಬುಕ್ ಮಾಡಲು ವಿಫಲವಾದ ಮೋದಿ ಸರ್ಕಾರ ಈಗ ಬ್ರಿಡ್ಜ್ ಟ್ರಯಲ್ ನಡೆಸಬೇಕೆಂಬ ನಿಯಮದಿಮದ ವಿನಾಯ್ತಿ ಕೊಟ್ಟು ವಿದೇಶಗಳಿಂದ ವ್ಯಾಕ್ಸಿನ್ ಪಡೆಯಲು ಪ್ರಯತ್ನಿಸುತ್ತಿದೆ.

ಇದೀಗ ಹೊಸ ಲಸಿಕೆ ನೀತಿ ಪ್ರಕಟಿಸುವ ಮೂಲಕ, ಸಾರ್ವತ್ರಿಕವಾಗಿ ಉಚಿತವಾಗಿ ಲಸಿಕೆ ನೀಡುವ ಜವಾಬ್ದಾರಿಯಿಂದ ಕೇಂದ್ರ ಸರ್ಕಾರ ನುಣುಚಿಕೊಂಡಿದೆ. 45ಕ್ಕಿಂತ ಕೆಳಗಿನ ವಯಸ್ಸಿನ ಜನರಿಗೆ ಲಸಿಕೆ ನೀಡುವ ಭಾರವನ್ನು ರಾಜ್ಯ ಸರ್ಕಾರಗಳ ಹೆಗಲಿಗೆ ವರ್ಗಾಯಿಸಲಾಗಿದೆ. ಉತ್ಪಾದಕರಿಂದ ಮುಕ್ತ ಮಾರುಕಟ್ಟೆಯಲ್ಲಿ ಲಸಿಕೆ ಖರೀದಿಸುವಂತೆ ರಾಜ್ಯಗಳಿಗೆ ಸೂಚಿಸಲಾಗಿದೆ.

ಲಸಿಕೆ ಅಭಿಯಾನಕ್ಕಾಗಿ ಕೇಂದ್ರ ಸರ್ಕಾರ ಬಜೆಟ್‌ನಲ್ಲಿ 35,000 ಕೋಟಿ ರೂಪಾಯಿ ನಿಗದಿಪಡಿಸಿದೆ. ಆದರೆ ಅದರ ಅತ್ಯಲ್ಪ ಭಾಗವನ್ನು ಮಾತ್ರ ಖರ್ಚು ಮಾಡಿದೆ. ಲಸಿಕೆ ಅಭಿಯಾನದ ಮುಂದಿನ ಸುತ್ತುಗಳ ವೆಚ್ಚವನ್ನು ಭರಿಸುವಂತೆ ರಾಜ್ಯ ಸರ್ಕಾರಗಳನ್ನು ಕೇಂದ್ರ ಒತ್ತಾಯಿಸುತ್ತಿದೆ.

ಹಿಂದುತ್ವ ಕಣ್ಣುಪಟ್ಟಿ

ಮಹಾಸೋಂಕು ಕಾಡಿದ ಇಡೀ ವರ್ಷದುದ್ದಕ್ಕೂ ಕೇಂದ್ರ ಸರ್ಕಾರ ಸಾರ್ವಜನಿಕ ಆರೋಗ್ಯ ಮೂಲಸೌಕರ್ಯಕ್ಕಾಗಿ ಸಾಕಷ್ಟು ಮತ್ತು ಸಮರ್ಪಕವಾದ ಹೆಚ್ಚುವರಿ ವೆಚ್ಚವನ್ನು ಮಾಡಿಲ್ಲ. ಮೆಡಿಕಲ್ ಆಕ್ಸಿಜನ್ ಉತ್ಪಾದನೆ ಮಾತ್ರವಲ್ಲದೆ ಸಾರ್ವಜನಿಕ ಆರೋಗ್ಯ ವ್ಯವಸ್ಥೆ ಸುಧಾರಣೆಗೆ ಹೆಚ್ಚು ಹಣ ಖರ್ಚು ಮಾಡಲು ಕೇಂದ್ರ ಸರ್ಕಾರ ನಿರಾಕರಿಸಿದೆ.

ಈ ನಿರ್ಲಕ್ಷ್ಯ ಮತ್ತು ಆತ್ಮತೃಪ್ತಿಯ ಜೊತೆಯಲ್ಲಿ ಸರ್ಕಾರದ ಅವೈಜ್ಞಾನಿಕ ಹಾಗೂ ಕಣ್ಣುಪಟ್ಟಿ ಕಟ್ಟಿಕೊಂಡ ಹಿಂದುತ್ವ ದೃಷ್ಟಿಕೋನವೂ ಇದರ ಹಿಂದೆ ಇರುವುದನ್ನು ಗಮನಿಸಬೇಕು. ಅಂಧ ಶ್ರದ್ಧೆ ಮತ್ತು ಮೂಢನಂಬಿಕೆಯನ್ನು ಪೋಷಿಸುವ ಒಂದು ಪ್ರಮುಖ ಉದಾಹರಣೆಯೆಂದರೆ, 'ಲಕ್ಷಾಂತರ ಜನರು ಬಂದು ಸೇರಿದ ಹರಿದ್ವಾರದ ಕುಂಭಮೇಳ ನಡೆಯಲು ಅವಕಾಶ ಕೊಟ್ಟಿದ್ದು. 12 ವರ್ಷಕ್ಕೊಮ್ಮೆ ನಡೆಯುವ ಕುಂಭ ಮೇಳ 2022ರಲ್ಲಿ ನಡೆಯಬೇಕಿತ್ತು. ಆದರೆ ಜ್ಯೋತಿಷ್ಯಶಾಸ್ತ್ರದ ಲೆಕ್ಕಾಚಾರದಂತೆ ಅದನ್ನು ಮುಂಚಿತವಾಗಿ ಆಯೋಜಿಸಲಾಗಿತ್ತು. ಉತ್ತರಾಖಂಡದ ಬಿಜೆಪಿ ಸರ್ಕಾರ ಮತ್ತು ಕೇಂದ್ರ ಸರ್ಕಾರ, ಹೀಗೆ ಎರಡೂ ಸರ್ಕಾರಗಳು ಯಾವುದೇ ನಿಯಮ–ನಿರ್ಬಂಧಗಳ ಗೋಜಿಲ್ಲದೆ ಕುಂಭ ಮೇಳ ನಡೆಸಲು ಖುಲ್ಲಂಖುಲ್ಲಾ ಅನುಮತಿ ನೀಡಿದ್ದವು. ಸಾರ್ವಜನಿಕ ಆಕ್ರೋಶ ವ್ಯಕ್ತವಾಗಿದ್ದಲ್ಲದೆ ಶರವೇಗದಲ್ಲಿ ವ್ಯಾಪಿಸುತ್ತಿರುವ ಸಾಂಕ್ರಾಮಿಕತೆ ಬಗ್ಗೆ ಜಾಗತಿಕ ಗಮನ ಕೇಂದ್ರೀಕರಣಗೊಂಡ ನಂತರವಷ್ಟೆ ಮೋದಿ, ಕುಂಭದ ಕೊನೆ ಹಂತ ಸಾಂಕೇತಿಕವಾಗಿರಬೇಕೆಂದು ಮನವಿ ಮಾಡಿದರು.

ಮೋದಿ ಸರ್ಕಾರದ ಆತ್ಮತೃಪ್ತಿ, ಕೆಟ್ಟ ನಿರ್ವಹಣೆ ಮತ್ತು ದೂರದೃಷ್ಟಿಯಿಲ್ಲದ ಧೋರಣೆಯಿಂದಾಗಿಯೆ ಭಾರತದ ಮೇಲೆ ಈ ಸಾರ್ವಜನಿಕ ಆರೋಗ್ಯ ವಿಪತ್ತು ಎರಗಿದೆ. ದೀರ್ಘಕಾಲದಿಂದ ಸಾರ್ವಜನಿಕ ಆರೋಗ್ಯವನ್ನು ನಿರ್ಲಕ್ಷಿಸಿದ್ದು ಹಾಗೂ ಕಳೆದ ಮೂರು ದಶಕಗಳಲ್ಲಿ ಆರೋಗ್ಯ ಕ್ಷೇತ್ರವನ್ನು ಖಾಸಗೀಕರಿಸಲು ನಡೆಸಿದ ಪ್ರಯತ್ನಗಳ ಫಲವೂ ಇದಾಗಿದೆ.

ಆಶಾವಾದದ ಮಿಣುಕು ದ್ವೀಪ

ಆದರೆ, ಹತಾಶೆಯ ಮಹಾಸಾಗರದ ನಡುವೆಯೂ ಆಶಾವಾದದ ಚಿಕ್ಕ ದ್ವೀಪವೊಂದು ಕಾಣಿಸಿದೆ. ಅದು ಮುಂದಿನ ದಾರಿ ತೋರಿಸುತ್ತದೆ. ಮಹಾರಾಷ್ಟ್ರ ಮತ್ತು ದೆಹಲಿಯಂಥ ಅಭಿವೃದ್ಧಿ ಹೊಂದಿದ ಹಾಗೂ ಶ್ರೀಮಂತ ರಾಜ್ಯಗಳು ಆಕ್ಸಿಜನ್‌ಗಾಗಿ ಪರದಾಡುತ್ತಿದ್ದಾಗ, ಕೇರಳದಲ್ಲಿ ಪ್ರಾಣವಾಯುವಿನ ಕೊರತೆ ಇಲ್ಲ. ವಾಸ್ತವವಾಗಿ ಕೇರಳದಲ್ಲಿ ಹೆಚ್ಚುವರಿ ಮೆಡಿಕಲ್ ಆಕ್ಸಿಜನ್ ಇತ್ತು. ಅದು ಕೊವಿಡ್–19 ವಿರುದ್ಧದ ಹೋರಾಟದಲ್ಲಿ ನೆರವಾಗಲು ತಮಿಳು ನಾಡು, ಕರ್ನಾಟಕ, ಗೋವಾ ಮತ್ತು ಲಕ್ಷದ್ವೀಪಕ್ಕೆ ಆಕ್ಸಿಜನ್ ಸರಬರಾಜು ಮಾಡಿದೆ. ಆಕ್ಸಿಜನ್ ಉತ್ಪಾದನೆ ಸಾಮರ್ಥ್ಯವನ್ನು ಹೆಚ್ಚಿಸಲು ಅದು ರಾಜ್ಯ ಸರ್ಕಾರಿ ಸ್ವಾಮ್ಯದ ಸಾರ್ವಜನಿಕ ವಲಯದಲ್ಲಿ ಹೂಡಿಕೆಯನ್ನು ಹೆಚ್ಚಿಸಿದೆ. ಹೆಚ್ಚುವರಿ ಆಕ್ಸಿಜನ್ ಹೊಂದಲು ಇದುವೇ ಕಾರಣವಾಗಿದೆ. ಎಪ್ರಿಲ್ 2020ಕ್ಕೆ ಹೋಲಿಸಿದರೆ, ವೈದ್ಯಕೀಯ ಆಮ್ಲಜನಕ ಉತ್ಪಾದನೆ 50 ಲೀಟರ್ ಪ್ರತಿ ನಿಮಿಷದಿಂದ , ಎಪ್ರಿಲ್ 20021ರಲ್ಲಿ 1250 ಲೀಟರ್ ಪ್ರತಿನಿಮಿಷಕ್ಕೆ ಏರಿದೆ.

ಕೇರಳ ರಾಜ್ಯ ಸರ್ಕಾರ ಸಾರ್ವಜನಿಕ ಆರೋಗ್ಯ ವ್ಯವಸ್ಥೆಯನ್ನು ಯೋಜಿತ ರೀತಿಯಲ್ಲಿ ಅಭಿವೃದ್ಧಿ ಪಡಿಸಿದ್ದು ಹಾಗೂ ಅದಕ್ಕೆ ನೀಡಿದ ಆದ್ಯತೆಯೇ ಇದಕ್ಕೆ ಕಾರಣವಾಗಿದೆ. ಕೇರಳದಲ್ಲಿ ಕೊವಿಡ್ ಚಿಕಿತ್ಸೆ ಅಗತ್ಯವಾದ ಶೇಕಡ 95ಕ್ಕೂ ಹೆಚ್ಚು ಜನರು ಸರ್ಕಾರಿ ಆಸ್ಪತ್ರೆಗಳಲ್ಲಿ ಉಚಿತವಾಗಿ ಚಿಕಿತ್ಸೆ ಪಡೆದಿದ್ದಾರೆನ್ನುವುದು ಗಮನಾರ್ಹ ವಿಚಾರ. ಖಾಸಗಿ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆದವರ ವೆಚ್ಚವನ್ನೂ ರಾಜ್ಯ ಸರ್ಕಾರವೇ ಭರಿಸಿದೆ.

ಬೇರೆ ರಾಜ್ಯಗಳಂತಲ್ಲದೆ, ಕೇರಳದಲ್ಲಿ ಒಂದಿನಿತೂ ವ್ಯರ್ಥವಾಗದೆ ಲಸಿಕೆಯನ್ನು ನೂರಕ್ಕೆ ನೂರರಷ್ಟು ಬಳಸಿಕೊಳ್ಳಲಾಗಿದೆ ಎಂದು ಕೇಂದ್ರ ಆರೋಗ್ಯ ಸಚಿವಾಲಯವೇ ಹೇಳಿದೆ. 88 ಲಕ್ಷ ಕುಟುಂಬಗಳಿಗೆ ಈಗಲೂ ಉಚಿತ ಆಹಾರ ಕಿಟ್ ವಿತರಿಸಲಾಗುತ್ತಿದೆ. ಯಾರೂ ಹಸಿವಿನಿಂದ ಇರಬಾರದು ಎನ್ನುವುದೇ ರಾಜ್ಯದ ಎಲ್‌ಡಿಎಫ್ ಸರ್ಕಾರದ ಧ್ಯೇಯವಾಗಿದೆ. ಅಂದರೆ, ಸಾರ್ವಜನಿಕ ಆರೋಗ್ಯಕ್ಕೆ ಬದ್ಧತೆಯಿದ್ದರೆ ಹಾಗೂ ರಾಜಕೀಯ ಇಚ್ಛಾಶಕ್ತಿಯಿದ್ದರೆ ಆರೋಗ್ಯ ತುರ್ತು ಪರಿಸ್ಥಿತಿಯನ್ನು ನಿಭಾಯಿಸಬಹುದು ಎನ್ನುವುದನ್ನು ಇದು ತೋರಿಸಿಕೊಟ್ಟಿದೆ.

ದೇಶದ ಸಾರ್ವಜನಿಕ ಆರೋಗ್ಯ ವಿಪತ್ತಿನೊಂದಿಗೆ ಅನಿವಾರ್ಯವಾಗಿಯೇ ಇನ್ನೊಂದು ಸುತ್ತಿನ ಆರ್ಥಿಕ ಬಿಕ್ಕಟ್ಟು ಹಾಗೂ ಉದ್ಯೋಗ ನಷ್ಟ ಉಂಟಾಗಲಿದೆ. ಪ್ರಸಕ್ತ ಬಿಕ್ಕಟ್ಟನ್ನು ಎದುರಿಸಬೇಕಾದರೆ ಮೋದಿ ಸರ್ಕಾರ ಸಂಕುಚಿತ, ಪಂಥವಾದಿ, ನವ ಉದಾರವಾದಿ–ಹಿಂದುತ್ವ ದೃಷ್ಟಿಕೋನವನ್ನು ಬಿಟ್ಟುಬಿಡಬೇಕು. ಮತ್ತು ಜನರಿಗೆ ಪರಿಹಾರ ಒದಗಿಸಲು ಆರ್ಥಿಕ ಹಾಗೂ ಭೌತಿಕ, ಹೀಗೆ ಎಲ್ಲ ಸಂಪನ್ಮೂಲಗಳನ್ನು ಕ್ರೋಡೀಕರಿಸಬೇಕು.

ಅನು: **ವಿಶ್ವ**

ದಿಲ್ಲಿ ಗಡಿಗಳಲ್ಲಿ ರೈತರ ಹೋರಾಟಕ್ಕೆ 150 ದಿನಗಳು

‘ಆಪರೇಷನ್ ಕ್ಲೀನ್’ ಗೆ ಎದುರಾಗಿ ‘ಆಪರೇಷನ್ ಶಕ್ತಿ’



ನರೇಂದ್ರ ಮೋದಿ ನೇತೃತ್ವದ ಬಿಜೆಪಿ ಸರಕಾರದ ಮೂರು ಕೃಷಿ ಕಾಯ್ದೆಗಳು ಮತ್ತು ಒಂದು ಮಸೂದೆಯ ವಿರುದ್ಧ ದಿಲ್ಲಿ ಗಡಿಗಳಲ್ಲಿ ನಡೆಯುತ್ತಿರುವ ರೈತರ ಹೋರಾಟ ಎಪ್ರಿಲ್ 24ರಂದು 150 ದಿನಗಳನ್ನು ಪೂರೈಸಿ ಮುಂದುವರೆಯುತ್ತಿದೆ.

ಉಕ್ಕೇರಿ ಬರುತ್ತಿರುವ ಕೊವಿಡ್ ಮಹಾಸೋಂಕಿನ ಎರಡನೇ ಅಲೆಯನ್ನು ಎದುರಿಸಲು ಯಾವುದೇ ಸಿದ್ಧತೆಗಳನ್ನು ಮಾಡಿಕೊಳ್ಳದ್ದರಿಂದ ಜನಗಳು ಆಸ್ಪತ್ರೆಗಳಲ್ಲಿ ಹಾಸಿಗೆಯಿಲ್ಲದೆ, ಆಕ್ಸಿಜನ್ ಇಲ್ಲದೆ, ಔಷಧಿಗಳಿಲ್ಲದೆ ಪರದಾಡುತ್ತಿರುವಾಗ, ಆ ಬಗ್ಗೆ ತಲೆಕೆಡಿಸಿಕೊಳ್ಳದೆ ಚುನಾವಣಾ ಪ್ರಚಾರದಲ್ಲಿಯೇ ಮುಳುಗಿದ್ದ ಸರಕಾರದ ಉನ್ನತ ಮುಖಂಡರು ಈಗ ಚುನಾವಣೆ ಮುಗಿಯುತ್ತಿದ್ದಂತೆಯೇ, ಯಾವುದೇ ನಾಚಿಕೆಯಿಲ್ಲದೆ ಅದೇ ಕೊವಿಡ್ ಎರಡನೇ ಅಲೆಯನ್ನು ನೆಪ ಮಾಡಿಕೊಂಡು ರೈತರನ್ನು ಅವರ ಪ್ರತಿಭಟನಾ ಪ್ರದೇಶಗಳಿಂದ ಎತ್ತಂಗಡಿ ಮಾಡುವ ‘ಆಪರೇಷನ್ ಕ್ಲೀನ್’ಗೆ ಸಿದ್ದತೆ ಮಾಡಿಕೊಳ್ಳುತ್ತಿದ್ದಾರೆಂದು ಸಂಯುಕ್ತ ಕಿಸಾನ್ ಮೋರ್ಚಾದ ಮುಖಂಡರು ಹೇಳಿದ್ದಾರೆ. ಈ ನಾಟಕ ಕೇಂದ್ರ ಕೃಷಿ ಮಂತ್ರಿ ಮತ್ತು ಹರ್ಯಾಣ ಮುಖ್ಯಮಂತ್ರಿ ಕೊವಿಡ್ ರಂಪಾಟದ ಹಿನ್ನೆಲೆಯಲ್ಲಿ ಚಳುವಳಿಯನ್ನು ಹಿಂತೆಗೆದುಕೊಳ್ಳಬೇಕು ಎಂದು ‘ಮನವಿ’ ಮಾಡಿಕೊಳ್ಳುವದರೊಂದಿಗೆ ಆರಂಭವಾಗಿದೆ ಎನ್ನುತ್ತಾರೆ ಅವರು.

ಇದಕ್ಕೆ ಪ್ರತಿಯಾಗಿ ಸಂಯುಕ್ತ ಕಿಸಾನ್ ಮೋರ್ಚಾ ಒಂದು ದ್ವಿವಿಧ ಕಾರ್ಯವ್ಯೂಹವನ್ನು ರೂಪಿಸಿದೆ ಎಂದು ಮೋರ್ಚಾದ ಮುಖಂಡರಲ್ಲಿ ಒಬ್ಬರಾಗಿರುವ ಅಖಿಲ ಭಾರತ ಕಿಸಾನ್ ಸಭಾದ ಅಧ್ಯಕ್ಷರಾದ ಅಶೋಕ ಧವಳೆ ಹೇಳಿದ್ದಾರೆ.

ರೈತರು ತಮ್ಮ ಮೇಲೆ ಸರಕಾರ ‘ಆಪರೇಷನ್ ಕ್ಲೀನ್’ ಹರಿಯ ಬಿಟ್ಟರೆ ಅದನ್ನು ಬಲವಾಗಿ ಪ್ರತಿರೋಧಿಸುತ್ತಾರೆ. ಸರಕಾರದ ಕಾರ್ಯಾಚರಣೆಗೆ ಪ್ರತಿಯಾಗಿ ರೈತರು ‘ಆಪರೇಷನ್ ಶಕ್ತಿ’ ನಡೆಸಲಿದ್ದಾರೆ ಎಂದು ಸಂಯುಕ್ತ ಕಿಸಾನ್ ಮೋರ್ಚಾ ಸರಕಾರವನ್ನು ಎಚ್ಚರಿಸಿದೆ.

ಎಪ್ರಿಲ್ 20–26:ಪ್ರತಿರೋಧ ವಾರಾಚರಣೆ

ಎಪ್ರಿಲ್ 20 ರಿಂದ 26 ರವರೆಗೆ “ಪ್ರತಿರೋಧ ವಾರಾಚರಣೆ” ನಡೆಯುತ್ತಿದೆ. ಇದರ ಭಾಗವಾಗಿ ದಿಲ್ಲಿ ಗಡಿಗಳಲ್ಲಿನ ಎಲ್ಲ ಪ್ರತಿಭಟನಾ ಸ್ಥಳಗಳಲ್ಲಿ ಕೊರೊನಾದಿಂದ ತಮ್ಮನ್ನು ರಕ್ಷಿಸಿಕೊಳ್ಳಲು ಬಲವಾದ ಏರ್ಪಾಡುಗಳನ್ನು ಮಾಡಿಕೊಳ್ಳುತ್ತಿದ್ದಾರೆ.

ಇನ್ನೊಂದೆಡೆಯಲ್ಲಿ **“ಫಿರ್ ದಿಲ್ಲಿ ಚಲೋ”** ಎಂಬ ಘೋಷಣೆ ಕೊಟ್ಟು, ಕೊಯ್ಲಿಗೆ ತಂತಮ್ಮ ಹಳ್ಳಿಗಳಿಗೆ ಹೋಗಿದ್ದ ರೈತರನ್ನು ಕೊಯ್ಲು ಮುಗಿದ ಕೂಡಲೇ ಮುಂದಿನ ವಾರ ಮತ್ತೆ ದಿಲ್ಲಿಗೆ ಬರುವಂತೆ ಆಹ್ವಾನಿಸಲಾಗಿದೆ. ಆಗಲೇ ರೈತರು ಪ್ರತಿಭಟನಾ ಸ್ಥಳಗಳಿಗೆ ಮರಳಲಾರಂಭಿಸಿದ್ದಾರೆ ಎಂದು ವರದಿಯಾಗಿದೆ.

ಕೊರೊನ ಹೋರಾಟ–ನಿರತ ರೈತರಿಗೆ ಹೊಸದೇನಲ್ಲ. ಈ ಚಳುವಳಿ ಆರಂಭವಾದಾಗಲೂ ಅದು ಇತ್ತು. ಅವರು ದಿಲ್ಲಿ ಗಡಿಗಳಿಗೆ ಬಂದಾಗಲೂ ಇತ್ತು. ಇದುವರೆಗೆ ಕೊರೊನಾ ಹರಡಿರುವ ಬಗ್ಗೆ ಯಾವುದೇ ಪ್ರತಿಭಟನಾ ಸ್ಥಳದಲ್ಲಿ ಬೊಟ್ಟುಮಾಡಿ ತೋರಿಸುವಂತದ್ದೇನೂ ನಡೆದಿಲ್ಲ ಎಂದು ಸ್ವತಂತ್ರ ವೀಕ್ಷಕರೂ ಹೇಳುತ್ತಿದ್ದಾರೆ ಎನ್ನುತ್ತಾರೆ ಈ ಬಗ್ಗೆ ಬರೆಯುತ್ತ ಅಶೋಕ ಧವಳೆ.

ಆದರೂ ದಿಲ್ಲಿ ಗಡಿಗಳ ಎಲ್ಲ ಪ್ರತಿಭಟನಾ ಸ್ಥಳಗಳಲ್ಲಿ ಈ ಕೆಳಗಿನ ಏರ್ಪಾಟುಗಳನ್ನು ಮಾಡಿಕೊಳ್ಳಲಾಗುವುದು ಎಂದು ಸಂಯುಕ್ತ ಕಿಸಾನ್ ಮೋರ್ಚಾ ಹೇಳಿದೆ.

* ಪ್ರತಿಯೊಂದು ಟ್ರಾಲಿ ಮತ್ತು ಟೆಂಟ್‌ನಲ್ಲಿ ಕೊರೊನದಿಂದ ರಕ್ಷಣೆಯ ಕ್ರಮಗಳ ಬಗ್ಗೆ ಮಾಹಿತಿಗಳನ್ನು ಹಂಚಿಕೊಳ್ಳಲಾಗುವದು.
* ಎಲ್ಲ ಪ್ರತಿಭಟನಾ ಸ್ಥಳಗಳಲ್ಲಿ ಮಾಸ್ಕ್‌ಗಳನ್ನು ಲಭ್ಯಗೊಳಿಸಲಾಗುವದು ಮತ್ತು ಅವುಗಳ ಬಳಕೆಯ ಬಗ್ಗೆ ತೀವ್ರ ಅಭಿಯಾನ ನಡೆಸಲಾಗುವುದು.
* 45 ವರ್ಷಗಳಿಗೆ ಮೇಲ್ಪಟ್ಟ ಎಲ್ಲ ಪ್ರತಿಭಟನಾಕಾರರು ಲಸಿಕೆ ತೆಗೆದುಕೊಳ್ಳಲು ಅನುಕೂಲವಾಗುವಂತೆ ಲಸಿಕೆ ಕ್ಯಾಂಪುಗಳನ್ನು ನಡೆಸಲಾಗುವುದು.
* ವೇದಿಕೆಗಳ ಬಳಿ ಮತ್ತು ದೈನಂದಿನ ಸಭೆಗಳಲ್ಲಿ ಸೋಂಕು ಹರಡದಂತೆ ತಡೆಯಲು ಏರ್ಪಾಡು ಮಾಡಲಾಗುವುದು.
* ಎಲ್ಲ ವೈದ್ಯಕೀಯ ಕ್ಯಾಂಪುಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಥರ್ಮಾಮೀಟರುಗಳು, ಆಕ್ಸಿಮೀಟರುಗಳು ಮತ್ತು ಇತರ ಉಪಕರಣಗಳನ್ನು ಲಭ್ಯಗೊಳಿಸಲಾಗುವುದು. ಕೊವಿಡ್ ಲಕ್ಷಣಗಳು ಕಂಡುಬಂದ ಕೂಡಲೆ ಚಿಕಿತ್ಸೆಗಳನ್ನು ಆರಂಭಿಸಲಾಗುವುದು.
* ಕೊವಿಡ್ ರಕ್ಷಣೆ ಮತ್ತು ಚಿಕಿತ್ಸೆಗೆ ಎಸ್.ಕೆ.ಎಂ. ಸ್ಥಳೀಯ ಆಡಳಿತದೊಂದಿಗೆ ಪೂರ್ಣವಾಗಿ ಸಹಕರಿಸುತ್ತದೆ.

ತದ್ವಿರುದ್ಧವಾಗಿ, ಕೊರೊನ ವಿರುದ್ಧ ಹೋರಾಟದ ಬಿಜೆಪಿ ಸರಕಾರಗಳ ಮಾತುಗಳಲ್ಲಿ ಬೂಟಾಟಿಕೆ ಇಡೀ ದೇಶದ ಎದುರು ಬಟ್ಟ ಬಯಲಾಗಿದೆ ಎಂದು ಸಂಯುಕ್ತ ಕಿಸಾನ್ ಮೋರ್ಚಾ ಮುಖಂಡರು ಹೇಳುತ್ತಾರೆ. ಇಂತಹ ಮಹಾಸೊಂಕಿನ ಸಮಯದಲ್ಲಿ ತಾವು ಅತೀ ಹೆಚ್ಚು ಸಂಖ್ಯೆಯಲ್ಲಿ ಚುನಾವಣಾ ರ್‍ಯಾಲಿಗಳಿಗೆ ಜನಗಳನ್ನು ಅಣಿನೆರೆಸಿದ್ದೇವೆ ಎಂದು ಸ್ವತಃ ಪ್ರಧಾನ ಮಂತ್ರಿಗಳು ಮತ್ತು ಗೃಹಮಂತ್ರಿಗಳು ಹೇಳಿಕೊಂಡಿದ್ದಾರೆ. ಇಂತಹ ಸರಕಾರಕ್ಕೆ ಮಹಾಸೋಂಕಿನ ಬಗ್ಗೆ ರೈತರಿಗೆ ಉಪದೇಶ ಕೊಡಲು ಯಾವ ನೈತಿಕ ಹಕ್ಕೂ ಇಲ್ಲ ಎಂದು ಸಂಯುಕ್ತ ಕಿಸಾನ್ ಮೋರ್ಚಾ ಹೇಳಿದೆ.

ತನ್ನ ವಿಫಲತೆಗಳಿಗೆಲ್ಲ ಸಾರ್ವಜನಿಕರನ್ನು ದೂಷಿಸುತ್ತ, ಅವರಿಗೆ ದಂಡ ಹಾಕುತ್ತ, ಪ್ರತಿಪಕ್ಷಗಳ ಸರಕಾರಗಳ ವಿರುದ್ಧ ತಾರತಮ್ಯದಿಂದ ವರ್ತಿಸುವ, ಇನ್ನೊಂದೆಡೆಯಲ್ಲಿ ಕಾರ್ಪೊರೇಟ್‌ಗಳಿಗೆ ಸೂಪರ್ ಲಾಭಗಳನ್ನು ಕಿತ್ತುಕೊಳ್ಳಲು ಮುಕ್ತ ಅವಕಾಶ ನೀಡುವ ಸರಕಾರ ಕೊವಿಡ್ ಹೆಸರಿನಲ್ಲಿ ಜನಗಳ ನಡುವೆ ಭೀತಿ ಹುಟ್ಟಿಸುತ್ತಿದೆ ಎಂದು ಮೋರ್ಚಾ ಖಂಡಿಸಿದೆ.

ಮೇ 10 ರಂದು ರಾಷ್ಟ್ರೀಯ ಸಮಾವೇಶ

ರೈತರ ಹೋರಾಟವನ್ನು ಇನ್ನಷ್ಟು ಶಕ್ತಿಯುತಗೊಳಿಸಲು ಮೇ 10 ರಂದು ಒಂದು ವಿಶೇಷ ರಾಷ್ಟ್ರೀಯ ಸಮಾವೇಶವನ್ನು ನಡೆಸಲಾಗುವುದು. ಇದರಲ್ಲಿ ದೇಶದ ಮೂಲೆ–ಮೂಲೆಗಳಿಂದ ರೈತ ಮುಖಂಡರು ಮತ್ತು ಪ್ರತಿನಿಧಿಗಳು ಭಾಗವಹಿಸಲಿದ್ದಾರೆ. ಜತೆಗೆ ಕಾರ್ಮಿಕರು, ಕೃಷಿಕೂಲಿಕಾರರು, ಮಹಿಳೆಯರು, ವಿದ್ಯಾರ್ಥಿಗಳು, ಯುವಜನರು ಮತ್ತು ಇತರ ಪ್ರಗತಿಪರ ಸಂಘಟನೆಗಳ ಮುಖಂಡರು, ಪಪ್ರತಿನಿಧಿಗಳೂ ಭಾಗವಹಿಸಲಿದ್ದಾರೆ.

ಮೇ 10 ಭಾರತದ ಸ್ವಾತಂತ್ರ್ಯ ಹೋರಾಟದ ಒಂದು ಚಾರಿತ್ರಿಕ ಮಹತ್ವದ ದಿನ. 1857ರಲ್ಲಿ ಈ ದಿನವೇ ಬ್ರಿಟಿಶ್ ಆಳರಸರಿಂದ ದೇಶದ ಸ್ವಾತಂತ್ರ್ಯಕ್ಕಾಗಿ ಮೊತ್ತಮೊದಲ ಸಮರ ಆರಂಭವಾಯಿತು. ಮೇರಠ್‌ನಲ್ಲಿ ಭಾರತೀಯ ಸೈನಿಕರ ಬಂಡಾಯ ಆರಂಭವಾಗಿ ಅವರು ದಿಲ್ಲಿಯತ್ತ ಹೊರಟರು.

ಇದಲ್ಲದೆ, ಯೋಜಿತ ‘ಸಂಸದ್ ಚಲೋ’ ದ ದಿನಾಂಕವನ್ನು ಮತ್ತು ನಿಖರವಾದ ವಿವರಗಳನ್ನು, ಸನ್ನಿವೇಶವನ್ನು ಗಣನೆಗೆ ತಗೊಂಡು ಸೂಕ್ತ ಸಮಯದಲ್ಲಿ ಪ್ರಕಟಿಸಲಾಗುವುದು ಎಂದು ಸಂಯುಕ್ತ ಕಿಸಾನ್ ಮೋರ್ಚಾ ನಿರ್ಧರಿಸಿದೆ.

ದಿಲ್ಲಿ ಪೋಲೀಸ್ ರೈತ ಮುಖಂಡರುಗಳನ್ನು ಹತ್ಯೆ ಮಾಡಲು ಯೋಜಿಸುತ್ತಿದ್ದ ಕೆಲವು ಸ್ನೈಪರ್‌ಗಳನ್ನು ಬಂಧಿಸಿದ್ದಾರೆ ಎಂಬ ಸುದ್ದಿಯ ಬಗ್ಗೆ ಕಳವಳ ವ್ಯಕ್ತಪಡಿಸುತ್ತ, ಇದರ ವಿವರಗಳನ್ನು ಸಾರ್ವಜನಿಕಗೊಳಿಸಬೇಕು, ಈ ಮೂಲಕ ಈ ಮೊದಲು ಆಗಿರುವಂತೆ ಇಂತಹ ಪಿತೂರಿಗಳನ್ನು ಪೋಲೀಸರು ಮುಚ್ಚಿಹಾಕದಂತೆ ಆಗಬೇಕು ಎಂದು ಸಂಯುಕ್ತ ಕಿಸಾನ್ ಮೋರ್ಚಾ ಹೇಳಿದೆ.

ಸಾರ್ವತ್ರಿಕ ಉಚಿತ ಲಸಿಕೆ ಮತ್ತು ಸಾರ್ವತ್ರಿಕ ಉಚಿತ ಆರೋಗ್ಯ ಪಾಲನೆಗಾಗಿ ಒಂದಾಗಿ ಹೋರಾಡೋಣ–ಸಿಐಟಿಯು ಮೇ ದಿನದ ಪ್ರಣಾಳಿಕೆಯ ಕರೆ

2021ರ ಮೇ ದಿನದ ಸಂದರ್ಭದಲ್ಲಿ ದೇಶದ ಒಂದು ಪ್ರಮುಖ ಕಾರ್ಮಿಕ ಸಂಘಟನೆ ಸಿಐಟಿಯು,

* ಕೊವಿಡ್ 19ರ ವಿರುದ್ಧ ಸಾರ್ವತ್ರಿಕ ಉಚಿತ ಲಸಿಕೆ ಮತ್ತು ಒಂದು ಸಾರ್ವತ್ರಿಕ ಉಚಿತ ಸಾರ್ವಜನಿಕ ಆರೋಗ್ಯಪಾಲನೆ ಬೇಕೆಂದು,
* ಜೀವನೋಪಾಯಗಳ ಮೇಲೆ ಮತ್ತು ಕಾರ್ಮಿಕರು ಹಾಗೂ ಎಲ್ಲ ಶ್ರಮಜೀವಿಗಳು ಶ್ರಮಪಟ್ಟು ಗಳಿಸಿರುವ ಮೂಲ ಹಕ್ಕುಗಳ ಮೇಲೆ ಬಂಡವಾಳಶಾಹೀ ದಾಳಿಯ ವಿರುದ್ಧ,
* ಒಂದು ಜನಪರ ಪರ್ಯಾಯಕ್ಕಾಗಿ ಮತ್ತು
* ಕಾರ್ಮಿಕ ವರ್ಗ ಮತ್ತು ಜನಗಳನ್ನು ಒಡೆಯುವ ಆಳುವ ವರ್ಗಗಳ ಎಲ್ಲ ಪ್ರಯತ್ನಗಳನ್ನು ಸೋಲಿಸಲು ಒಂದಾಗಿ ಹೋರಾಡೊಣ ಎಂದು ಸಮಸ್ತ ಕಾರ್ಮಿಕ ವರ್ಗಕ್ಕೆ ಮತ್ತು ಶ್ರಮಜೀವಿಗಳಿಗೆ ಕರೆ ನೀಡಿದೆ.


ಪ್ರತಿವರ್ಷದಂತೆ ಹಿಂದಿನ ಒಂದು ವರ್ಷದ ಬೆಳವಣಿಗೆಗಳ ಹಿನ್ನೆಲಯಲ್ಲಿ ಪ್ರಸಕ್ತ ಪರಿಸ್ಥಿತಿಯ ವಿಶ್ಲೇಷಣೆ ಮಾಡುವ ಸಿಐಟಿಯು ಮೇದಿನದ ಪ್ರಣಾಳಿಕೆ ಈ ಕರೆಯನ್ನು ನೀಡಿದೆ.

2019 ರ ಅಂತ್ಯದಲ್ಲಿ ಕಾಣಿಸಿಕೊಂಡ ಕೊವಿಡ್ ಮಹಾಸೋಂಕು ಈ ವೇಳೆಗೂ ತನ್ನ ರಂಪಾಟ ಮುಂದುವರೆಸಿದೆ. ಇದು ಬಂಡವಾಳಶಾಹಿಯ ಹೊಲಸು, ಕ್ರೂರ ಮತ್ತು ಬರ್ಬರ ಮುಖವನ್ನು ಬಯಲಿಗೆಳೆದಿದೆ. ಇದು ವಿಜ್ಞಾನ ಮತ್ತು ತಂತ್ರಜ್ಞಾನದಲ್ಲಿ ಅಭೂತಪೂರ್ವ ಮುನ್ನಡೆಗಳ ಹೊರತಾಗಿಯೂ, ಹೆಚ್ಚಿನ ಜನರ ಮೂಲ ಅಗತ್ಯಗಳನ್ನು ಪೂರೈಸಲು, ಮತ್ತು ಅವರ ಬದುಕುಗಳನ್ನು ರಕ್ಷಿಸಲು ವಿಫಲವಾಗುವ ವ್ಯವಸ್ಥೆ; ಆರೋಗ್ಯ ನಾಗರಿಕರ ಒಂದು ಮೂಲ ಹಕ್ಕಾಗಿರದೆ, ಅದನ್ನು ಖರೀದಿಸಬಲ್ಲ ಕೆಲವರಿಗೇ ಮೀಸಲಾಗಿರುವ ಒಂದು ವ್ಯವಸ್ಥೆ; ಕೋಟ್ಯಂತರ ಜನಗಳು ಈ ಮಹಾಸೋಂಕಿನಿಂದಾಗಿ ಕೆಲಸ ಕಳಕೊಂಡಿದ್ದಾರೆ. ಬಡ ದುಡಿಮೆಗಾರರ ಸಂಖ್ಯೆ ಹೆಚ್ಚಿದೆ ಎಂದು ಕಳೆದ ಒಂದು ವರ್ಷದ ವಿಮರ್ಶೆ ಮಾಡುತ್ತ ಮೇದಿನದ ಪ್ರಣಾಳಿಕೆ ಹೇಳಿದೆ.

ಈ ವ್ಯವಸ್ಥೆ ತಮ್ಮ ಹಿತಗಳನ್ನು ಕಾಪಾಡುವುದಿಲ್ಲ ಎಂದು ನಮ್ಮ ದೇಶದಲ್ಲೂ, ಜಗತ್ತಿನಾದ್ಯಂತವೂ ಕಾರ್ಮಿಕರು ಹೆಚ್ಚೆಚ್ಚಾಗಿ ಅರಿತುಕೊಳ್ಳುತ್ತಿದ್ದಾರೆ. ಜನಗಳಿಗೆ ಬಿಜೆಪಿಯ ನಿಜವಾದ “ಕಾರ್ಪೊರೇಟ್ ಅಡಿಯಾಳುತನ”ದ ಸ್ವರೂಪ ಹೆಚ್ಚೆಚ್ಚು ಅರ್ಥವಾಗುತ್ತಿದೆ. ಈ ಅರಿವನ್ನು ಇನ್ನಷ್ಟು ವಿಸ್ತರಿಸಬೇಕು. ಇದೀಗ ಕಾರ್ಮಿಕರು ಮತ್ತು ಇತರ ಶ್ರಮಜೀವಿಗಳ ವಿಶಾಲ ಜನಸಮೂಹಗಳಲ್ಲಿ, ತಮ್ಮ ದೈನಂದಿನ ಪ್ರಶ್ನೆಗಳಿಗೂ ಮತ್ತು ಕೇಂದ್ರದಲ್ಲಿ ಬಂದಿರುವ ಸರಕಾರಗಳ ಧೋರಣೆಗಳಿಗೂ ಇರುವ ಕೊಂಡಿಯ ಬಗ್ಗೆ ಅರಿವನ್ನು ಮೂಡಿಸಬೇಕಾದ ಸಮಯ; ತಮ್ಮ ಮಿತ್ರರು ಯಾರು, ಶತ್ರುಗಳು ಯಾರು ಎಂದು ಗುರುತತಿಸಲು ಅವರಿಗೆ ನೆರವಾಗಬೇಕಾದ ಸಮಯ; ತಮ್ಮ ಮಿತ್ರರೊಂದಿಗೆ ಐಕ್ಯತೆ ಬೆಸೆದು ಅವರ ಜತೆಗೂಡಿ ತಮ್ಮ ಶತ್ರುಗಳ ವಿರುದ್ಧ ಅವರನ್ನು ಅಣಿನೆರೆಸಬೇಕಾದ ಸಮಯ ಎಂದು ಪ್ರಸಕ್ತ ಸನ್ನಿವೇಶವನ್ನು ವಿಶ್ಲೇಷಿಸುತ್ತ ಮೇದಿನ ಪ್ರಣಾಳಿಕೆ ಹೇಳಿದೆ.

ಜನಗಳು, ಅರ್ಥವ್ಯವಸ್ಥೆ, ಪ್ರಜಾಪ್ರಭುತ್ವ ವ್ಯವಸ್ಥೆ, ಸಮಾಜದಲ್ಲಿ ಸಾಮರಸ್ಯ ಮತ್ತು ಒಟ್ಟಾರೆಯಾಗಿ ರಾಷ್ಟ್ರೀಯ ಸಮಗ್ರತೆಯ ಮೇಲೆಯೇ ಒಂದು ಸಮಗ್ರ ಸರ್ವತೋಮುಖ ಆಕ್ರಮಣ ನಡೆಯುತ್ತಿರುವುದಿಂದಾಗಿ, ಇದರ ವಿರುದ್ಧ ಒಂದು ವರ್ಗ ದೃಷ್ಟಿಯ ಕಾಮಿಕ ವರ್ಗದ ಪ್ರತಿದಾಳಿ ಆಳುವ ವರ್ಗಗಳ ಈ ದಾಳಿಗಳ ಸ್ವರೂಪದ, ಅವುಗಳ ವಿವಿಧ ಅಭಿವ್ಯಕ್ತಿಗಳ ನಡುವಿನ ಕೊಂಡಿಗಳ ಒಂದು ಸಮಗ್ರ ತಿಳುವಳಿಕೆಯನ್ನು ಆಧರಿಸಬೇಕಾಗುತ್ತದೆ.

ಇದನ್ನು ಮಾಡಲು ಬಂಡವಾಳಶಾಹೀ ವ್ಯವಸ್ಥೆಯಲ್ಲೇ ಅಂತರ್ಗತವಾಗಿರುವ ಅದರ ಶೋಷಣಾ ಸ್ವಭಾವವನ್ನು, ಅದರ ಅಮಾನವೀಯ ಕುತಂತ್ರಗಳನ್ನು ಮತ್ತು ಅದನ್ನು ಉತ್ತೇಜಿಸುವ ರಾಜಕೀಯವನ್ನು ಬಯಲಿಗೆಳೆಯಲು ಸತತ ಪ್ರಯತ್ನಗಳನ್ನು ಮಾಡಬೇಕಾಗುತ್ತದೆ. ಈ ಮೇದಿನದಂದು ಈ ಕಾರ್ಯಭಾರವನ್ನು ಕೈಗೆತ್ತಿಕೊಳ್ಳುವ ಪ್ರತಿಜ್ಞೆ ಮಾಡೋಣ ಎಂದು ಸಿಐಟಿಯು ಪ್ರಣಾಳಿಕೆ ಕರೆ ನೀಡಿದೆ.



ಹೋರಾಟಗಳಲ್ಲೇ ಆಶಾಕಿರಣ
– ಡಬ್ಲ್ಯುಎಫ್‌ಟಿಯು ಮೇ ದಿನ ಪೋಸ್ಟರ್



ಕಡ್ಡಾಯ ವ್ಯಾಪ್ತಿಯನ್ನು ಇಳಿಸುವ ಮತ್ತು ಬೆಲೆಗಳನ್ನು ಏರಿಸುವ ಮೂಲಕ ಆಹಾರ ಭದ್ರತೆಯನ್ನು ತೀವ್ರವಾಗಿ ದುರ್ಬಲಗೊಳಿಸುವ ನೀತಿಯನ್ನು ನೀತಿ ಆಯೋಗ ಶಿಫಾರಸು ಮಾಡಿದೆ ಎಂದು ವರದಿಯಾಗಿದೆ. ಮಾತೃತ್ವ ಸಂಬಂಧಿತ ಅನುಕೂಲಗಳು, ಮಧ್ಯಾಹ್ನದ ಬಿಸಿಯೂಟ, ಮಕ್ಕಳ ಪೌಷ್ಠಿಕ ಆಹಾರ ಪೂರೈಕೆಗಳ ಜಾರಿಯಲ್ಲಿ NFSAಯ ಹಲವು ಉಲ್ಲಂಘನೆಗಳನ್ನು ಈಗಾಗಲೇ ಮಾಡಲಾಗುತ್ತಿದೆ. ಹಾಗೆಯೇ ಅಂತ್ಯೋದಯ ಅನ್ನ ಕಾರ್ಡುಗಳ ಫಲಾನುಭವಿಗಳ ಕಡಿತ ಮತ್ತು ಪಡಿತರ ಚೀಟಿಗಳ ಬೇಕಾ ಬಿಟ್ಟಿ ರದ್ದತಿ ಸಹ ಆಹಾರ ಭದ್ರತೆಯನ್ನು ದುರ್ಬಲಗೊಳಿಸುತ್ತಿವೆ. NFSAಯು ಕೆಲವು ಗಂಭೀರ ನ್ಯೂನತೆಗಳನ್ನು ಸಹ ಹೊಂದಿದೆ. ಹಾಗಾಗಿ ಮುಂದಿನ ದಿನಗಳಲ್ಲಿ ಓಆಖಉಳಿಸುವುದು ಮತ್ತು ಅದರ ನ್ಯೂನತೆಗಳನ್ನು ಹೋಗಲಾಡಿಸುವ ಮೂಲಕ ಅದನ್ನು ಬಲಗೊಳಿಸುವುದು ಆಹಾರ ಭದ್ರತೆಯನ್ನು ಸಾಧಿಸಲು ನಿರ್ಣಾಯಕ ಹಕ್ಕೊತ್ತಾಯವಾಗಲಿದೆ.NFSAಮತ್ತು ಆಹಾರ ಭದ್ರತೆಯ ಮೇಲಿನ ಈ ದಾಳಿಯು ಆಹಾರ ಧಾನ್ಯಗಳ ಉತ್ಪಾದನೆ ಮತ್ತು ಖರೀದಿಯ ನೀತಿಗೆ ನೇರವಾದ ಅಂತಸ್ಸಂಬಂಧವನ್ನು ಹೊಂದಿದೆ.ಈ ದಾಳಿಗಳುಮೂರು ರೈತ-ವಿರೋಧಿ ಕೃಷಿ ಕಾನೂನುಗಳಿಗೆ ಒಡನಾಡಿಯಾಗಿವೆ.

ಆಹಾರ ಭದ್ರತೆಯ ಮೇಲಿನ ದಾಳಿಯನ್ನು ಹಿಮ್ಮೆಟ್ಟಿಸಬೇಕು

ಬೃಂದಾ ಕಾರಟ್ –ಅನು: **ಲವಿತ್ರ ವಸ್ತ್ರದ**

ಮಾರ್ಚ್ 1, 2020 ರಂದು ಭಾರತ 9.2 ಕೋಟಿ ಟನ್ನುಗಳಷ್ಟು ಆಹಾರ ಧಾನ್ಯಗಳ (ಅಕ್ಕಿಯಾಗಿಸದ ಭತ್ತ ಸೇರಿಸಿ) ದಾಸ್ತಾನನ್ನು ಹೊಂದಿದೆ. ಇದು ಅಧಿಕೃತವಾಗಿ ಆವಶ್ಯಕ ಆಹಾರ ದಾಸ್ತಾನಿಗಿಂತ ಮೂರು ಪಟ್ಟು ಹೆಚ್ಚಿದೆ. FCI ನ ವಾರ್ಷಿಕ ವರದಿಯ ಪ್ರಕಾರ, 2019–20 ರಲ್ಲಿ ಆಹಾರಧಾನ್ಯಗಳ ದಾಸ್ತಾನು ಸ್ವಲ್ಪ ಕಡಿಮೆಯಿದ್ದಾಗ, ದಾಸ್ತಾನು ನಿರ್ವಹಣೆಯ ವೆಚ್ಚ 12 ಸಾವಿರ ಕೋಟಿ ರೂಪಾಯಿ ಆಗಿದೆ. 107 ದೇಶಗಳ ಜಾಗತಿಕ ಹಸಿವು ಸೂಚ್ಯಂಕದಲ್ಲಿ 92ನೇ ಸ್ಥಾನದಲ್ಲಿರುವ ದೇಶದಲ್ಲಿ ಸಾಕಷ್ಟು ಆಹಾರಧಾನ್ಯಗಳ ಲಭ್ಯವಿರುವಾಗ, ಅಪೌಷ್ಠಿಕತೆಯಿಂದ ಬಳಲುತ್ತಿರುವ ಜನಸಂಖ್ಯೆಗೆ ಪರಿಹಾರ ಕೊಡಲುಆಹಾರ ಧಾನ್ಯಗಳ ವಿತರಣೆಯ ಪರಿಮಾಣ ಮತ್ತು ವ್ಯಾಪ್ತಿಯನ್ನು ವಿಸ್ತರಿಸುವುದು ನೈತಿಕ ಆಹಾರ ಭದ್ರತಾ ನೀತಿಯಾಗಿರಬೇಕಿತ್ತು. ಆದರೆ ಸರಕಾರವು ಇದಕ್ಕೆ ವಿರುದ್ಧವಾಗಿ ತನ್ನ ಯೋಜನೆಗಳನ್ನು ರೂಪಿಸುತ್ತಿದೆ.

ಆಹಾರ ಭದ್ರತೆಯ ಕಡ್ಡಾಯ ವ್ಯಾಪ್ತಿಯನ್ನು ಗ್ರಾಮೀಣ ಜನಸಂಖ್ಯೆಯ ಶೇಕಡ 75 ರಿಂದ 60 ಮತ್ತು ನಗರ ಜನಸಂಖ್ಯೆಯ ವ್ಯಾಪ್ತಿಯನ್ನು ಶೇಕಡಾ 50 ರಿಂದ 40ಕ್ಕೆ ಇಳಿಸುವ ಮೂಲಕ, ರಾಷ್ಟ್ರೀಯ ಆಹಾರ ಭದ್ರತಾ ಕಾಯ್ದೆ (NFSA)ಯನ್ನು ತೀವ್ರವಾಗಿ ದುರ್ಬಲಗೊಳಿಸುವ ನೀತಿಯನ್ನು ಆಯೋಗ ಶಿಫಾರಸು ಮಾಡಿದೆ ಎಂದು ವರದಿಯಾಗಿದೆ. ಇದರ ಅರ್ಥ ಸುಮಾರು 10 ಕೋಟಿ ಫಲಾನುಭವಿಗಳ ಕಡಿತವಾಗಿದೆ ಎಂದು. 2011 ರಿಂದ 2021 ವರ್ಷಗಳಲ್ಲಿನ ಜನಸಂಖ್ಯೆಯ ಹೆಚ್ಚಳದ ಪ್ರಕಾರ ಕನಿಷ್ಠ 9 ಕೋಟಿ ಫಲಾನುಭವಿಗಳನ್ನು ಸೇರಿಸಬೇಕಾಗಿತ್ತು. ಆದರೆ ಅದಾಗಿಲ್ಲ ಎಂಬುದನ್ನು ನೀತಿ ಆಯೋಗವೇ ಒಪ್ಪಿಕೊಂಡಿದೆ. ಜನಸಂಖ್ಯೆಯಲ್ಲಿ ಏರಿಕೆಯಾದರೂ ಸರಕಾರವು ಅದೇ 2011ರ ಹಳೆಯ ಅಂಕಿಅಂಶಗಳನ್ನು ಬಳಸಿಕೊಳ್ಳುತ್ತಿತ್ತು. ಬರುವ ವರ್ಷಾಂತ್ಯದಲ್ಲಿ 2021ರ ಜನಗಣತಿಯು ಲಭ್ಯವಾಗುವುದರಿಂದ ಜನಸಂಖ್ಯೆಯ ಹೆಚ್ಚಳವನ್ನು ಇನ್ನು ಮೇಲೆ ಕಡೆಗಣಿಸುವಂತಿಲ್ಲ. ಆದ್ದರಿಂದ ಕಾನೂನನ್ನು ಬದಲಾಯಿಸುವ ಮೂಲಕ ಮತ್ತು ವ್ಯಾಪ್ತಿಯನ್ನು ಕಡಿಮೆ ಮಾಡುವ ಮೂಲಕ ಅದನ್ನು ಸರಿದೂಗಿಸಲು ಸರಕಾರ ಬಯಸುತ್ತಿದೆ.

ಆಹಾರ ಭದ್ರತೆಗೆ ಸಂಬಂಧಿಸಿದಂತೆ ಈ ಕಾನೂನಿನ ಬದಲಾವಣೆ ಒಂದೇ ಅಲ್ಲ. 2014ರಲ್ಲಿ ಅಧಿಕಾರ ವಹಿಸಿಕೊಂಡ ಕೆಲವೇ ತಿಂಗಳುಗಳಲ್ಲಿ, ಭಾರತದ ಆಹಾರ ನಿಗಮದ ಕಾರ್ಯವೈಖರಿಗೆ ಮತ್ತು ಸಂಬಂಧಿಸಿದ ಇತರ ವಿಷಯಗಳ ಬಗ್ಗೆ ಶಿಫಾರಸ್ಸು ಮಾಡಲು ಮೋದಿ ಸರಕಾರ ಬಿಜೆಪಿ ಮುಖಂಡರು ಮತ್ತು ಮಾಜಿ ಕೇಂದ್ರ ಸಚಿವ ಶಾಂತಕುಮಾರ್ ಅವರ ನೇತೃತ್ವದಲ್ಲಿ ಉನ್ನತ ಮಟ್ಟದ ಸಮಿತಿಯನ್ನು ರಚಿಸಿತ್ತು. ಈ ಸಮಿತಿಯು ಅದರಿಂದ ನಿರೀಕ್ಷಿಸಿದ್ದನ್ನು ಅಂದರೆ "NFSA ಯ ಮರುಪರಿಶೀಲನೆಯ ಅಗತ್ಯವಿದೆ' ಎಂಬ ಶಿಫಾರಸನ್ನು ಮಾಡಿತು. ವ್ಯಾಪ್ತಿಯನ್ನು ಶೇ. 67 ರಿಂದ ಶೇ. 40 ಕ್ಕೆ ಇಳಿಸಬೇಕು ಮತ್ತು ಕೇಂದ್ರ ಹಂಚಿಕೆ (CIP) ಬೆಲೆಗಳನ್ನು ಹೆಚ್ಚಿಸಬೇಕೆಂದು ಶಿಫಾರಸು ಮಾಡುವ ಮೂಲಕ ಅದು ಕಾಯ್ದೆಯ ಬುಡವನ್ನೇ ಕಡಿದಿದೆ. 2021ರ ಆರ್ಥಿಕ ಸಮೀಕ್ಷೆಯಲ್ಲಿ CIP ಯನ್ನು ಹೆಚ್ಚಿಸಬೇಕು ಎನ್ನುವಲ್ಲಿ ಈ ಶಿಫಾರಸು ಪ್ರತಿಧ್ವನಿಸಿತು. ಫಲಾನುಭವಿಗಳ ಸಂಖ್ಯೆ ಕಡಿತಗೊಳಿಸುವುದರಿಂದ ಆಹಾರದ ಸಬ್ಸಿಡಿಯನ್ನು 49 ಸಾವಿರ ಕೋಟಿ ರೂ.ರಷ್ಟು ಕಡಿತಗೊಳಿಸಬಹುದು ಎಂದು ನೀತಿ ಆಯೋಗ ಲೆಕ್ಕಾಚಾರ ಮಾಡಿದೆ. ಬೆಲೆಗಳನ್ನು ಹೆಚ್ಚಿಸುವ ಆರ್ಥಿಕ ಸಮೀಕ್ಷೆಯ ಸಲಹೆಯೂ ಸಬ್ಸಿಡಿಯನ್ನು ಮತ್ತಷ್ಟು ಕಡಿಮೆ ಮಾಡುತ್ತದೆ. ಕಾರ್ಪೊರೇಟ್ ಕಂಪನಿಗಳ ಸಬ್ಸಿಡಿಯನ್ನು ಮುಂದುವರಿಸಿ ವಿಸ್ತರಿಸಲು ಅನುವಾಗುವಂತೆ, ಸಾಮಾನ್ಯ ಜನರ ಸಬ್ಸಿಡಿಗಳನ್ನು ಕಡಿತಗೊಳಿಸುವ ಮೋದಿ ಸರಕಾರದ ಸಂಕಲ್ಪದಿಂದಾಗಿ, ಭಾರತದ ಆಹಾರ ಭದ್ರತೆಯು ದುರ್ಬಲಗೊಳ್ಳುವ ಸಾಧ್ಯತೆಯೇ ಹೆಚ್ಚು. ಇದು ಸಾರ್ವಜನಿಕ ವಿತರಣೆ ವ್ಯವಸ್ಥೆಯ ವ್ಯಾಪಿಯನ್ನು ಕಡಿತಗೊಳಿಸುವುದರಲ್ಲಿ ಮತ್ತು ಬೆಲೆಗಳನ್ನು ಹೆಚ್ಚಿಸುವುದರಲ್ಲಿ ಪ್ರತಿಬಿಂಬಿತವಾಗುತ್ತದೆ. NFSA ಮೇಲಿನ ಈ ದಾಳಿಯು ಆಹಾರ ಧಾನ್ಯಗಳ ಉತ್ಪಾದನೆ ಮತ್ತು ಖರೀದಿಯ ನೀತಿಗೆ ನೇರವಾದ ಅಂತಸ್ಸಂಬಂಧವನ್ನು ಹೊಂದಿದೆ. NFSA ಮೇಲಿನ ದಾಳಿಯು ಮೂರು ರೈತ ವಿರೋಧಿ ಕೃಷಿ ಕಾನೂನುಗಳಿಗೆ ಒಡನಾಡಿಯಾಗಿದೆ.

ನಿಸ್ಸಂದೇಹವಾಗಿ NFSAಯಲ್ಲೇ ಸಾರ್ವಜನಿಕ ವಿತರಣೆಯ ಸಾರ್ವತ್ರಿಕ ವ್ಯವಸ್ಥೆಗೆ ಬದಲಾಗಿ ಅಪಖ್ಯಾತಿಗೆ ಒಳಗಾದ ಎಪಿಎಲ್ ಮತ್ತು ಬಿಪಿಎಲ್ ವ್ಯವಸ್ಥೆಯನ್ನು ವಿಭಿನ್ನ ಹೆಸರುಗಳಲ್ಲಿ (ಆದ್ಯತೆ ಮತ್ತು ಅಂತ್ಯೋದಯ ಅನ್ನ ಯೋಜನೆ -AAY) ಹೆಸರಿನಡಿಯಲ್ಲಿ ಮುಂದುವರಿಸುವುದು ಸೇರಿದಂತೆ ಕೆಲವು ಗಂಭೀರ ನ್ಯೂನತೆಗಳನ್ನು ಹೊಂದಿದೆ. NFSA ಕ್ಕಿಂತ ಮೊದಲಿನ ಬಿ.ಪಿ.ಎಲ್. ಕಾರ್ಡ್ ಬಳಕೆದಾರರಿಗೆ ಕನಿಷ್ಠ 35 ಕೆ.ಜಿ. ಆಹಾರ ಧಾನ್ಯಗಳ ಹಂಚಿಕೆ ಆಗಿರುವುದನ್ನು ಮುಂದುವರಿಸದೆ, ಅದನ್ನು ಪ್ರತಿ ವ್ಯಕ್ತಿಗೆ 5 ಕೆ.ಜಿ.ಗೆ ಮಿತಿಗೊಳಿಸಲಾಗಿದೆ. 2013ರಲ್ಲಿ ಸುಮಾರು 81.35 ಕೋಟಿ ಫಲಾನುಭವಿಗಳು ಇದ್ದರು (ಮೂಲ dfpd.gov.in). ಈಗ ಅದು 79.26 ಕೋಟಿ ಆಗಿದೆ (ಮೂಲ nfsa.gov.in march 2021). ಎಪಿಎಲ್ ನಿಂದ ಅಲ್ಪ ಲಾಭ ಪಡೆದ ಜನಸಂಖ್ಯೆಯ ಒಂದು ಭಾಗವನ್ನು ಈಗ ಸಂಪೂರ್ಣವಾಗಿ ವ್ಯವಸ್ಥೆಯಿಂದ ಹೊರಗಿಡಲಾಗಿದೆ. ಮುಂದಿನ ದಿನಗಳಲ್ಲಿ NFSA ಉಳಿಸುವುದು ಮತ್ತು ಅದರ ನ್ಯೂನತೆಗಳನ್ನು ಹೋಗಲಾಡಿಸುವ ಮೂಲಕ ಅದನ್ನು ಬಲಗೊಳಿಸುವುದು ನಿರ್ಣಾಯಕ ಹಕ್ಕೊತ್ತಾಯವಾಗಲಿದೆ.

ಈ ಲೇಖನ ಇದಕ್ಕೆ ಸಂಬಂಧಿಸಿದ ವಿಷಯಗಳನ್ನು ಪರಿಶೀಲಿಸುವ ಲೇಖನ.

NFSA ಯ ಉಲ್ಲಂಘನೆ



NFSAಯ ಕೆಲವು ನಿಬಂಧನೆಗಳನ್ನು ಈಗಾಗಲೇ ಉಲ್ಲಂಘಿಸಲಾಗುತ್ತಿದೆ. ಸೆಕ್ಷನ್ 4ರ ಅಡಿಯಲ್ಲಿ "ಪ್ರತಿ ಗರ್ಭಿಣಿ ಮಹಿಳೆ ಮತ್ತು ಹಾಲುಣಿಸುವ ತಾಯಿಗೆ, ಗರ್ಭಾವಸ್ಥೆಯಲ್ಲಿ ಮತ್ತು ಹೆರಿಗೆಯ ನಂತರದ 6 ತಿಂಗಳವರೆಗೆ ಉಚಿತ ಆಹಾರದ ಹಕ್ಕು ಇದೆ. ಮತ್ತು ಅವರಿಗೆ ಆರು ಸಾವಿರ ರೂಪಾಯಿಗಳ ನಗದು ಸಹಾಯ ಧನವನ್ನು ಕೊಡಬೇಕು." ಈ ಕಾಯ್ದೆಯನ್ನು 2017ರ ವರೆಗೆ ಜಾರಿ ಮಾಡಿರಲಿಲ್ಲ ಮತ್ತು ನಂತರ ಯಾವುದೇ ರೀತಿಯ ತಿದ್ದುಪಡಿ ಇಲ್ಲದೆ ಕಾನೂನನ್ನು ಮೊಟಕುಗೊಳಿಸಲಾಯಿತು. ನಗದು ಸಹಾಯ ಧನವನ್ನು ಐದು ಸಾವಿರ ರೂಪಾಯಿಗೆ ಕಡಿತಗೊಳಿಸುವುದಲ್ಲದೇ, ಕೇವಲ ಮೊದಲ ಜೀವಂತ ಮಗುವಿಗೆ ಮಾತ್ರ ಇದು ಅನ್ವಯಿಸುತ್ತದೆ ಎಂಬ ಕಾನೂನು ಬಾಹಿರವಾಗಿ ಹೇರಿದ ಶರತ್ತಿನಿಂದಾಗಿ ಕನಿಷ್ಠ 57% ಗರ್ಭಿಣಿಯರು ಮತ್ತು ಹಾಲುಣಿಸುವ ತಾಯಂದಿರು ಈ ಹಕ್ಕುಗಳಿಂದ ವಂಚಿತರಾಗಿದ್ದಾರೆ. ಮೊದಲ ಜೀವಂತ ಶಿಶುವನ್ನು ಹೊಂದಿದ ಮಹಿಳೆಯರು ಶೇಕಡಾ 43 ರಷ್ಟು ಇರುವುದರಿಂದ ಅವರಿಗೆ ಮಾತ್ರ ಈ ಹಕ್ಕು ದೊರಕಿದೆ. ಹೀಗೆ ಬಹುಪಾಲು ಮಹಿಳೆಯರು ಈ ಕಾಯ್ದೆಯ ಲಾಭ ಪಡೆಯುವ ಹಕ್ಕನ್ನು ನಿರಾಕರಿಸಲಾಗಿದೆ.

ಇದೇ ರೀತಿ NFSAಯು ಪ್ರಾಥಮಿಕ ಮತ್ತು ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ ಮಕ್ಕಳಿಗೆ ಮಧ್ಯಾಹ್ನದ ಬಿಸಿಯೂಟದ (MDM) ಹಕ್ಕನ್ನು ನೀಡಿದೆ. ವಾಸ್ತವವಾಗಿ ಬೆಲೆ ಏರಿಕೆ ಆಗುತ್ತಿದ್ದರೂ ಬಿಸಿ ಊಟಕ್ಕಾಗಿ ಬಜೆಟಿನಲ್ಲಿ ಅನುದಾನ ಕಡಿಮೆಯಾಗುತ್ತಿದೆ. 2021–2022 ರ ಬಜೆಟಿನಲ್ಲಿ ಬಿಸಿ ಊಟದ ಅನುದಾನವನ್ನು ರೂ. 12,900 ಕೋಟಿಯಿಂದ ರೂ. 11,500 ಕೋಟಿಗೆ ಇಳಿಸಲಾಗಿದೆ. ಇದು ಪ್ರಾಥಮಿಕ ಮತ್ತು ಹಿರಿಯ ಪ್ರಾಥಮಿಕ ಹಂತದ ಸುಮಾರು 12 ಕೋಟಿ ಶಾಲಾ ಮಕ್ಕಳಿಗೆ ಒದಗಿಸುವ ಆಹಾರದ ಗುಣಮಟ್ಟ ಮತ್ತು ಪ್ರಮಾಣದ ಮೇಲೆ ನೇರವಾದ ಪರಿಣಾಮ ಬೀರುತ್ತದೆ. ಇದು NFSA ನ ಬಿಸಿಯೂಟದ ಕಡ್ಡಾಯ ಪೌಷ್ಟಿಕಾಂಶದ ಕಾನೂನನ್ನು ಉಲ್ಲಂಘಿಸುತ್ತದೆ. ಆರು ತಿಂಗಳಿಂದ ಆರು ವರ್ಷದ ಮಕ್ಕಳು "ವಯಸ್ಸಿಗೆ ಬೇಕಾದ ಪೌಷ್ಟಿಕ ಆಹಾರವನ್ನು ಸ್ಥಳೀಯ ಅಂಗನವಾಡಿಗಳ ಮೂಲಕ ಪಡೆಯಲು ಅರ್ಹರಾಗಿರುತ್ತಾರೆ". ಆದರೆ ಅಂಗನವಾಡಿಗಳಿಗೆ ಆಹಾರದ ಸರಬರಾಜು ಕಡಿಮೆ ಮಾಡಲಾಗಿದೆ. ಇದರಿಂದ ಪೌಷ್ಟಿಕ ಆಹಾರದ ಮೇಲೆ ಕೆಟ್ಟ ಪರಿಣಾಮ ಬೀರುತ್ತಿದೆ.

ಆದ್ದರಿಂದ ಮಹಿಳೆಯರಿಗೆ NFSA ಕಡ್ಡಾಯಗೊಳಿಸಿದ ಮಾತೃತ್ವ ಸಂಬಂಧಿತ ನಗದು ಪ್ರಯೋಜನಗಳನ್ನು ಜಾರಿಗೆ ತರುವುದು ಮತ್ತು ಮಕ್ಕಳಿಗೆ ಪೌಷ್ಟಿಕ ಆಹಾರಕ್ಕಾಗಿ NFSA ನ ಮಾನದಂಡಗಳನ್ನು ಖಚಿತಪಡಿಸಿಕೊಳ್ಳಲು ಮಧ್ಯಾಹ್ನದ ಬಿಸಿಯೂಟದ ಯೋಜನೆಗೆ ಬಜೆಟ್ ಹಂಚಿಕೆ ಹೆಚ್ಚಿಸುವುದು ಪ್ರಮುಖ ಮತ್ತು ತುರ್ತು ಬೇಡಿಕೆ ಯಾಗಬೇಕಿದೆ. ಮಹಿಳೆಯರ ಮತ್ತು ಮಕ್ಕಳ ಪೌಷ್ಟಿಕಾಂಶ ಸಂಬಂಧಿತ ಯೋಜನೆಗಳು ಜನರಿಗೆ ಮುಟ್ಟಲು ಅಂಗನವಾಡಿ ಕೇಂದ್ರಗಳು ಪ್ರಮುಖವಾಗಿರುವುದರಿಂದ ಅವುಗಳಿಗೆ ಅಗತ್ಯ ಬಜೆಟ್ ಅನುದಾನದ ಹಂಚಿಕೆಯು, NFSA ಕಾಯಿದೆಯ ಅನುಷ್ಠಾನಕ್ಕಾಗಿ ಒಂದು ನಿರ್ಣಾಯಕ ಅಂಶವಾಗಿದೆ.

ಅಂತ್ಯೋದಯ ಅನ್ನ ಕಾರ್ಡ್

ಅಂತ್ಯೋದಯ ಅನ್ನ ಯೋಜನೆ (AAY) ಕಾರ್ಡ್ ಹೊಂದಿರುವವರು ಕೇಂದ್ರ ಹಂಚಿಕೆ (CIP) ಬೆಲೆಯಲ್ಲಿ 35 ಕೆಜಿ ಆಹಾರ ಧಾನ್ಯಗಳನ್ನು ಪಡೆಯಬಹುದು. ಅದರಲ್ಲಿ ಒಂದು ಕೆಜಿ ಗೋಧಿಗೆ ರೂ. 2 ಮತ್ತು ಅಕ್ಕಿಗೆ ಮೂರು ರೂಪಾಯಿ ದಂತೆ ಪಡೆಯಬಹುದು. NFSAನ ಸೆಕ್ಷನ್ 3(1) ರ ಅಡಿಯಲ್ಲಿ ಂಂಜನ ಕುಟುಂಬಗಳ ಸಂಖ್ಯೆಯನ್ನು ಕೇಂದ್ರ ಸರಕಾರವೇ ನಿರ್ಧರಿಸುತ್ತದೆ. AAY ಕಾರ್ಡುಗಳ ಅರ್ಹತೆ ಪಡೆಯಲು AAY ನಿರ್ದಿಷ್ಟವಾದ ಮಾನದಂಡಗಳನ್ನು ನಿಖರವಾಗಿ ಹೇಳುತ್ತದೆ. AAY ನಲ್ಲಿ ಭೂಹೀನ ಕೃಷಿ ಕಾರ್ಮಿಕರು, ದಿನಗೂಲಿ ಕಾರ್ಮಿಕರು, ವಿಧವೆಯರ ನೇತೃತ್ವದ ಕುಟುಂಬಗಳು, ಒಂಟಿ ಮಹಿಳೆಯರು, ಅಂಗವಿಕಲರು, ವಿಶೇಷವಾಗಿ ದುರ್ಬಲರಾದ ಬುಡಕಟ್ಟು ಗುಂಪುಗಳು (PVTG) ಸೇರಿದ್ದಾರೆ. ದಿನದಿಂದ ದಿನಕ್ಕೆ AAYಗೆ ಸೇರುವಂತಹ ಸಾಮಾಜಿಕ ಗುಂಪುಗಳು ಹೆಚ್ಚಾಗುತ್ತಿವೆ. ಆದರೆ 2005 ರಿಂದ AAY ಕುಟುಂಬಗಳ ಸಂಖ್ಯೆ 2.5 ಕೋಟಿಗೆ ಸ್ಥಗಿತಗೊಂಡಿದೆ.



ಮಾರ್ಚ್ 2015 ರಲ್ಲಿ, NFSAನ ಗಂಭೀರ ಉಲ್ಲಂಘನೆ ಮಾಡುವ "ವಲಸೆ,

ಪುಟ 10 ಕ್ಕೆ

ಆಹಾರ ಭದ್ರತೆಯ ಮೇಲಿನ ದಾಳಿಯನ್ನು ಹಿಮ್ಮೆಟ್ಟಿಸಬೇಕು............. ಪುಟ 9 ರಿಂದ

ಸಾಮಾಜಿಕ–ಆರ್ಥಿಕ ಸ್ಥಿತಿಯಲ್ಲಿ ಸುಧಾರಣೆ, ಸಾವು ಇತ್ಯಾದಿಗಳ ಕಾರಣದಿಂದಾಗಿ AAY ಕುಟುಂಬಗಳು ತಮ್ಮ ಅರ್ಹತೆ ಕಳೆದುಕೊಂಡಾಗ, ಅಷ್ಟರ ಮಟ್ಟಿಗೆ ಅಂತ್ಯೋದಯ ಕುಟುಂಬಗಳ ಸಂಖ್ಯೆ ಇಳಿಸಲಾಗುತ್ತದೆ" ಎಂದು ಮೋದಿ ಸರ್ಕಾರವು ಸುತ್ತೋಲೆಯನ್ನು ಹೊರಡಿಸಿತು. ಆದರೆ ಆರ್ಥಿಕ ಮತ್ತು ಸಾಮಾಜಿಕ ಸ್ಥಿತಿ ದುಸ್ಥಿತಿ ಆದವರ ಗತಿಯೇನು? ಅವರನ್ನು ಮತ್ತೆ AAYನಲ್ಲಿ ಸೇರಿಸಲಾಗುವುದೆ? ರಾಜ್ಯಗಳು ಅಂತ್ಯೋದಯ ಕುಟುಂಬಗಳನ್ನು ಗುರುತಿಸುವಂತಿಲ್ಲ ಎನ್ನುವುದನ್ನೂ ಸುತ್ತೋಲೆ ಹೇಳುತ್ತದೆ. 2013ರಿಂದ ಸುಮಾರು ಹದಿನೈದು ಲಕ್ಷ ಕುಟುಂಬಗಳು ಕಡಿಮೆಯಾಗಿವೆ. ಅಂದರೆ ಸುತ್ತೋಲೆಯ ಪರಿಣಾಮದಿಂದ AAY ಕುಟುಂಬಗಳು 2.5 ಕೋಟಿಯಿಂದ 2.35 ಕೋಟಿಗೆ ಇಳಿದಿದೆ. ಈ ಕ್ರೂರ ಮತ್ತು ನೀತಿಗೆಟ್ಟ ಯೋಜನೆಗಳ ಇತ್ತೀಚಿನ ಉದಾಹರಣೆ ಎಂದರೆ, ಇಂತಹ ಮಹಾಸೋಂಕಿನ ಕೆಟ್ಟ ಸಮಯದಲ್ಲಿ AAY ಫಲಾನುಭವಿಗಳ ಸಂಖ್ಯೆ ಇಳಿಮುಖವಾಗುತ್ತಿರುವುದು. ಅತ್ಯಂತ ಸಂಕಟ ವರ್ಷವಾದ 2020ರಲ್ಲಿ ಸುಮಾರು 3.79 ಲಕ್ಷ AAY ಕಾರ್ಡುಗಳನ್ನು ತೆಗೆದುಹಾಕಲಾಗಿದೆ. ಸತತ ಮೂರು ತಿಂಗಳವರೆಗೆ ತಮ್ಮ ಪಡಿತರವನ್ನು ತೆಗೆದುಕೊಳ್ಳಲು ಸಾಧ್ಯವಾಗದ ಕಾರಣ ಸುಮಾರು 71,982 AAY ಕುಟುಂಬಗಳನ್ನು "ಮೂಕ ಪಡಿತರಚೀಟಿ ಹೊಂದಿದವರು" ಎಂದು ಗುರುತಿಸಲಾಗಿದೆ. ಈ ಕುಟುಂಬಗಳು ಪಡಿತರ ತೆಗೆದುಕೊಳ್ಳದೆ ಇರುವುದಕ್ಕೆ ಕಾರಣವನ್ನು ವಿಶ್ಲೇಷಿಸದಿರುವುದರಿಂದ ಇವರನ್ನು ನಕಲಿ ಕಾರ್ಡ್ ಹೊಂದಿದವರು ಎಂದು ವ್ಯಾಖ್ಯಾನಿಸುವ ಅಪಾಯವೂ ಇದೆ. ಮಹಾಸೋಂಕಿನ ಈ ಒಂದು ವರ್ಷದಲ್ಲಿ ಸುಮಾರು 90,000 AAY ಫಲಾನುಭವಿಗಳ ನಿವ್ವಳ (ಸೇರ್ಪಡೆ ಮತ್ತು ರದ್ದತಿಗಳೆರಡನ್ನು ಪರಿಗಣಿಸಿ) ಕುಸಿತ ಕಂಡುಬಂದಿದೆ (ಮೂಲ nfsa.gov.in).

ಇವೆಲ್ಲದರ ಮಧ್ಯೆ ಮೋದಿ ಸರ್ಕಾರ ವಲಸೆ ಕಾರ್ಮಿಕರಿಗೆ ಉಚಿತ ಆಹಾರ ಧಾನ್ಯಗಳನ್ನು ನೀಡುವುದಾಗಿ ಹೆಮ್ಮೆಪಡುತ್ತಿದ್ದರೆ, ಇತ್ತ AAY ಅಡಿಯಲ್ಲಿ ತಿಂಗಳಿಗೆ 35 ಕೆಜಿ ಧಾನ್ಯ ಪಡೆಯುವವರ ಸಂಖ್ಯೆ ಕಡಿಮೆಯಾಗುತ್ತಿದೆ. ಇಂತಹ ಸಮಯದಲ್ಲಿ NFSA ನ ಕಾಯ್ದೆ ಉಲ್ಲಂಘಿಸುವ ಮಾರ್ಚ್ 2015ರ ಆದೇಶವನ್ನು ರದ್ದು ಪಡಿಸುವುದು ಮತ್ತು AAY ಮಾರ್ಗಸೂಚಿಗಳ ಅಡಿಯಲ್ಲಿ ಬರುವ ಎಲ್ಲಾ ವಿಭಾಗಗಳನ್ನು ಸೇರಿಸುವುದು ಒಂದು ಪ್ರಮುಖ ಬೇಡಿಕೆಯಾಗಿದೆ.

"ಆದ್ಯತೆಯ" ಕುಟುಂಬಗಳಿಗೆ ಸಂಬಂಧಿಸಿದಂತೆ, ಮಹಾಸೋಂಕಿನ ಸಮಯದಲ್ಲಿ ವಲಸೆ ಹೋದ 8 ಕೋಟಿ ವಲಸಿಗರಿಗೆ ಪಡಿತರ ಚೀಟಿ ಮತ್ತು ಉಚಿತ ದವಸಧಾನ್ಯಗಳನ್ನು ನೀಡುವುದಾಗಿ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಘೋಷಿಸಿದ್ದರು. 8 ಕೋಟಿ ವಲಸಿಗರಲ್ಲಿ ಕೇವಲ 1.49 ಕೋಟಿ ಫಲಾನುಭವಿಗಳನ್ನು ಆದ್ಯತೆಯ ಪಟ್ಟಿಯಲ್ಲಿ ಸೇರಿಸಲಾಗಿದೆ ಎಂದು ಅಂಕಿ–ಅಂಶಗಳು ಹೇಳುತ್ತವೆ. ಆದರೆ ಆಶ್ಚರ್ಯಕರ ಸಂಗತಿ ಎಂದರೆ ಇದೇ ಅವಧಿಯಲ್ಲಿ 51 ಲಕ್ಷ ಫಲಾನುಭವಿಗಳನ್ನು ಪಟ್ಟಿಯಿಂದ ತೆಗೆದು ಹಾಕಲಾಗಿದೆ. ವಾಸ್ತವದಲ್ಲಿ ನೋಡುವುದಾದರೆ ಒಟ್ಟು ಫಲಾನುಭವಿಗಳು ಹೆಚ್ಚಾಗಿರುವುದು ಒಂದು ಕೋಟಿಗಿಂತ ಕಡಿಮೆ ಇದೆ.

ಪಡಿತರ ಚೀಟಿಗಳ ರದ್ದತಿ ಮತ್ತು ಷರತ್ತುಗಳು

ಮೂರು ಕೋಟಿ ಪಡಿತರ ಚೀಟಿಗಳ ರದ್ದತಿಯ ವಿರುದ್ಧದ ಸಾರ್ವಜನಿಕ ಹಿತಾಶಕ್ತಿ ಅರ್ಜಿ (ಪಿ.ಐ.ಎಲ್) ನ ವಿಚಾರಣೆಯ ಸಂದರ್ಭದಲ್ಲಿ ಸುಪ್ರೀಂ ಕೋರ್ಟ್ "ಇದು ಬಹಳ ಗಂಭೀರವಾದ ವಿಷಯ" ಎಂದು ಪ್ರತಿಕ್ರಿಯಿಸಿ ಕೇಂದ್ರ ಸರಕಾರಕ್ಕೆ ಎಚ್ಚರಿಕೆ ನೀಡಿತ್ತು. ರದ್ದಾದ ಪಡಿತರ ಚೀಟಿಗಳ ಸಂಖ್ಯೆಯ ಕುರಿತು ಸರಕಾರವೇ ನೀಡಿದ ಹೇಳಿಕೆಗಳು ವಿರೋಧಾಭಾಸದಿಂದ ಕೂಡಿವೆ. ಫೆಬ್ರುವರಿ 2017ರಲ್ಲಿ ಪ್ರಧಾನಮಂತ್ರಿಯವರು ಲೋಕಸಭೆಯಲ್ಲಿ, "ತಂತ್ರಜ್ಞಾನದ ಬಳಕೆ ಮತ್ತು ಆಧಾರ್ ಕಾರ್ಡ್ ಅನ್ನು ಪಡಿತರ ಚೀಟಿಯೊಂದಿಗೆ ಸೇರಿಸುವುದು ಎಷ್ಟು ಸಫಲವಾಗಿದೆಯೆಂದರೆ, ಅದರ ಫಲವಾಗಿ 3.95 ಕೋಟಿ ಪಡಿತರ ಚೀಟಿಗಳನ್ನು ರದ್ದು ಪಡಿಸಲಾಗಿದೆ" ಎಂದು ಹೇಳಿದರು. ಇದರ ಬಗ್ಗೆ ಹೆಚ್ಚಿನ ಮಾಹಿತಿಯನ್ನು ಪಡೆಯಲು ಹಿಂದುಸ್ತಾನ್ ಟೈಮ್ಸ್ ಆರ್.ಟಿ.ಐ ಅಡಿಯಲ್ಲಿ ಅರ್ಜಿ ಸಲ್ಲಿಸಿದಾಗ ತಿಳಿದುಬಂದ ಸತ್ಯವೆಂದರೆ ಪ್ರಧಾನಮಂತ್ರಿಯವರ ಈ ಹೇಳಿಕೆಗೆ ಪೂರಕವಾಗುವಂತಹ ಯಾವುದೇ ರೀತಿಯ ಮಾಹಿತಿ ರಾಜ್ಯಗಳಿಂದ ಬಂದಿಲ್ಲ. ಇಷ್ಟೆಲ್ಲದರ ನಡುವೆ ಪ್ರಧಾನಿಯವರು ಹೇಳಿಕೆಯಿಂದ ಒಂದು ಅಂಶ ಸ್ಪಷ್ಟವಾಗಿತ್ತು. ಅವರ ಪ್ರಕಾರ ಪಡಿತರ ಚೀಟಿಗಳ ಡಿಜಿಟಲ್ ರದ್ದತಿಯ ಕೆಲಸ ಸರಿಯಾದದು ಮತ್ತು ಅದೇ ಸರಿಯಾದ ಮಾರ್ಗ. ಪ್ರಧಾನಮಂತ್ರಿಯವರ ಈ ಹೇಳಿಕೆಯ ನಂತರದ ನಾಲ್ಕು ವರ್ಷಗಳಲ್ಲಿ ಪಡಿತರ ಚೀಟಿಗಳ ರದ್ದತಿಯ ಸಂಖ್ಯೆ ವಾಸ್ತವವಾಗಿ ನಾಲ್ಕು ಕೋಟಿಯನ್ನು ಮೀರಿದೆ.

ಲೋಕಸಭೆಯಲ್ಲಿನ ಪ್ರಶ್ನೆಗೆ (ಪ್ರಶ್ನೆ ಸಂಖ್ಯೆ 632, ಫೆಬ್ರುವರಿ 6, 2018) ಉತ್ತರಿಸುತ್ತ "2013–2017ರ ಅವಧಿಯಲ್ಲಿ ಒಟ್ಟು 2.75 ಕೋಟಿ ನಕಲಿ/ ಅನರ್ಹ ಪಡಿತರ ಚೀಟಿಗಳನ್ನು ತೆಗೆಯಲಾಗಿದೆ/ ರದ್ದುಪಡಿಸಲಾಗಿದೆ. ಇದರಿಂದ 17,500 ಕೋಟಿ ರೂ. ಹಣ ಉಳಿತಾಯ ಮಾಡಲಾಗಿದೆ" ಎಂದು ಹೇಳಲಾಗಿದೆ. ಆಹಾರ ಸಚಿವಾಲಯದ ಸ್ಥಾಯಿ ಸಮಿತಿಯ ಎರಡನೆಯ ವರದಿಯ (ಡಿಸೆಂಬರ್ 2019) ಪ್ರಕಾರ 2016–2019ರ ನಡುವೆ 1.49 ಕೋಟಿ ಪಡಿತರ ಚೀಟಿಗಳನ್ನು ರದ್ದುಪಡಿಸಲಾಗಿದೆ. ಒಟ್ಟಾರೆಯಾಗಿ ಈ ಎಲ್ಲಾ ಅಂಕಿ ಅಂಶಗಳನ್ನು ನೋಡಿದರೆ 2014ರಿಂದ ಕೇಂದ್ರದಲ್ಲಿ ಮೋದಿ ಸರಕಾರದ ವರ್ಷಗಳಲ್ಲಿ ಮತ್ತು ಬಿಜೆಪಿಯು ಈ ಅವಧಿಯಲ್ಲಿ ಅನೇಕ ದೊಡ್ಡ ರಾಜ್ಯಗಳಲ್ಲಿ ಕೆಲ ಕಾಲವಾದರೂ ಅಧಿಕಾರದಲ್ಲಿ ಇದ್ದ ಅವಧಿಯಲ್ಲಿ ಒಟ್ಟು ನಾಲ್ಕು ಕೋಟಿ ಪಡಿತರ ಚೀಟಿಗಳನ್ನು ರದ್ದುಪಡಿಸಲಾಗಿದೆ.

ಇಲ್ಲಿ ಮುಖ್ಯವಾದ ವಿಷಯವೆಂದರೆ, ಎಲ್ಲ ಪಡಿತರ ಚೀಟಿಗಳನ್ನು ಯಾವುದೇ ಭೌತಿಕ ಪರಿಶೀಲನೆ ಇಲ್ಲದೆ ರದ್ದುಪಡಿಸಲಾಗಿದೆ. ಹೀಗೆ ಪರಿಶೀಲನೆ ಇಲ್ಲದೆ ರದ್ದುಮಾಡಿದ ಚೀಟಿಗಳಲ್ಲಿ ನಿಜವಾದ ಫಲಾನುಭವಿಗಳ ಪಡಿತರ ಚೀಟಿಗಳ ರದ್ದತಿಗೆ ಭಾರೀ ಅವಕಾಶ ಮಾಡಿಕೊಟ್ಟಿದೆ. ಭಾರಿ ಪ್ರಮಾಣದಲ್ಲಿ ಪಡಿತರ ಚೀಟಿಗಳ ರದ್ದತಿ ಆಹಾರ ಭದ್ರತೆಯ ಹಕ್ಕಿನ ಮೇಲೆ ಆಕ್ರಮಣ ಮಾಡಿದಂತಾಗುತ್ತದೆ. ಒಂದೆಡೆ ಹೊಸ ಫಲಾನುಭವಿಗಳನ್ನು ಸೇರಿಸಲು ಸರ್ಕಾರ ನಿರಾಕರಿಸಿದೆ. ಮತ್ತೊಂದೆಡೆ ಪಡಿತರ ಚೀಟಿಗಳನ್ನು ರದ್ದುಗೊಳಿಸಲು ಅಳವಡಿಸಿಕೊಂಡ ವ್ಯವಸ್ಥೆಯು ಬೇಕಾಬಿಟ್ಟಿಯಾಗಿದೆ. ಪಡಿತರ ಚೀಟಿಯನ್ನು ರದ್ದುಗೊಳಿಸಲಾದ ಒಂದು ಕುಟುಂಬವು, ಈ ವ್ಯವಸ್ಥೆಯ ಕುಂದುಕೊರತೆಗಳ ಕುರಿತು ದೂರು ಪರಿಹಾರ ನಿರ್ವಹಣೆಯನ್ನು ಬಳಸುವ ಸಾಮರ್ಥ್ಯ ಹೊಂದಿದೆ ಎಂದು ಭಾವಿಸುವುದು, ಗ್ರಾಮೀಣ ಭಾರತದಲ್ಲಿ ವಾಸಿಸುವ ಬಡ ಕುಟುಂಬದ ಗಾಯದ ಮೇಲೆ ಬರೆ ಎಳೆದಂತಾಗುತ್ತದೆ. ಭೌತಿಕ ಪರಿಶೀಲನೆ ಇಲ್ಲದೆ ಯಾವುದೇ ಪಡಿತರ ಚೀಟಿಗಳನ್ನು ರದ್ದುಗೊಳಿಸಬಾರದು. ಕೇಂದ್ರ ಸರ್ಕಾರ ನಡೆಸುತ್ತಿರುವ ಪ್ರಸ್ತುತ ವಿಧಾನವನ್ನು ನಿಲ್ಲಿಸಬೇಕು. ಭೌತಿಕ ಪರಿಶೀಲನೆಯ ಪ್ರಕ್ರಿಯೆಯಲ್ಲಿ ಸ್ಥಳೀಯ ಚುನಾಯಿತ ಪಂಚಾಯತ್ ಸಂಸ್ಥೆಗಳು ಭಾಗಿಯಾಗಬೇಕು.

ಇನ್ನೊಂದು ವಿಷಯವೆಂದರೆ ಪಡಿತರ ಚೀಟಿಗಳನ್ನು ಆಧಾರ್ ಕಾರ್ಡಿನೊಂದಿಗೆ ಜೋಡಿಸುವುದು. ಸರಕಾರದ ವಿವಿಧ ಯೋಜನೆಗಳ ಸೌಲಭ್ಯ ಪಡೆಯಲು ಎಲ್ಲಾ ಫಲಾನುಭವಿಗಳಿಗೆ ಆಧಾರ್ ಬಳಕೆಯನ್ನು ಕಡ್ಡಾಯಗೊಳಿಸಿದ್ದನ್ನು ಸುಪ್ರೀಂಕೋರ್ಟ್ ಸಹ ಒಪ್ಪಿಕೊಂಡಿದೆ. ಮೇ 2020ರಲ್ಲಿ ಕೇಂದ್ರ ಸರ್ಕಾರವು ಒಂದು ಸುತ್ತೋಲೆಯನ್ನು ಹೊರಡಿಸಿತು. "ಸರಕಾರ ಆಧಾರ್ ಕಾರ್ಡ್ ನ ಜೋಡಣೆ ಮಾಡುವ ಅಂತಿಮ ದಿನವನ್ನು ಸೆಪ್ಟೆಂಬರ್ 2020ರ ವರೆಗೆ ವಿಸ್ತರಿಸಿದೆ. ಆದಕಾರಣ ಅಲ್ಲಿಯವರೆಗೆ ಯಾರಿಗೂ ಆ ಕಾರಣಕ್ಕೆ ಆಹಾರ ಧಾನ್ಯ ವಿತರಣೆ ನಿಲ್ಲಿಸಬಾರದು". ಇನ್ನೊಂದು ಅರ್ಥದಲ್ಲಿ ಹೇಳುವುದಾದರೆ ಪಡಿತರವನ್ನು ಪಡೆಯಲು ಆಧಾರ್ ಕಾರ್ಡ್ ಜೋಡಣೆ ಮುಂದೆ ಕಡ್ಡಾಯ ಎಂದು ಇದು ಖಚಿತಪಡಿಸುತ್ತದೆ. ಮಾರ್ಚ್ 2021ರಲ್ಲಿ ಸಚಿವಾಲಯದ ಜಾಲತಾಣದಲ್ಲಿ 79.28 ಕೋಟಿ ಫಲಾನುಭವಿಗಳಲ್ಲಿ 8.8 ಕೋಟಿ ಫಲಾನುಭವಿಗಳು ಆಧಾರ್ ಕಾರ್ಡನ್ನು ಪಡಿತರ ಚೀಟಿಯೊಂದಿಗೆ ಜೋಡಣೆ ಮಾಡಿಲ್ಲವೆಂದು ಹೇಳುತ್ತದೆ. ಜೋಡಣೆ ಮಾಡದ ಕಾರ್ಡಗಳನ್ನು ರದ್ದುಗೊಳಿಸುವ ಅಪಾಯವೂ ಇದೆ. ಇವೆಲ್ಲ ಕಾರಣಗಳೊಂದಿಗೆ, ಬಯೋಮೆಟ್ರಿಕ್ ಗಳು ಹೊಂದಿಕೆಯಾಗದ ಕಾರಣ ಗಣನೀಯ ಸಂಖ್ಯೆಯ ಫಲಾನುಭವಿಗಳಿಗೆ ಪಡಿತರ ಹಕ್ಕನ್ನು ನಿರಾಕರಿಸಲಾಗಿದೆ ಎಂದು ವಾಸ್ತವ ವರದಿ ಹೇಳುತ್ತದೆ. ಹೊಂದಿಕೆಯಾಗದ ಬಯೋಮೆಟ್ರಿಕ್ ಮತ್ತು ದೋಷಯುಕ್ತ ಯಂತ್ರಗಳಿಂದಾಗಿ, ವೈಫಲ್ಯದ ಅಪಾಯಗಳನ್ನು ಹೊಂದಿರುವ ತಂತ್ರಜ್ಞಾನಗಳೊಂದಿಗೆ ಆಹಾರ ಭದ್ರತೆಯನ್ನು ಜೋಡಿಸಲು ಸಾಧ್ಯವಿಲ್ಲ ಮತ್ತು ಜೋಡಿಸಲೂಬಾರದು.

ಪಡಿತರ ವ್ಯವಸ್ಥೆಯಿಂದ ಭಾರಿ ಪ್ರಮಾಣದ ಸೋರಿಕೆಗಳು ಮತ್ತು ಸಾರ್ವಜನಿಕ ಹಣವು ಪೋಲಾಗುವ ಸುಳ್ಳು ನಿರೂಪಣೆಯನ್ನು, ಸಾಮಾಜಿಕ ಭದ್ರತೆಯ ಅಗತ್ಯ ಅಂಶವಾಗಿರುವ ಸಾರ್ವಜನಿಕ ವಿತರಣಾ ವ್ಯವಸ್ಥೆ ಮತ್ತು NFSAಗಳ ಮೂಲಕ ಖಾತ್ರಿಗೊಳಿಸುವ ಆಹಾರ ಭದ್ರತೆಯನ್ನು ದುರ್ಬಲಗೊಳಿಸುವುದನ್ನು ನವ–ಉದಾರವಾದಿಗಳು ಉತ್ತೇಜಿಸುತ್ತಾರೆ. ಆಹಾರ ಭದ್ರತೆಯನ್ನು ಖಾತರಿಪಡಿಸಲು ಭಾರತಕ್ಕೆ, ಪ್ರತಿ ಮನೆಗೆ ಕನಿಷ್ಠ 35 ಕೆಜಿ ಆಹಾರ ಧಾನ್ಯವನ್ನು ಒಂದು ಕೆಜಿ ಗೋಧಿಗೆ 2 ರೂ ಮತ್ತು ಅಕ್ಕಿಗೆ 3 ರೂಪಾಯಿಯ ಕೇಂದ್ರ ನಿಗದಿತ ಬೆಲೆಗಳಲ್ಲಿ ಒದಗಿಸುವ ಸಾರ್ವತ್ರಿಕ ಆಹಾರ ಹಕ್ಕಿನ ಆವಶ್ಯಕತೆ ಇದೆ. ಇತರ ಅಗತ್ಯ ಆಹಾರ ಪದಾರ್ಥಗಳನ್ನು ಸಹ ಸಬ್ಸಿಡಿ ದರದಲ್ಲಿ ಫಲಾನುಭವಿಗಳಿಗೆ ಸಿಗುವ ಆಹಾರಗಳ ಪಟ್ಟಿಯಲ್ಲಿ ಸೇರಿಸಬೇಕು.

ಆಹಾರ ಭದ್ರತೆಗಾಗಿನ ಹೋರಾಟವು, ರೈತರ ಹಕ್ಕುಗಳಿಗೆ ಸಂಬಂಧಿಸಿದ ಆಹಾರ ಧಾನ್ಯಗಳ ಉತ್ಪಾದನೆ ಮತ್ತು ಖರೀದಿಯ ನೀತಿಗಳ ಹಿನ್ನೆಲೆಯಲ್ಲಿ ನಡೆಯುತ್ತಿದೆ. ಇದರಿಂದ ಅವುಗಳು ಸಹ ಆಕ್ರಮಣಕ್ಕೆ ಒಳಗಾಗಿವೆ. ಈ ಅಂಶವನ್ನು ಮುಂದೆ ಪ್ರತ್ಯೇಕವಾಗಿ ವಿಶ್ಲೇಷಿಸಲಾಗುವುದು.

ಅಭಿವ್ಯಕ್ತಿಯ ನಿಷೇಧ ಸಂಸ್ಕೃತಿಯ ಅವಾಂತರಗಳು... ಪುಟ 6 ರಿಂದ

ಪುಂಡರ ಸಂಘಟನೆಗೆ ಅಕ್ಷೇಪಕ್ಕೆ ಕಾರಣವಾಗಿದೆ. ಈ ನಾಟಕವು ಜಾತಿ, ಸಾಮಾಜಿಕ ವಿಬಜನೆಗಳು ಕುರಿತು ವಿಡಂಬನಾತ್ಮಕವಾಗಿ ಹೇಳುತ್ತದೆ. ನಿರ್ದೇಶಕ ಶಾಂತನು ಪಾಂಡೆ 'ಈ ನಾಟಕದಲ್ಲಿ ಸಾಧು ಎನ್ನುವ ಹೆಸರು ಆ ಸಾಧು ಸಂತರಿಗೆ ಸಂಬಂದಿಸಿಲ್ಲ. ಬದಲಿಗೆ ಒಬ್ಬ ಸಜ್ಜನ ವ್ಯಕ್ತಿಗೆ ಹೆಸರಿಡಲಾಗಿದೆ ಮತ್ತು ಹಿಂದಿಯಲ್ಲಿ ಸಾದಾರಣವಾಗಿ ಅಂತಹವರನ್ನು ಸಾಧು ಮನುಶ್ಯ ಎಂದು ಕರೆಯುತ್ತಾರೆ' ಎಂದು ಹೇಳಿದರು. ಆದರೆ ಮತಾಂದತೆಯ ಅಮಲು ಏರಿಸಿಕೊಂಡ ಸಮೂಹಸನ್ನಿಗೆ ಇದು ಅರ್ಥವಾಗುವ ಸಾದ್ಯತೆಗಳೇ ಇಲ್ಲ. ದಶಕಗಳ ಹಿಂದೆ ಮಹಾರಾಷ್ಟ್ರದ ಶಿವಸೇನೆ ಮತ್ತು ಬಾಳಾ ಠಾಕ್ರೆಯ ಪುಂಡ ಪೋಕರಿಗಳ ಗುಂಪು ವಿಜಯ್ ತೆಂಡೂಲ್ಕರ್‌ರವರ 'ಸದ್ದು ಕೋರ್ಟ ನಡೆಯುತ್ತಿದೆ, ಘಾಶೀರಾಂ ಕೊತ್ವಾಲ್, ಸಖಾರಾಮ್ ಬಿಂದರ್' ದಂತಹ ವಿಡಂಬನಾತ್ಮಕ ನಾಟಕಗಳ ವಿರುದ್ದವೂ ಗಲಾಟೆ ಮಾಡಿದ್ದರು. 2019ರ ಫೆಬ್ರವರಿಯಲ್ಲಿ ಜೈಪುರದಲ್ಲಿ ಪ್ರದರ್ಶನಗೊಳ್ಳಬೇಕಿದ್ದ ಅಭಿಶೇಕ್ ಮುಜುಂದಾರ್ ನಿರ್ದೇಶನದ ನಾಟಕ Djinns of Eidgah ವನ್ನು ರದ್ದುಗೊಳಿಸಲಾಯಿತು. ಈ ನಾಟಕವು 'ದೇಶ ವಿರೋದಿ'ಯಾಗಿದೆ ಎಂದು ಜನ ಸಮಸ್ಯ ನಿವಾರಣ್ ಮಂಚ್ ಎನ್ನುವ ಬಲಪಂಥೀಯ ಸಂಘಟನೆ ಸ್ಥಳೀಯ ಪೋಲೀಸ್ ಠಾಣೆಯಲ್ಲಿ ದೂರು ಸಲ್ಲಿಸಿತ್ತು. ಈ ನಾಟಕದಲ್ಲಿ ಕಾಶ್ಮೀರದ ಉಗ್ರವಾದದ ವಾತಾವರಣದಲ್ಲಿ ಸಿಲುಕಿಕೊಂಡ ಯುವಜನತೆ ಮತ್ತು ಬದ್ರತಾ ಪಡೆಯ ಕುರಿತು ನಿರೂಪಿಸಲಾಗಿದೆ. ಆದರೆ ಫ್ಯಾಸಿಸಂ ವ್ಯವಸ್ಥೆಯಲ್ಲಿ ಇದು ದೇಶವಿರೋದಿಯಾಗಿ ಪರಿಗಣಿಸಲ್ಪಡುತ್ತದೆ.

ಅಕ್ಟೋಬರ್ 2018ರಲ್ಲಿ ಬೆಂಗಳೂರಿನ ಜಾಗೃತಿ ಥಿಯೇಟರ್‌ನಲ್ಲಿ ದಯಾಸಿಂದು ಸಕ್ರೆಪಟ್ಟಣ ನಿರ್ದೇಶಿಸಿದ 'ಶಿವ' ನಾಟಕದ ಪ್ರದರ್ಶನಕ್ಕೆ ಮೂರು ಬೇರೆ ಬೇರೆ ಪುಂಡ ಗುಂಪುಗಳು ವಿರೋದ ವ್ಯಕ್ತಪಡಿಸಿದವು. ಜಾಗೃತಿಯ ಅರುಂದತಿ ರಾಜಾ ಸ್ಥಳೀಯ ಪೋಲೀಸರ ರಕ್ಷಣೆ ಬಯಸಿ ವಿನಂತಿಸಿಕೊಂಡಾಗ ನಮ್ಮ ಬಳಿ ಅವಶ್ಯಕ ಪೋಲೀಸರಿಲ್ಲ ಎಂದು ಎಜಿಡಿಪಿ ಕೈ ತೊಳೆದುಕೊಂಡರು. 'ನಮ್ಮ ದೇವರ ಕುರಿತು ನಿಮಗೆ ಮಾತನಾಡಲು ಯಾವುದೇ ಹಕ್ಕಿಲ್ಲ' ಎಂದು ವಾದಿಸುವ ಆ ಮತಾಂದರನ್ನು ಎದುರಿಸಲಾಗದೆ ಪ್ರದರ್ಶನವನ್ನು ರದ್ದುಗೊಳಿಸಲಾಯಿತು

ಅರ್ಥಪೂರ್ಣ ಕೃತಿ ಬರೆದು, ನಿರ್ದೇಶಿಸಿದ ಕಾರಣಕ್ಕೆ ದಾಳಿಗೆ ಗುರಿಯಾಗುವುದು ಮತ್ತು ಆ ದೇಶದಲ್ಲಿ ಕ್ರಿಯಾಶೀಲರಾಗಿ, ಆತ್ಮವಂಚನೆಯಿಲ್ಲದೆ ಜೀವಿಸುವುದು ತುಂಬಾ ಕಠಿಣ. ಇಲ್ಲಿ ನಿರ್ದೇಶಕ ಮತ್ತು ನಿರ್ಮಾಪಕರು ಪೋಲೀಸರ ರಕ್ಷಣೆಗೆ ಮನವಿ ಸಲ್ಲಿಸಿದರು ಆದರೆ ಅವರಿಗೆ ಯಾವುದೇ ಸಕರಾತ್ಮಕ ಉತ್ತರ ದೊರಕಿಲ್ಲ.

ಉಪಸಂಹಾರ

ರಂಗಭೂಮಿ ಇತಿಹಾಸಕಾರ, ನಾಟಕಕಾರ ಶಾಂತಾ ಗೋಖಲೆಯವರು 'ಅರವತ್ತು, ಎಪ್ಪತ್ತರ ದಶಕಗಳಲ್ಲಿಯೂ ನಾಟಕಗಳ ವಿರುದ್ಧ ಪ್ರತಿಬಟನೆಗಳು ನಡೆಯುತ್ತಿದ್ದವು. ಆದರೆ ಆಗ ಕೆಲ ದೃಶ್ಯಗಳಲ್ಲಿ ಆಶ್ಲೀಲತೆಯಿದೆ, ದ್ವಂದಾರ್ಥ ಸಂಬಾಶಣೆಯಿದೆ, ರಂಗಮಂಚದ ಮೇಲೆಯೇ ಮಹಿಳಾ ಪಾತ್ರದಾರಿಗಳು ಸೀರೆ ಬದಲಿಸುತ್ತಾರೆ, ಅದೇ ಮಹಿಳೆಯು ಮತ್ತೊಂದು ದೃಶ್ಯದಲ್ಲಿ ತನ್ನ ಗಂಡನಿಗೆ ಚಪ್ಪಲಿಯಲ್ಲಿ ಹೊಡೆಯುತ್ತಾಳೆ ಎನ್ನುವ ಆಕ್ಷೇಪಣೆಗಳಿದ್ದವು' ಎಂದು ನೆನಪಿಸಿಕೊಳ್ಳುತ್ತಾರೆ. ಆದರೆ ಈಗ ನಿರಂಕುಶ ಆಡಳಿತದಲ್ಲಿ ಬಲಪಂಥೀಯ ಪುಂಡ ಗುಂಪುಗಳು ಕೇವಲ ದಾರ್ಮಿಕತೆಯ ಕಾರಣವನ್ನು ಮುಂದಿಟ್ಟುಕೊಂಡು ನಾಟಕದ ಪ್ರದರ್ಶನದ ವಿರುದ್ಧ ಹಿಂಸೆಗೆ ಮುಂದಾಗುತ್ತಾರೆ. ನಿಮಗೆ ಇಶ್ಟವಿಲ್ಲದೇ ಹೋದರೆ ಈ ನಾಟಕವನ್ನು ನೋಡಬೇಡಿ ಎನ್ನುವ ಸಜ್ಜನಿಕೆಗೆ ಇಂದು ಯಾವುದೇ ಬೆಲೆಯಿಲ್ಲ. ಈ ಬಲಪಂಥೀಯ ಗುಂಪುಗಳ ಪುಂಡಾಟಿಕೆಯೆ ನಿಶೇದಕ್ಕೊಳಪಡುವುದು ಇಂದಿನ ಅಗತ್ಯವಾಗಿದೆ.

ಭಾರತದ ಪ್ರಜಾಪ್ರಬುತ್ವವು ತಾರತಮ್ಯದ ತಳಹದಿಯ ಮೇಲೆ ನಿಂತಿದೆ ಮತ್ತು ಇಂದು ನಿರಂಕುಶ ಪ್ರಬುತ್ವದ ಅಬಿವ್ಯಕ್ತಿಯಾಗಿ ಮಾರ್ಪಟ್ಟಿದೆ. ಇಂತಹ ಸನ್ನಿವೇಶದಲ್ಲಿ ಇಲ್ಲಿನ ಪ್ರಬುತ್ವ–ವ್ಯವಸ್ಥೆಗೆ ಶ್ರೇಣೀಕೃತ ಜಾತಿ ವ್ಯವಸ್ಥೆಯಲ್ಲಿನ ಮೇಲ್ಜಾತಿಗಳ ಹಿತಾಸಕ್ತಿ ಕಾಪಾಡುವುದು ಮುಖ್ಯವಾಗುತ್ತದೆ. ಇವರ ಎಲ್ಲಾ ಕ್ರೌರ್ಯ ಮತ್ತು ಟೊಳ್ಳುತನವನ್ನ ಬಯಲು ಮಾಡುವ ಸಾಹಿತ್ಯ, ಸಿನಿಮಾ, ನಾಟಕಗಳ ವಿರುದ್ದ ತೂಗುಗತ್ತಿ ನೇತಾಡುತ್ತಲೇ ಇರುತ್ತದೆ. ಬ್ರಾಹ್ಮಣ್ಯದ ತಾರತಮ್ಯ ಸಿದ್ದಾಂತದ ಮುಂದುವರೆದ ಭಾಗದಂತೆ, ಅದರ ಕವಲೊಡೆದ ಟೊಂಗೆಗಳಂತಿರುವ ಈ ಬಲಪಂಥೀಯ ಪುಂಡರ ಗುಂಪುಗಳನ್ನು ಇಲ್ಲಿನ ಸಾರ್ವಜನಿಕ ಸಂಸ್ಥೆಗಳು ಬೆಂಬಲಿಸುತ್ತವೆ. ಅಂಚಿನಲ್ಲಿರುವ ಪುಂಡ ಪೋಕರಿಗಳ ಗುಂಪು ಈ ಬಹುಸಂಖ್ಯಾತವಾದದ ಹುಸಿ ರಾಷ್ಟ್ರೀಯತೆ, ಮೇಲ್ಜಾತಿಗಳ ಯಜಮಾನ್ಯ ಧೋರಣೆ ಮತ್ತು ಪರಂಪರೆಯ ಸಂಸ್ಕೃತೀಕರಣ ಹಾಗೂ ಪರಧರ್ಮ, ಜೀವಪರ ಚಿಂತನೆಗಳ ಕುರಿತಾಗಿ ಅಸಹಿಷ್ಣತೆಯನ್ನು ಮೈಗೂಡಿಸಿಕೊಂಡರೆ ಅದನ್ನು ಎದುರಿಸಬಹುದು ಆದರೆ ಅದಿಕಾರದಲ್ಲಿರುವ ಪಕ್ಷ ಮತ್ತು ಅದರ ಸಂಘಟನೆಗಳೇ ಇದರ ನೇತೃತ್ವ ವಹಿಸಿದಾಗ ಇದು "ಧರೆ ಹತ್ತಿ ಉರಿದರೆ" ಎನ್ನುವ ದುರಂತ.

ಸರ್ಕಾರಿ ಮತ್ತು ಇತರ ನೌಕರರ ಸಂಘಗಳು



ಸರ್ಕಾರಿ ನೌಕರರಲ್ಲಿ ಸಂಘಗಳಾಗಿ ಸಂಘಟಿತರಾಗಲು ನಿಜವಾಗಿಯೂ ಪರಿಣಾಮಕಾರಿಯಾದ ಸ್ಫೂರ್ತಿ ಮೊದಲನೆಯ ಮಹಾಯುದ್ಧದ ನಂತರದ ಅವಧಿಯಲ್ಲಿ ಮಾತ್ರ ಸಿಗಲು ಪ್ರಾರಂಭವಾಯಿತು. ಯುದ್ಧಾನಂತರದ ಆರ್ಥಿಕ ಬಿಕ್ಕಟ್ಟು ಮತ್ತು ಅಕ್ಟೋಬರ್ ಸಮಾಜವಾದಿ ಕ್ರಾಂತಿಯು ಆರ್ಥಿಕ ಪರಿಸ್ಥಿತಿಗಳು ಹದಗೆಡುತ್ತಿರುವದನ್ನು ವಿರೋಧಿಸುವ ಉದ್ದೇಶದಿಂದ ಸರ್ಕಾರಿ ನೌಕರರು ಸಂಘಟನೆಗಳನ್ನು ರೂಪಿಸಿಕೊಳ್ಳಲಾರಂಭಿಸಿದರು. ಎರಡನೆಯ ಮಹಾಯುದ್ಧದ ನಂತರ ಬೆಲೆಗಳ ಅಸಹಜ ಏರಿಕೆಯು ನೌಕರರ ಜೀವನ ಮಟ್ಟವನ್ನು ಗಣನೀಯವಾಗಿ ಕಡಿಮೆಗೊಳಿಸಿದಾಗ, ಅವರ ಜೀವನವನ್ನು ಅಸಹನೀಯವಾಗಿಸಿದಾಗ, ನೌಕರರು ಏಕತೆಯ ಅವಶ್ಯಕತೆಯನ್ನು ಅನುಭವಿಸಿದರು. 1920-21ರ ಅವಧಿಯಲ್ಲಿ ವಿವಿಧ ಪ್ರಾಂತ್ಯಗಳಲ್ಲಿನ ಪ್ರಾಂತೀಯ ಸರ್ಕಾರಿ ನೌಕರರ ಸಂಘಗಳು ಸಹ ರೂಪುಗೊಳ್ಳಲು ಪ್ರಾರಂಭವಾಯಿತು. ಖಾಸಗಿ ವಲಯದ ಬ್ಯಾಂಕ್, ವಿಮೆ ಮತ್ತು ಇತರ ಕೈಗಾರಿಕೆಗಳಲ್ಲಿ ಅಖಿಲ ಭಾರತ ಸಂಘಟನೆಯನ್ನು ರಚಿಸುವ ಪ್ರಯತ್ನಗಳು ಸ್ವಾತಂತ್ರ್ಯೋತ್ತರ ಅವಧಿಯಲ್ಲಿ ಮಾತ್ರ ಪ್ರಾರಂಭವಾದವು. ಮೊದಲನೆಯ ಮಹಾಯುದ್ಧದ ನಂತರದ ಅವಧಿಯಲ್ಲಿ ಖಾಸಗಿ ಶಾಲೆಗಳಲ್ಲಿ ಕೆಲಸ ಮಾಡುವ ಶಿಕ್ಷಕರ ಸಂಘಟನೆಗಳು ಸಹ ಅಭಿವೃದ್ಧಿ ಹೊಂದಿದವು.

ಮೂಲ ಲೇಖಕರು: **ಸುಕೋಮಲ್ ಸೇನ್** ಸಂಗ್ರಹ-ಅನುವಾದ: ಸಿ.ಆರ್. ಶಾನಭಾಗ್

ಸರ್ಕಾರವು ದೇಶದ ಅತಿದೊಡ್ಡ ಉದ್ಯೋಗದಾತನಾಗಿದ್ದು, ಭಾರತದ ವೈಟ್ ಕಾಲರ್ ಉದ್ಯೋಗಿಗಳಲ್ಲಿ ಹೆಚ್ಚಿನವರು ಕೇಂದ್ರ ಮತ್ತು ರಾಜ್ಯ ಸರ್ಕಾರಿ ಇಲಾಖೆಗಳಲ್ಲಿ ಉದ್ಯೋಗದಲ್ಲಿದ್ದಾರೆ.

ಕೈಗಾರಿಕಾ ಕಾರ್ಮಿಕರು ಅವಮಾನವೀಯ ಬಂಡವಾಳಶಾಹಿ ಶೋಷಣೆಯ ವಿರುದ್ಧ ನಿರಂತರ ಹೋರಾಟಗಳ ಮೂಲಕ ತಮ್ಮ ಕಾರ್ಮಿಕ ಸಂಘದ ಹಕ್ಕುಗಳನ್ನು ಸ್ಥಾಪಿಸಿದರು. ಆದರೆ ಸರ್ಕಾರಿ ನೌಕರರ ಟ್ರೇಡ್ ಯೂನಿಯನ್ ಆಂದೋಲನದ ಬೆಳವಣಿಗೆಯು ಮೊದಲಿನಿಂದಲೂ ವಸಾಹತುಶಾಹಿ ಸರ್ಕಾರವು ರಚಿಸಿದ ಕತ್ತು ಹಿಸುಕುವ ಅಡೆತಡೆಗಳನ್ನು ಎದುರಿಸಿತು.. ವಸಾಹತುಶಾಹಿ ಆಡಳಿತದಲ್ಲಿ ಸರ್ಕಾರಿ ನೌಕರರ ಇಡೀ ಸಮುದಾಯವನ್ನು ಜನರಿಗೆ ಸೇವೆ ಸಲ್ಲಿಸುತ್ತಿರುವ ಸಂಸ್ಥೆಯಾಗುವ ಬದಲಾಗಿ, ಜನರ ವಿರುದ್ಧ ಕ್ರೂರವಾಗಿ ಶೋಷಣೆ, ದಬ್ಬಾಳಿಕೆ ನಡೆಸುವ ಮತ್ತು ಜನರ ವಿರುದ್ಧ ವರ್ತಿಸುವ ವ್ಯವಸ್ಥೆಯ ಅಂಗಗಳಾಗಿ ಕಾರ್ಯನಿರ್ವಹಿಸುವಂತೆ ಮಾಡಲಾಯಿತು..

ಸರ್ಕಾರಿ ನೌಕರರ ಸೇವಾ ನಿಯಮಗಳ ಮತ್ತು ರಾಜಕೀಯ ಹಕ್ಕುಗಳ ನಿರಾಕರಣೆಯ ಮೂಲ

ಈಸ್ಟ್ ಇಂಡಿಯಾ ಕಂಪನಿಯ ಆಡಳಿತವನ್ನು ಭಾರತದಲ್ಲಿ ಸ್ಥಾಪಿಸಲು ಪ್ರಾರಂಭಿಸಿದ ತಕ್ಷಣ, ಕಂಪನಿಯ ನೌಕರರ ನಡವಳಿಕೆಯನ್ನು ನಿಯಂತ್ರಿಸಲು ವಿವಿಧ ತೀರ್ಪುಗಳನ್ನು ಘೋಷಿಸಲಾಯಿತು. ಈಸ್ಟ್ ಇಂಡಿಯಾ ಕಂಪನಿ ಕಾಯಿದೆಗಳು 1770, 1793 ಮತ್ತು 1797, ಕಚೇರಿ ಮಾರಾಟ ಕಾಯ್ದೆ 1809, ಭಾರತ ಸರ್ಕಾರ ಕಾಯ್ದೆ 1833, ಸುಪ್ರೀಂ ಕೋರ್ಟ್ ಅಧಿಕಾರಿಗಳ ಕಾಯ್ದೆ 1859, ಭಾರತ ದಂಡ ಸಂಹಿತೆ 1860, ಪೊಲೀಸ್ ಕಾಯ್ದೆ 1861, ಆಡಳಿತಾಧಿಕಾರಿಗಳ ಕಾಯ್ದೆ 1874 ಮತ್ತು ಆ ದಿನಗಳಲ್ಲಿ ಅಂಗೀಕರಿಸಲ್ಪಟ್ಟ ಇತರ ಕಾಯಿದೆಗಳು ನೌಕರರ ನಡವಳಿಕೆಯನ್ನು ನಿಯಂತ್ರಿಸುವ ಅಧಿಕೃತ ಆದೇಶಗಳ ಆಧಾರವನ್ನು ರೂಪಿಸಿದವು.

ಆದರೆ ಈ ಕಾಯಿದೆಗಳ ಆಧಾರದ ಮೇಲೆ ಹೊರಡಿಸಲಾದ ಆದೇಶಗಳು ಮತ್ತು ಸೂಚನೆಗಳು ನೌಕರರು ರಾಜಕೀಯ ಚಟುವಟಿಕೆಗಳಲ್ಲಿ ಭಾಗವಹಿಸುವುದಕ್ಕೆ ಸಂಬಂಧಿಸಿದಂತೆ ನಿರ್ಬಂಧ ಹೇರಿರಲಿಲ್ಲ. 1885 ರಲ್ಲಿ ಭಾರತ ರಾಷ್ಟ್ರೀಯ ಕಾಂಗ್ರೆಸ್ ಸ್ಥಾಪನೆಯೊಂದಿಗೆ, ವಸಾಹತುಶಾಹಿ ಸರ್ಕಾರವು 1890 ರಲ್ಲಿ ಮೊದಲ ಬಾರಿಗೆ ಈ ನಿಟ್ಟಿನಲ್ಲಿ ಗವರ್ನರ್ ಜನರಲ್-ಇನ್-ಕೌನ್ಸಿಲ್ ಆದೇಶಗಳನ್ನು ಹೊರಡಿಸಿದರು. ಆದೇಶಗಳನ್ನು ಒಳಗೊಂಡಿರುವ ಸುತ್ತೋಲೆ "ಸರ್ಕಾರಿ ನೌಕರನು ಯಾವುದೇ ರಾಜಕೀಯ ಆಂದೋಲನ ಅಥವಾ ಸಭೆಯಲ್ಲಿ ಭಾಗವಹಿಸಬಾರದು, ಅಥವಾ ಯಾವುದೇ ರಾಜಕೀಯ ಸಭೆಗೆ ಹಾಜರಾಗಬಾರದು.." ಎಂದಿತು.

ಸರ್ಕಾರಿ ನೌಕರರ ನಡವಳಿಕೆ ನಿಯಮಗಳು 1904 ಹೆಸರಲ್ಲಿ ಭಾರತ ಸರ್ಕಾರವು ನಿಯಮಗಳನ್ನು ರೂಪಿಸಿದ ನಂತರ, ಕೇಂದ್ರ ಮತ್ತು ಪ್ರಾಂತೀಯ ಸರ್ಕಾರಿ ನೌಕರರಿಗೆ ಸಂಬಂಧಿಸಿದಂತೆ ಇವುಗಳನ್ನು ಅನ್ವಯಿಸಲಾಯಿತು.ಮತ್ತು 1905 ರಲ್ಲಿ ಹೆಚ್ಚು ಕಠಿಣ ರೂಪವನ್ನು ಪಡೆಯಿತು. ಅಂದಿನಿಂದ ಈ ನಡವಳಿಕೆ ನಿಯಮಗಳನ್ನು ಲೆಕ್ಕವಿಲ್ಲದಷ್ಟು ಬಾರಿ ಮಾರ್ಪಡಿಸಲಾಗಿದೆ ಮತ್ತು ಹೆಚ್ಚು ಹೆಚ್ಚು ಪ್ರತಿಗಾಮಿ ರೂಪವನ್ನು ನೀಡಲಾಗಿದೆ, ಇವುಗಳಲ್ಲಿ, ಸಾರ್ವಜನಿಕ ಸ್ಥಳಗಳಲ್ಲಿ ಸಭೆ, ಮೆರವಣಿಗೆ ಮತ್ತು ಸರ್ಕಾರಿ ನೌಕರರ ಮುಷ್ಕರವನ್ನು ನಿಷೇಧಿಸುವುದು ಸೇರಿದೆ. 1947 ರಲ್ಲಿ ವಸಾಹತುಶಾಹಿ ಆಡಳಿತ ಮುಗಿದ ನಂತರವೂ. ಈ ಪ್ರಜಾಪ್ರಭುತ್ವ ವಿರೋಧಿ ನಿಯಮಗಳನ್ನು ರದ್ದುಪಡಿಸಲಾಗಿಲ್ಲ.

ಸರ್ಕಾರಿ ನೌಕರರ ಸಂಘವನ್ನು ಗುರುತಿಸುವ ತತ್ವಗಳು-ಅದರ ಮೂಲ

ಸರ್ಕಾರಿ ನೌಕರರ ಸಂಘಗಳು ಮತ್ತು ಸಂಘಗಳಿಗೆ ಅಧಿಕೃತ ಮಾನ್ಯತೆ ನೀಡುವ ತತ್ವಗಳನ್ನು ಮೊದಲು ಅಕ್ಟೋಬರ್ 13, 1921 ರಂದು ರಚಿಸಲಾಯಿತು.

ಏತನ್ಮಧ್ಯೆ, ಮೊದಲನೆಯ ಮಹಾಯುದ್ಧದ ಕೊನೆಯಲ್ಲಿ ಜಾರಿಗೆ ಬಂದ ವರ್ಸೈಲ್ಸ್ ಶಾಂತಿ ಒಪ್ಪಂದವು ವಿಶ್ವದ ಬೆಳೆಯುತ್ತಿದ್ದ ಕಾರ್ಮಿಕ ಚಳವಳಿಯನ್ನು ಗುರುತಿಸಿ ಲೀಗ್ ಆಫ್ ನೇಷನ್ಸ್‌ನ ಭಾಗವಾಗಿ ಅಂತರರಾಷ್ಟ್ರೀಯ ಕಾರ್ಮಿಕ ಸಂಘಟನೆಯ (ಐ.ಎಲ್.ಓ.) ರಚನೆಯನ್ನು ಮಾಡಿತು. ಶಾಂತಿ ಒಪ್ಪಂದದ 427 ನೇ ಕಲಂ 'ಉದ್ಯೋಗಿಗಳು ಮತ್ತು ಉದ್ಯೋಗದಾತರು ಎಲ್ಲಾ ಕಾನೂನುಬದ್ಧ ಉದ್ದೇಶಗಳಿಗಾಗಿ ಸಂಘ ರಚಿಸಿಕೊಳ್ಳುವ ಹಕ್ಕನ್ನು' ಗುರುತಿಸಿತು.

ಆದ್ದರಿಂದ ಅಕ್ಟೋಬರ್ 13, 1921 ರಂದು ಭಾರತ ಸರ್ಕಾರವು ಒಂದು ಆದೇಶವನ್ನು ಹೊರಡಿಸಿ, ಭಾರತದಲ್ಲಿನ ಸರ್ಕಾರಿ ನೌಕರರ ಸಂಘಗಳಿಗೆ ಮಾನ್ಯತೆ ನೀಡಲು ಸಂಪೂರ್ಣ ನಿಯಮಗಳನ್ನು ರೂಪಿಸಿತು ಮತ್ತು ನೌಕರರ ನಿರ್ದಿಷ್ಟ ವಿಭಾಗಗಳ ಸಂದರ್ಭಗಳನ್ನು ಪೂರೈಸಲು ಅಗತ್ಯವಿರುವಂತಹ ಸಹಾಯಕ ನಿಯಮಗಳನ್ನು ಮಾಡಲು ಪ್ರಾಂತೀಯ ಸರ್ಕಾರಗಳಿಗೆ ಅಧಿಕಾರ ನೀಡಿತು.

ಭಾರತದ ಸರ್ಕಾರಿ ನೌಕರರ ಸಂಘಗಳಲ್ಲಿ. ಫೋರ್‌ಮ್ಯಾನ್ಸ್ ಅಸೋಸಿಯೇಷನ್ ಆಫ್ ಇಂಡಿಯಾ, ಭಾರತದ ಆರ್ಡ್‌ನೆನ್ಸ್(ಮದ್ದುಗುಂಡುಗಳ) ಕಾರ್ಖಾನೆಗಳಲ್ಲಿನ ಫೋರ್‌ಮೆನ್‌ಗಳ ಸಂಘಟನೆಯಾಗಿದ್ದು, ಅಧಿಕೃತ ಮಾನ್ಯತೆ ಪಡೆದ ಮೊದಲ ಸಂಘ. ಆ ಸಂಘದ ಕೇಂದ್ರ ಕಚೇರಿ ಕಲ್ಕತ್ತಾದ ದಮ್ ದಮ್‌ನಲ್ಲಿತ್ತು.

ಸಂಧಾನ ಮಾತುಕತೆಯ ಹಕ್ಕುಗಳು

ಸ್ವತಂತ್ರ ಭಾರತದಲ್ಲಿ 1960 ರಲ್ಲಿ ನೌಕರರ ದೇಶವ್ಯಾಪಿ ಮುಷ್ಕರ ಸೇರಿದಂತೆ ವಿವಿಧ ಆಂದೋಲನ ಚಟುವಟಿಕೆಗಳ 19 ವರ್ಷಗಳ ಸುದೀರ್ಘ ಅವಧಿಯ ನಂತರವೇ ಭಾರತ ಸರ್ಕಾರವು ಅಂತಿಮವಾಗಿ ಅಕ್ಟೋಬರ್ 1966 ರಲ್ಲಿ ಭಾರತದ ಕೇಂದ್ರ ಸರ್ಕಾರಿ ನೌಕರರಿಗೆ ಜಂಟಿ ಸಮಾಲೋಚನಾ ವ್ಯವಸ್ಥೆಯನ್ನು ಪರಿಚಯಿಸಬೇಕಾಗಿ ಬಂತು. ಭಾರತದಲ್ಲಿ ಪರಿಚಯಿಸಲಾದ ಜಂಟಿ ಸಲಹಾ ವ್ಯವಸ್ಥೆ ಯೋಜನೆಯು ರಾಷ್ಟ್ರೀಯ ಮಟ್ಟದಲ್ಲಿ ಮತ್ತು ಸಾಮಾನ್ಯವಾಗಿ ಎರಡು ಕೆಳ ಹಂತಗಳಲ್ಲಿ- ಇಲಾಖೆ ಮತ್ತು ಪ್ರಾದೇಶಿಕ ಕಚೇರಿಯಲ್ಲಿ ಜಂಟಿ ಮಂಡಳಿಯಿಂದ ಕೂಡಿದೆ. ರಾಷ್ಟ್ರೀಯ ಕೌನ್ಸಿಲ್ ಸಾಮಾನ್ಯವಾಗಿ ಕೇಂದ್ರ ಸರ್ಕಾರಿ ನೌಕರರ ಮೇಲೆ ಪರಿಣಾಮ ಬೀರುವ ಉದಾಹರಣೆಗೆ ಕನಿಷ್ಠ ವೇತನ, ತುಟ್ಟಿ-ಭತ್ಯೆ ಮತ್ತು ಕೆಲವು ಸಾಮಾನ್ಯ ವರ್ಗಗಳ ವೇತನ ಮತ್ತು ಸಾಮಾನ್ಯ ಆಸಕ್ತಿಯ ಇತರ ಸೇವಾಸೌಲಭ್ಯ ವಿಷಯಗಳ ಬಗ್ಗೆ ವ್ಯವಹರಿಸುತ್ತದೆ. ನ್ಯಾಷನಲ್ ಕೌನ್ಸಿಲ್ ತನ್ನ ಹಿರಿಯ ಅಧಿಕಾರಿಗಳಿಂದ ಸರ್ಕಾರ ನೇಮಿಸಿದ 25 ಸದಸ್ಯರನ್ನು ಒಳಗೊಂಡಿರುವ ಅಧಿಕೃತ ಭಾಗವನ್ನು ಮತ್ತು ಮಾನ್ಯತೆ ಪಡೆದ ಸಂಘಗಳಿಂದ ನಾಮನಿರ್ದೇಶನಗೊಂಡ 60 ಸದಸ್ಯರನ್ನು ಒಳಗೊಂಡಿರುವ ಸ್ಟಾಫ್ ಸೈಡ್ ಅನ್ನು ಒಳಗೊಂಡಿದೆ.

ಸುಮಾರು ಇಪ್ಪತ್ತು ಲಕ್ಷ ಕೇಂದ್ರ ಸರ್ಕಾರಿ ನೌಕರರಿಗಾಗಿ ಈ ಯೋಜನೆಯನ್ನು ಪರಿಚಯಿಸಲಾಗಿದ್ದರೂ, ದೇಶದ ಸರ್ಕಾರಿ ನೌಕರರಲ್ಲಿ ಸುಮಾರು ಏಳು ಮಿಲಿಯನ್ ಸಂಖ್ಯೆಯ ರಾಜ್ಯ ಸರ್ಕಾರಿ ನೌಕರರು ಅಂತಹ ಯಾವುದೇ ಯೋಜನೆಯ ವ್ಯಾಪ್ತಿಗೆ ಬರುವುದಿಲ್ಲ. ಇದಲ್ಲದೆ, ಗ್ರೇಟ್ ಬ್ರಿಟನ್ ಅಥವಾ ಇತರ ಅನೇಕ ಪಾಶ್ಚಿಮಾತ್ಯ ಬಂಡವಾಳಶಾಹಿ ದೇಶಗಳಿಗಿಂತ ಭಿನ್ನವಾಗಿ, ಭಾರತದಲ್ಲಿನ ಸರ್ಕಾರಿ ನೌಕರರನ್ನು ಮುಷ್ಕರ ಹಕ್ಕಿನಿಂದ ಸಾಂವಿಧಾನಿಕವಾಗಿ ನಿರ್ಬಂಧಿಸಲಾಗಿದೆ. ಭಾರತದಲ್ಲಿ ಸರ್ಕಾರಿ ನೌಕರರ ಸಂಘಟನೆಗಳ ಹೆಚ್ಚುತ್ತಿರುವ ಶಕ್ತಿಯು ಕಳೆದ ಎರಡು ದಶಕಗಳಲ್ಲಿ ಈ ನೌಕರರ ಹಲವಾರು ಮುಷ್ಕರಗಳಿಗೆ ಕಾರಣವಾದರೂ, ಈ 'ಕಾನೂನುಬಾಹಿರ' ಮುಷ್ಕರಗಳು, ದೊಡ್ಡ ಪ್ರಮಾಣದ ಹಿಂಸೆ ಮತ್ತು ಪೊಲೀಸ್ ದೌರ್ಜನ್ಯಗಳ ರೂಪದಲ್ಲಿ ನೌಕರರಿಗೆ ಅಪಾರ ಯಾತನೆಗಳನ್ನುಂಟು ಮಾಡಿವೆ.

ಸರ್ಕಾರಿ ನೌಕರರ ಸಂಘಗಳು ಮತ್ತು ಯೂನಿಯನ್‌ಗಳ ಬೆಳವಣಿಗೆ

ಸರ್ಕಾರಿ ನೌಕರರ ಸಂಘಗಳು ಇಪ್ಪತ್ತನೇ ಶತಮಾನದ ಮೊದಲ ದಶಕದಲ್ಲಿ ರೂಪುಗೊಳ್ಳಲು ಪ್ರಾರಂಭಿಸಿದವು. 1906 ರಲ್ಲಿ ರೂಪುಗೊಂಡ ಇಂಡಿಯನ್ ಟೆಲಿಗ್ರಾಫ್ ಅಸೋಸಿಯೇಷನ್ ಈ ವರ್ಗದ ಮೊದಲ ಸಂಘ ಎಂದು ಹೇಳಬಹುದು..

ದೇಶದ ಅಂಚೆ ನೌಕರರು ಈ ಶತಮಾನದ ಆರಂಭದಲ್ಲಿ ಅವರ ಸೇವೆಯ ಸ್ಥಿತಿಗೆ ಸಂಬಂಧಿಸಿದಂತೆ ಹಲವಾರು ಸಮಸ್ಯೆಗಳನ್ನು ಎದುರಿಸುತ್ತಿದ್ದರು. ಅಂಚೆ ನೌಕರರಾಗಿದ್ದ ತಾರಪದ ಮುಖರ್ಜಿ ಅಂಚೆ ನೌಕರರ ಟ್ರೇಡ್ ಯೂನಿಯನ್ ಆಂದೋಲನದ ಮಹಾನ್ ಪ್ರಾಯೋಜಕರಾಗಿ ಬಂಗಾಳದ ಅಂಚೆ ನೌಕರರನ್ನು ಸಂಘಟಿಸುವ ತನ್ನ ಪ್ರಯತ್ನಗಳನ್ನು ಪ್ರಾರಂಭಿಸಿದರು. ಆದರೆ ಉದ್ಯೋಗಿಗಳಲ್ಲಿ ಭಯದ ಮನೋಭಾವ ಚಾಲ್ತಿಯಲ್ಲಿದ್ದ ಕಾರಣ, ಅವರನ್ನು ಸಂಘವಾಗಿ ಸಂಘಟಿಸುವುದು ಆ ಹಂತದಲ್ಲಿ ಬಹಳ ಕಷ್ಟಕರವಾಗಿತ್ತು. ಆದ್ದರಿಂದ ಸಂಘವನ್ನು ರಚಿಸಲು ನೇರವಾಗಿ ಪ್ರಯತ್ನಿಸುವ ಬದಲು, ಅದರ ಕಡೆಗೆ ಒಂದು ಹೆಜ್ಜೆಯಾಗಿ. ಅವರು ಮಾರ್ಚ್ 1908 ರಲ್ಲಿ ಕಲ್ಕತ್ತಾದ ಅಂಚೆ ನೌಕರರ ಸಭೆಯಲ್ಲಿ ಅಂಚೆ ಕ್ಲಬ್ ಅನ್ನು ರಚಿಸಿದರು. ಮುಂಬೈ ನಗರದಲ್ಲಿಯೂ ಸಹ ಅದೇ ಅವಧಿಯಲ್ಲಿ ಅಂಚೆ ಕ್ಲಬ್ ಅನ್ನು ರಚಿಸಲಾಯಿತು. ನಂತರದ ಅವಧಿಯಲ್ಲಿ ಅಂಚೆ ಮತ್ತು ಆರ್.ಎಂ.ಎಸ್. ನೌಕರರ ಯೂನಿಯನ್ ರಚನೆಯಲ್ಲಿ ಈ ಎರಡು ಅಂಚೆ ಕ್ಲಬ್‌ಗಳು ಗಮನಾರ್ಹ ಪಾತ್ರವಹಿಸಿದವು.

ಸರ್ಕಾರಿ ನೌಕರರಲ್ಲಿ ಸಂಘಗಳಾಗಿ ಸಂಘಟಿತರಾಗಲು ನಿಜವಾಗಿಯೂ ಪರಿಣಾಮಕಾರಿಯಾದ ಸ್ಫೂರ್ತಿ ಮೊದಲನೆಯ ಮಹಾಯುದ್ಧದ ನಂತರದ ಅವಧಿಯಲ್ಲಿ ಮಾತ್ರ ಸಿಗಲು ಪ್ರಾರಂಭವಾಯಿತು. ಯುದ್ಧಾನಂತರದ ಆರ್ಥಿಕ ಬಿಕ್ಕಟ್ಟು ಮತ್ತು ಅಕ್ಟೋಬರ್ ಸಮಾಜವಾದಿ ಕ್ರಾಂತಿಯು ಆರ್ಥಿಕ ಪರಿಸ್ಥಿತಿಗಳು ಹದಗೆಡುತ್ತಿರುವದನ್ನು ವಿರೋಧಿಸುವ ಉದ್ದೇಶದಿಂದ ಸರ್ಕಾರಿ ನೌಕರರನ್ನು ಸಂಘಟನೆಗಳನ್ನು ರೂಪಿಸಲು ಒತ್ತಾಯಿಸಿತು ಮತ್ತು ಪ್ರೇರೇಪಿಸಿತು. ಸೆಪ್ಟೆಂಬರ್ 19-21ರಂದು ಕಲ್ಕತ್ತಾದ ಇಂಡಿಯನ್ ಅಸೋಸಿಯೇಷನ್ ಹಾಲ್‌ನಲ್ಲಿ ನಡೆದ ಸಮ್ಮೇಳನದಲ್ಲಿ ಪ್ರಾವಿನ್ಶಿಯಲ್ ಪೋಸ್ಟಲ್ ಅಂಡ್ ಆರ್.ಎಂ.ಎಸ್. ಅಸೋಸಿಯೇಷನ್, ಬಂಗಾಳ ಮತ್ತು ಅಸ್ಸಾಂ ಸರ್ಕಲ್ ರಚನೆಯಾಯಿತು. ಈ ಪ್ರಾಂತೀಯ ಸಮ್ಮೇಳನದ ತಕ್ಷಣ ನಂತರ, 1920 ರ ಸೆಪ್ಟೆಂಬರ್ 24-26ರಂದು ದೆಹಲಿಯಲ್ಲಿ ಅಖಿಲ ಭಾರತ ಅಂಚೆ ಮತ್ತು ಆರ್.ಎಂ.ಎಸ್. ನೌಕರರ ಸಮ್ಮೇಳನ ನಡೆಸಲಾಯಿತು.

ಈ ಸಮ್ಮೇಳನವು ಅಖಿಲ ಭಾರತ ಅಂಚೆ ಕಚೇರಿ ಮತ್ತು ಆರ್. ಎಂ.ಎಸ್. ಯೂನಿಯನ್ (ಬರ್ಮ ಸೇರಿದಂತೆ) ರಚಿಸುವಲ್ಲಿ ಸಂಪನ್ನಗೊಂಡಿತು. 1924 ರಲ್ಲಿ ಈ ಸಂಘವು 70,000 ಸದಸ್ಯತ್ವವನ್ನು ಹೊಂದಿತ್ತು.

ಎರಡನೆಯ ಮಹಾಯುದ್ಧದ ನಂತರ ಬೆಲೆಗಳ ಅಸಹಜ ಏರಿಕೆಯು ನೌಕರರ ಜೀವನ ಮಟ್ಟವನ್ನು ಗಣನೀಯವಾಗಿ ಕಡಿಮೆಗೊಳಿಸಿತು ಮತ್ತು ಅವರ ಜೀವನವನ್ನು ಅಸಹನೀಯವಾಗಿಸಿದಾಗ, ನೌಕರರು ಏಕತೆಯ ಅವಶ್ಯಕತೆಯನ್ನು ಅನುಭವಿಸಿದರು ಮತ್ತು 1945 ರಲ್ಲಿ ಅಂಚೆ ನೌಕರರ ವಿವಿಧ ಸಂಘಗಳು ತಮ್ಮನ್ನು ಒಗ್ಗೂಡಿಸಿಕೊಂಡು, ಫೆಡರೇಶನ್ ಆಫ್ ಪೋಸ್ಟಲ್ ಅಂಡ್ ಟೆಲಿಗ್ರಾಫ್ ಯೂನಿಯನ್ಸ್ ರಚಿಸಿದವು .

ಎಲ್ಲಾ ಕೇಂದ್ರ ಸರ್ಕಾರಿ ನೌಕರರ ವೇತನ ಪರಿಷ್ಕರಣೆಗಾಗಿ ಕೇಂದ್ರ ವೇತನ ಆಯೋಗವನ್ನು ಮೇ 10, 1946 ರಂದು ನ್ಯಾಯಮೂರ್ತಿ ಶ್ರೀನಿವಾಸ್ ವರದಾಚಾರ್ಯರ್ ಅವರ ಅಧ್ಯಕ್ಷತೆಯಲ್ಲಿ ನೇಮಿಸಲಾಯಿತು ಮತ್ತು ಇದು ಭಾರತದ ಕೇಂದ್ರ ಸರ್ಕಾರಿ ನೌಕರರಿಗೆ ಮೊದಲ ವೇತನ ಆಯೋಗವಾಗಿದೆ.

ಸರ್ಕಾರದ ನೌಕರ-ವಿರೋಧಿ ನೀತಿಯನ್ನು ಪ್ರತಿಭಟಿಸಿ, ಜುಲೈ 11, 1946 ರಿಂದ ಅಖಿಲ ಭಾರತ ಪೋಸ್ಟ್‌ಮ್ಯಾನ್ ಮತ್ತು ಲೋವರ್ ಗ್ರೇಡ್ ಸ್ಟಾಫ್ ಅಸೋಸಿಯೇಷನ್ ಕರೆಯ ಮೇರೆಗೆ ನೌಕರರ ಮುಷ್ಕರವು ಅಂತಿಮವಾಗಿ ಎಲ್ಲಾ ಅಂಚೆ ನೌಕರರ ಅಖಿಲ ಭಾರತ ಮುಷ್ಕರವಾಗಿ ಮಾರ್ಪಟ್ಟಿತು. ಈ ಮುಷ್ಕರದ ಅನುಭವಗಳು ಅಖಿಲ ಭಾರತ ಅಂಚೆ ಮತ್ತು ಆರ್.ಎಂ.ಎಸ್. ಯೂನಿಯನ್, ಅಖಿಲ ಭಾರತ ಟೆಲಿಗ್ರಾಫ್ ಅಸೋಸಿಯೇಷನ್ ಮತ್ತು ಇಂಡಿಯನ್ ಪೋಸ್ಟ್ ಮತ್ತು ಟೆಲಿಗ್ರಾಫ್ಸ್ ಯೂನಿಯನ್ ಗಳ ಸಂಯೋಜನೆಗೆ ಕಾರಣವಾಯಿತು. ಅಂತಿಮವಾಗಿ ಅಂಚೆ ನೌಕರರಲ್ಲಿ ಯೂನಿಯನ್ ರಚನೆಯ ಸಂಪೂರ್ಣ ಮಾದರಿಯು ಬದಲಾವಣೆಗೆ ಒಳಗಾಯಿತು ಮತ್ತು ವಿಭಾಗವಾರು, ಒಂಬತ್ತು ಅಖಿಲ ಭಾರತ ಸಂಘಗಳ ಹೊಸ ಗುಂಪನ್ನು ರಚಿಸಲಾಯಿತು ಮತ್ತು 1954 ರಲ್ಲಿ ಈ ಒಂಬತ್ತು ಸಂಘಗಳು ನ್ಯಾಷನಲ್ ಫೆಡರೇಶನ್ ಆಫ್ ಪೋಸ್ಟ್ ಮತ್ತು ಟೆಲಿಗ್ರಾಫ್ ಎಂಪ್ಲಾಯೀಸ್ ಗೆ ಸೇರಿಕೊಂಡವು. ಈ ಫೆಡರೇಶನ್ ಮತ್ತು ಅದಕ್ಕೆ ಸಂಯೋಜಿತ ಒಂಬತ್ತು ಸಂಘಗಳಿಗೆ ಸರ್ಕಾರ ಮಾನ್ಯತೆ ನೀಡಿತು.

ಏತನ್ಮಧ್ಯೆ, ಕೇಂದ್ರ ಸಚಿವಾಲಯ, ಲೆಕ್ಕಪರಿಶೋಧನೆ, ಆದಾಯ ತೆರಿಗೆ ಮತ್ತು ಭಾರತ ಸರ್ಕಾರದ ಇತರ ಇಲಾಖೆಗಳಲ್ಲಿ ಕೆಲಸ ಮಾಡುವ ನೌಕರರನ್ನು ಒಳಗೊಂಡ ಅನೇಕ ಇತರ ಸಂಘಗಳು ರಚನೆಯಾಗಿದ್ದವು. ಇವುಗಳಲ್ಲಿ ಹಲವಾರು ಸಂಘಗಳು ಸಾಕಷ್ಟು ಹಳೆಯವು ಮತ್ತು 1913 ಮತ್ತು 1920 ರ ನಡುವೆ ರೂಪುಗೊಂಡಿದ್ದವು. ಸ್ವಾತಂತ್ರ್ಯೋತ್ತರ ಅವಧಿಯಲ್ಲಿ ಈ ವಿಭಾಗೀಯ ಸಂಘಗಳು ಸ್ವಲ್ಪ ಸಡಿಲವಾದ, ಕಾನ್ಫೆಡರೇಶನ್ ಆಫ್ ಗವರ್ನಮೆಂಟ್ ಎಂಪ್ಲಾಯಿಸ್ ಅಂಡ್ ವರ್ಕರ್ಸ್ ಯೂನಿಯನ್ಸ್ ಅಂಡ್ ಅಸೋಸಿಯೇಶನ್ಸ್ ಎನ್ನುವ ಒಕ್ಕೂಟವನ್ನು

ಪುಟ 14 ನೋಡಿ

ಆಕ್ಸಿಜನ್... ಆಕ್ಸಿಜನ್..... ಪರದಾಟ ಕೇರಳದಲ್ಲಿ ಮಾತ್ರ ಇಲ್ಲ

ಕೊವಿಡ್–19ರ ಎರಡನೇ ಅಲೆ 'ಬಿರುಗಾಳಿಯಾಗಿ ಅಪ್ಪಳಿಸಿರುವಾಗ' ಕೇಳಬರುತ್ತಿರುವ ಒಂದು ಪ್ರಧಾನ ಕೂಗು ಎಂದರೆ ಆಕ್ಸಿಜನ್ ಕೊರತೆ, ಅಂದರೆ ವೈದ್ಯಕೀಯ ದ್ರವ ಆಮ್ಲಜನಕದ ತೀವ್ರ ಅಭಾವ.

ದಿಲ್ಲಿ ಆಸ್ಪತ್ರೆಯೊಂದರಲ್ಲಿ ಆಕ್ಸಿಜನ್ ಪೂರೈಕೆ ಇಳಿದಿದ್ದರಿಂದ 25 ಕೊವಿಡ್ ರೋಗಿಗಳು ಮೃತಪಟ್ಟಿರುವ ಹೃದಯವಿದ್ರಾವಕ ಸುದ್ದಿ ಬಂದಿದೆ. ಪರಿಸ್ಥಿತಿ ಎಷ್ಟು ಹದಗೆಟ್ಟಿದೆಯೆಂದರೆ ಸುಪ್ರಿಂ ಕೋರ್ಟ್ ಕೂಡ ಕೇಂದ್ರ ಸರಕಾರ ಈ ಬಗ್ಗೆ ಒಂದು ರಾಷ್ಟ್ರೀಯ ಯೋಜನೆ ರೂಪಿಸಬೇಕೆಂದು ನಿರೀಕ್ಷಿಸುತ್ತೇವೆ ಎಂದು ಹೇಳಬೇಕಾಗಿ ಬಂದಿದೆ.

ಈ ನಡುವೆ ಬಂದಿರುವ ಮತ್ತೊಂದು ಸುದ್ದಿಯ(ನ್ಯೂಸ್‌ಕ್ಲಿಕ್, ಎಪ್ರಿಲ್23) ಪ್ರಕಾರ ಕೇಂದ್ರ ಸರಕಾರವೇ ರಚಿಸಿದ ಕೊವಿಡ್–19 ಕುರಿತ ಒಂದು ಪರಿಣಿತರ ಗುಂಪು ಎಪ್ರಿಲ್2020ರಲ್ಲೇ ಆಕ್ಸಿಜನ್ ಪೂರೈಕೆಯ ಪ್ರಶ್ನೆಯತ್ತ ಗಮನ ಸೆಳೆದಿತ್ತು, ಅಷ್ಟೇ ಅಲ್ಲ, ಆರೋಗ್ಯ ಕುರಿತ ಸಂಸದೀಯ ಸ್ಥಾಯೀ ಸಮಿತಿ ಕೂಡ ನವಂಬರ್ 2020 ರಲ್ಲಿ ಈ ಪ್ರಶ್ನೆಯತ್ತ ಗಮನ ಸೆಳೆದಿತ್ತು.

ಕೊವಿಡ್ ಸೋಂಕು ಹೆಚ್ಚಾಗಿ ಶ್ವಾಸಕೋಶಕ್ಕೆ ತಗಲುತ್ತದೆ. ಇದರಿಂದ ಸೋಂಕಿತರಲ್ಲಿ ಉಸಿರಾಟದ ಸಮಸ್ಯೆಗಳು ಉಂಟಾಗುತ್ತದೆ. ಇಂತಹ ಸಮಯದಲ್ಲಿ ಆಮ್ಲಜನಕದ ಕೃತಕ ಪೂರೈಕೆ ಈ ಸಮಸ್ಯೆಗಳನ್ನು ಎದುರಿಸಲು ನೆರವಾಗುತ್ತವೆ. ಇಲ್ಲಿಯೇ ಕೃತಕ ಆಕ್ಸಿಜನ್ ಪೂರೈಕೆ ಬಹಳ ಮಹತ್ವ ಪಡೆದಿರುವುದು.

ದಿಲ್ಲಿ, ಉತ್ತರಪ್ರದೇಶ, ಮಧ್ಯಪ್ರದೇಶ ಮತ್ತು ಕರ್ನಾಟಕವೂ ಸೇರಿದಂತೆ ಈ ಎರಡನೇ ಅಲೆಯಲ್ಲಿ ಬಹಳಷ್ಟು ಸಾವುಗಳು ಆಕ್ಸಿಜನ್ ಕೊರತೆಯಿಂದಾಗಿಯೆ ಸಂಭವಿಸಿರುವಂತೆ ಕಾಣುತ್ತದೆ.

ಇವುಗಳ ನಡುವೆ, ಕೇರಳ ರಾಜ್ಯದಲ್ಲಿ ಮಾತ್ರವೇ ಆಕ್ಸಿಜನ್ ನ ಮಿಗುತೆ ಪೂರೈಕೆ ಇದೆ ಎಂಬ ಸುದ್ದಿ ಮಾಧ್ಯಮಗಳಲ್ಲಿ ಹಲವರ ಗಮನ ಸೆಳೆದಿದೆ. ಆ ರಾಜ್ಯದ ಸ್ವಂತ ಅಗತ್ಯಗಳನ್ನು ಪೂರೈಸುವುದಲ್ಲದೇ ಕಳೆದ ವಾರ ಗೋವ, ಕರ್ನಾಟಕ ಮತ್ತು ತಮಿಳುನಾಢಿಗೆ ಅಲ್ಲಿಂದ ವೈದ್ಯಕೀಯ ಆಕ್ಸಿಜನ್ ಟ್ಯಾಂಕರುಗಳು ಹೋಗಿವೆ ಎಂದು ವರದಿಯಾಗಿದೆ.

ಲಭ್ಯ ಮಾಹಿತಿಗಳ ಪ್ರಕಾರ ಎಪ್ರಿಲ್ 15 ರವರೆಗೆ ಕೇರಳದಲ್ಲಿ ಪ್ರತಿದಿನ ಒಟ್ಟು ಆಕ್ಸಿಜನ್ ಆವಶ್ಯಕತೆ 83 ಟನ್, ಇವುಗಳಲ್ಲಿ 35 ಟನ್ ಕೊವಿಡ್ ರೋಗಿಗಳಿಗೆ ಮತ್ತು ಉಳಿದ 48 ಟನ್ ಇತರ ರೋಗಿಗಳಿಗೆ. ಎಪ್ರಿಲ್ 30 ರ ವರೆಗೆ ಕೇರಳಕ್ಕೆ ಪ್ರತಿದಿನ 100 ಟನ್ ಪೂರೈಕೆ ಬೇಕಾಗಬಹುದು ಎಂದು ಸರಕಾರ ಅಂದಾಜು ಮಾಡಿದೆ. ಇದಕ್ಕೆ ಪ್ರತಿಯಾಗಿ ಉತ್ಪಾದನೆ 246.1 ಟನ್‌ಗಳಷ್ಟು ಇದೆ. ಅಲ್ಲದೆ ಹಲವು ರಾಜ್ಯಗಳಲ್ಲಿ ಇರುವಂತೆ ದಾಸ್ತಾನು ಮತ್ತು ಬಾಟ್ಲಿಂಗ್ (ದ್ರವ ಆಮ್ಲಜನಕವನ್ನು ಸಿಲಿಂಡರ್‌ಗಳಿಗೆ ತುಂಬುವುದು) ಕೊರತೆಯೂ ಇಲ್ಲ. ಪ್ರತಿದಿನ 155.5 ಟನ್‌ಗಳಷ್ಟು ದಾಸ್ತಾನು ಮಾಢುವ, ಮತ್ತು 90.6 ಟನ್‌ಗಳಷ್ಣು ತುಂಬುವ ಸಾಮರ್ಥ್ಯವೂ ಇದೆ.

ಇದಕ್ಕೆ ಕಾರಣ ಇಲ್ಲಿ ಪ್ರತಿಯೊಬ್ಬ ರೋಗಿಯ ಆಕ್ಸಿಜನ್ ಆವಶ್ಯಕತೆಯನ್ನು ಲೆಕ್ಕ ಹಾಕಿ ಹೆಚ್ಚೆಂದರೆ ಎಷ್ಟು ಪೂರೈಕೆಯ ಅಗತ್ಯವಿದೆ ಎಂಬುದನ್ನು ಕರಾರುವಾಕ್ಕಾಗಿ ಗುರುತಿಸಲು ಸಾಧ್ಯವಾಗಿದೆ. ಬೇರೆ ರಾಜ್ಯಗಳಲ್ಲಿ ಈ ಪ್ರಕ್ರಿಯೆಯನ್ನು ಕರಾರುವಾಕ್ಕಾಗಿ ನಡೆಸುತ್ತಿರುವಂತೆ ಕಾಣುತ್ತಿಲ್ಲ ಎಂದು ಆಕ್ಸಿಜನ್ ಪೂರೈಕೆಯ ಮೇಲೆ ನಿಗಾ ಇಡುವ 'ಪೆಟ್ರೋಲಿಯಂ ಮತ್ತು ಸ್ಫೋಟಕಗಳ ಸುರಕ್ಷತಾ ಸಂಘಟನೆ'(ಪಿ.ಇ.ಎಸ್.ಒ.) ಯ ಕೇರಳ ಮತ್ತು ಲಕ್ಷದ್ವೀಪ ಘಟಕದ ಉಪ ಮುಖ್ಯ ನಿಯಂತ್ರಕರಾದ ಆರ್.. ವೇಣುಗೋಪಾಲ್ ಹೇಳಿದ್ದಾರೆ ಎಂದು ಟೈಮ್ಸ್ ಆಫ್ ಇಂಡಿಯದ ಕೊಚಿ ಆವೃತ್ತಿ ವರದಿ ಮಾಡಿದೆ(ಟಿ,ರಾಮವರ್ಮನ್, ಟಿಎನ್‌ಎನ್, ಎಫ್ರಿಲ್ 18).

ಕೇರಳ ರಾಜ್ಯ ಆರೋಗ್ಯ ಇಲಾಖೆ, ಪಿ.ಇ.ಎಸ್.ಒ. ಸಹಕಾರದೊಂದಿಗೆ ಮಾರ್ಚ್ 1, 2020ರಿಂದ ಸತತವಾಗಿ ರಾಜ್ಯದಲ್ಲಿ ವೈದ್ಯಕೀಯ ಆಕ್ಸಿಜನ್‌ನ ಪೂರೈಕೆಯ ಮೇಲೆ ನಿಗಾ ಇಡುತ್ತಿದೆ ಎಂದು ದಿ ನ್ಯೂಸ್‌ಮಿನಿಟ್(ಟಿಎನ್‌ಎಂ, ಎಪ್ರಿಲ್ 21) ಕೂಡ ವರದಿ ಮಾಡಿದೆ. ಕೊವಿಡ್ ಮೊದಲನೇ ಅಲೆ ಇಳಿಮುಖವಾದಾಗಲೂ ಇದನ್ನು ಸಡಿಲಗೊಳಿಸಲಿಲ್ಲ. ದ್ರವ ಆಕ್ಸಿಜನ್ ಉತ್ಪಾದನೆಯಲ್ಲಿ ಒಂದು ಗಮನಾರ್ಹ ಭಾಗವನ್ನು ಕೈಗಾರಿಕಾ ಬಳಕೆಯಿಂದ ವೈದ್ಯಕೀಯ ಬಳಕೆಯತ್ತ ತಿರುಗಿಸಿ ಆಸ್ಪತ್ರೆಗಳಿಗೆ ಪೂರೈಸಿ ವೈದ್ಯಕೀಯ ಆಕ್ಸಿಜನ್ ನ ಕೊರತೆ ಉಂಟಾಗದಂತೆ ಎಚ್ಚರಿಕೆ ವಹಿಸಲಾಗಿದೆ ಎಂಧು ಈ ವರದಿ ಹೇಳುತ್ತದೆ.

ರಾಜ್ಯದ ಕಾಂಜಿಕೊಡ್ ನಲ್ಲಿರುವ ಐನೊಕ್ಸ್ ಏರ್ ಪ್ರಾಡಕ್ಟ್ಸ್ ಪ್ರೈವೇಟ್ ಲಿ. ಈಗ ಕೇರಳದಲ್ಲಿ ವೈದ್ಯಕೀಯ ಆಕ್ಸಿಜನ್ ನ ಅತಿ ದೊಡ್ಡ ಪೂರೈಕೆದಾರ ಕಂಪನಿ. ಮಾರ್ಚ್ 2020ರ ಮೊದಲು ಇಲ್ಲಿಯ ಉತ್ಪಾದನೆಯಲ್ಲಿ 40% ಉದ್ದಿಮೆಗಳಿಗೆ, 60% ವೈದ್ಯಕೀಯ ಬಳಕೆಗೆ ಹೋಗುತ್ತಿದ್ದವು. ಈಗ ಸಂಪೂರ್ಣವಾಗಿ ಆಸ್ಪತ್ರೆಗಳಿಗೇ ಪೂರೈಸುತ್ತಿದೆ. ರಾಜ್ಯದಲ್ಲಿ ಇನ್ನೂ ಕೆಲವು ಆಕ್ಸಿಜನ್ ತಯಾರಕಾ ಕಂಪನಿಗಳಿದ್ದು, ಅವೆಲ್ಲವೂ ಈಗ ತಮ್ಮ ಉತ್ಪಾದನೆಯನ್ನು ಆಸ್ಪತ್ರೆಗಳಿಗೇ ಪೂರೈಸುತ್ತಿವೆ.

ಮೊದಲ ಕೊವಿಡ್ ಅಲೆಯ ನಿರ್ವಹಣೆಯ ಸಮಯದಲ್ಲಿ ರಾಜ್ಯ ಸರಕಾರ ಮಾಡಿದ ಇನ್ನೊಂದು ಪ್ರಮುಖ ಕೆಲಸವೆಂದರೆ, ಸಾರ್ವಜನಿಕ ವಲಯದ ಒಂದು ಉದ್ದಿಮೆಯಾದ ಕೇರಳ ಮೆಟಲ್ಸ್ ಅಂಡ್ ಮಿನರಲ್ಸ್(ಕೆಎಂಎಂಎಲ್) ನಲ್ಲಿನ ಅನಿಲ ತ್ಯಾಜ್ಯವನ್ನು ವೈದ್ಯಕೀಯ ಉಪಯೋಗಕ್ಕೆ ಬಳಸಬಹುದಾದ ದ್ರವ ಆಕ್ಸಿಜನ್ ಉತ್ಪಾದನೆಗೆ ತಿರುಗಿಸುವ ಒಂದು ಆಮ್ಲಜನಕ ಸ್ಥಾವರವನ್ನು 58 ಕೋಟಿ ರೂ. ವೆಚ್ಚದಲ್ಲಿ ನಿರ್ಮಿಸಿದ್ದು. ಅಕ್ಟೋಬರ್ 2020ರಿಂದ ಕಾರ್ಯಾರಂಭ ಮಾಡಿರುವ ಇದು ಈಗ ಪ್ರತಿದಿನ 70 ಟನ್ ವೈದ್ಯಕೀಯ ಆಕ್ಸಿಜನ್ ಅನ್ನು ಪೂರೈಸುತ್ತಿದೆ.

ತದ್ವಿರುದ್ಧವಾಗಿ, ಉತ್ತರಪ್ರದೇಶದಲ್ಲಿ ಸರಕಾರ ಕೆಲವು ದಿನಗಳ ಹಿಂದೆಯಷ್ಟೇ ಒಂದು ಆಕ್ಸಿಜನ್ ಸ್ಥಾವರವನ್ನು ಆರಂಭಿಸಿದೆ. ಇದನ್ನು ಮೊದಲೇ ಮಾಡಿದ್ದರೆ ..ಎಂದು 'ಭಾರತ್ ಸಮಾಚಾರ್' ಟಿವಿ ವಾಹಿನಿಯ ವರದಿಗಾರ ಅಭಿಷೇಕ್ ಪಾಂಡೆ ಹಲುಬುತ್ತಾರೆ. ದೇಶದಲ್ಲಿ ಲಸಿಕೆ ಉತ್ಪಾದನೆ ಆರಂಭವಾಗುತ್ತಿದ್ದಂತೆಯೇ ಆರೋಗ್ಯ ಮೂಲರಚನೆಯನ್ನು ಬಲಗೊಳಿಸುವ ಕೆಲಸ ಈ ರಾಜ್ಯ ಸರಕಾರದ ಅಜೆಂಡಾದಿಂದಲೇ ಜಾರಿ ಹೋಯಿತು ಎನ್ನುತ್ತಾರೆ ಲಕ್ನೌನಿಂದ ಮಹಾಸೋಂಕಿನ ಬಗ್ಗೆ ಕಳೆದ ಒಂದು ವರ್ಷದಿಂದ ಸತತವಾಗಿ ವರದಿ ಮಾಡುತ್ತಿರುವ ಅಭಿಷೇಕ್. ಅಲಹಾಬಾದ್ ಹೈಕೋರ್ಟ್ ನಗರದಲ್ಲಿ ಲಾಕ್ ಡೌನ್ ಹಾಕಬೇಕು ಎಂದು ನಿರ್ದೇಶನ ಕೊಡುವಂತಹ ಪರಿಸ್ಥಿತಿ ಇಲ್ಲಿ ಉಂಟಾಗಿದ್ದು ಅದಕ್ಕೆ 'ವ್ಯವಸ್ಥೆಯ ವಿಫಲತೆ' ಯೇ ಕಾರಣ ಎಂದು ಅವರಿಗೆ ಅನಿಸಿದೆ(ನ್ಯೂಸ್‌ಲಾಂಡ್ರಿ, ಎಪ್ರಿಲ್ 21).

ಬಹುಶಃ ಮೊದಲ ಅಲೆಯ ಅನುಭವಗಳನ್ನು ಮತ್ತು ಪರಿಣಿತರ ಮತ್ತು ಸಂಸದೀಯ ಸಮಿತಿಯ ಟಿಪ್ಪಣಿಗಳನ್ನು ಕೇಂದ್ರ ಸರಕಾರ ಗಂಬೀರವಾಗಿ ತೆಗೆದುಕೊಂಡಿದ್ದರೆ ಎಷ್ಟೊಂದು ಜೀವಗಳನ್ನು ಉಳಿಸಬಹುದಿತ್ತು ಎಂದು ಅನಿಸದಿರಲು ಸಾಧ್ಯವಿಲ್ಲ.

ಇಂತಹ ಸಂದರ್ಭದಲ್ಲಿ ಕೇರಳದಲ್ಲಿ ಮಾತ್ರ ಆಕ್ಸಿಜನ್ ನ ಹೆಚ್ಚುವರಿ ಪೂರೈಕೆ ಮಾತ್ರವಲ್ಲ ಸಾಕಷ್ಟು ವೆಂಟಿಲೇಟರಿಗಳು ಮತ್ತು ಐಸಿಯು ಹಾಸಿಗೆಗಳ ಲಭ್ಯತೆಯೂ ಗಮನವನ್ನು ಸೆಳೆದಿದ್ದರೆ ಆಶ್ಚರ್ಯವೇನಿಲ್ಲ. ಮೊದಲ ಅಲೆಯನ್ನು ನಿರ್ವಹಿಸುವಾಗಲೇ ಇವುಗಳತ್ತ ರಾಜ್ಯ ಸರಕಾರ ವಿಶೇಷ ಗಮನ ಹರಿಸಿತು. ಈಗ ಅಲ್ಲಿ 9735 ಐಸಿಯು ಬೆಡ್‌ಗಳಿವೆ. ಆದರೆ ಅಗತ್ಯವಿರುವ ರೋಗಿಗಳ ಸಂಖ್ಯೆ 999 ಮಾತ್ರ. ಅದೇರೀತಿ 3776 ವೆಮಟಿಲೇಟರುಗಳಿವೆ. ಆದರೆ ಇಗ ಅದರ ಅಗತ್ಯವಿರುವ ರೋಗಿಗಳ ಸಮಕ್ಯೆ 277 ಮಾತ್ರ ಎನ್ನಲಾಗಿದೆ.

ಅಲ್ಲದೆ ವೈದ್ಯಕೀಯ ಆಕ್ಸಿಜನ್ ಅವಲಂಬನೆಯ ಪ್ರಮಾಣವೂ ಕೇರಳದ ಸೋಂಕಿತರಲ್ಲಿ ಬೇರೆಡೆಗಳಿಗೆ ಹೋಲಿಸಿದರೆ ಕಡಿಮೆ ಎಂದೂ ಪಿ.ಇ.ಎಸ್.ಒ. ಉಪ ಮುಖ್ಯ ನಿಯಂತ್ರಕರು ಹೇಳಿರುವುದು ಕೂಡ ಗಮನಾರ್ಹ.

ಇದು ಕೂಡ ರಾಜ್ಯದಲ್ಲಿ ಸಾರ್ವತ್ರಿಕ ಆರೋಗ್ಯ ಸೇವೆಗಳ ವ್ಯಾಪಕತೆ ಮತ್ತು ದಕ್ಷತೆಯ ಪರಿಣಾಮ ಎಂದು ಪರಿಣಿತರು ಹೇಳುತ್ತಾರೆ.



ನಿನಗೇನು ಬೇಕೋ ತಗೋ... (ಮಂದಿರ, ಮಸೀದಿ, ಆಕ್ಸಿಜನ್)
ವ್ಯಂಗ್ಯಚಿತ್ರ: ಸಂದೀಪ ಅಧ್ವರ್ಯು, ಟೈಂಸ್ ಆಫ್ ಇಂಡಿಯ

ಎರಡನೇ ಅಲೆಯ ಹೊಸ ನೀತಿ: ಲಸಿಕೆ ತಯಾರಕರಿಗೆ ಉಡುಗೊರೆ, ಜನಗಳಿಗೆ, ರಾಜ್ಯ ಸರಕಾರಗಳಿಗೆ ಅದರ ಹೊರೆ!

ಕೇಂದ್ರ ಸರಕಾರ ಮೇ 1 ರಿಂದ 18 ವರ್ಷ ಮೇಲ್ಪಟ್ಟ ಎಲ್ಲರಿಗೂ ಕೊವಿಡ್–19 ಲಸಿಕೆ ಹಾಕುವ ಕಾರ್ಯಕ್ರಮವನ್ನು ಪ್ರಕಟಿಸಿದೆ. ಎಪ್ರಿಲ್ 19 ರಂದು 'ರಾಷ್ಟ್ರೀಯ ಕೊವಿಡ್–19 ಲಸಿಕೀಕರಣ ಕಾರ್ಯಕ್ರಮ'ದ "ಉದಾರೀಕೃತ ಮತ್ತು ವೇಗ ಹೆಚ್ಚಿಸಿದ ಮೂರನೇ ಘಟ್ಟದ ಕಾರ್ಯವ್ಯೂಹ" ಎಂಬುದನ್ನು ಪ್ರಕಟಿಸಿದೆ.

ವಾಸ್ತವವಾಗಿ ಇದು ಖಾಸಗಿ ಲಸಿಕೆ ತಯಾರಕರಿಗೆ ಉಡುಗೊರೆ, ಇದರ ಹೊರೆಯನ್ನು ಸದ್ದಿಲ್ಲದೆ ನಾಗರಿಕರ ಮೇಲೆ ದಾಟಿಸಲಾಗುತ್ತದೆ ಎಂದು ಆರ್ಥಿಕ ತಜ್ಞ ಮತ್ತು ಕೇರಳ ಯೋಜನಾ ಆಯೋಗದ ಸದಸ್ಯ ಪ್ರೊ. ರಾಮ ಕುಮಾರ್ ಟಿಪ್ಪಣಿ ಮಾಡಿದ್ದಾರೆ.

ಇದರ ಮುಖ್ಯ ಅಂಶವೆಂದರೆ, ಲಸಿಕೆ ತಯಾರಕರು 50%ದಷ್ಟು ಡೋಸ್‌ಗಳನ್ನು ಭಾರತ ಸರಕಾರಕ್ಕೆ ಪೂರೈಸಬೇಕು ಮತ್ತು ಉಳಿದ 50%ವನ್ನು ರಾಜ್ಯ ಸರಕಾರಗಳಿಗೆ ಮತ್ತು ಬಹಿರಂಗ ಮಾರುಕಟ್ಟೆಯಲ್ಲಿ ಮಾರಬಹುದು. ಮತ್ತು ರಾಜ್ಯಗಳಿಗೆ ಮತ್ತು ಬಹಿರಂಗ ಮಾರುಕಟ್ಟೆಗೆ ಪೂರೈಸುವ ಡೋಸ್‌ಗಳ ಬೆಲೆಯನ್ನು "ಮುಂಗಡವಾಗಿ ಮೇ 1 ರ ಮೊದಲು ಪಾರದರ್ಶಕವಾಗಿ" ಘೋಷಿಸಬೇಕು. ಹೀಗೆ ತಾವೇ "ಪಾರದರ್ಶಕವಾಗಿ" ನಿರ್ಧರಿಸಿದ ಬೆಲೆಗಳಲ್ಲಿ ಖಾಸಗಿ ಲಸಿಕೆ ಕೊಡುವವರ ಮೂಲಕವೇ 18ವರ್ಷ ಮೇಲ್ಪಟ್ಟ ಎಲ್ಲರೂ ಲಸಿಕೆ ಹಾಕಿಸಿಕೊಳ್ಳಬಹುದು!

ಅಂದರೆ ಈ 'ಉದಾರ' ಲಸಿಕೀಕರಣ ಎಂಬುದು ಲಸಿಕೆಗಳ ಬೆಲೆಗಳ 'ಉದಾರೀಕರಣ'ದ ಮೂಲಕ ಬರುತ್ತಿದೆ. ಬೆಲೆಗಳ ಉದಾರೀಕರಣ ಎಂದರೆ ಏರಿಕೆಯಂದೇ ಅರ್ಥ ತಾನೇ? ವಿಶೇಷವೆಂದರೆ ರಾಜ್ಯ ಸರಕಾರಗಳು ಈ ಬೆಲೆಗಳಲ್ಲೇ ಲಸಿಕೆಗಳನ್ನು ಪಡೆಯಬೇಕು.

ಅಂದರೆ, ಮೂಲಭೂತವಾಗಿ ಭಾರತ ಸರಕಾರ ರಾಜ್ಯಗಳಿಗೆ ಲಸಿಕೆಗಳನ್ನು ಖಾತ್ರಿಪಡಿಸುವ ತನ್ನ ಹೊಣೆಗಾರಿಕೆಯಿಂದ ಹಿಂದಕ್ಕೆ ಸರಿದಿದೆ ಎಂಬುದೇ ಇದರ ಅರ್ಥವಾಗುತ್ತದೆ ಎಂದು ಪ್ರೊ. ರಾಮಕುಮಾರ್ ಟಿಪ್ಪಣಿ ಮಾಡಿದ್ದಾರೆ. ಕಳೆದ ನಾಲ್ಕು ತಿಂಗಳಲ್ಲಿ ಲಸಿಕೆ ಕೊರತೆಯನ್ನು ನಿರ್ಮಿಸಿದ ಕೇಂದ್ರ ಸರಕಾರ ಈಗ ರಾಜ್ಯ ಸರಕಾರಗಳಿಗೆ ಲಸಿಕೆ ತಯಾರಕರಿಂದ ನೇರವಾಗಿಯೇ ಖರೀದಿಸಿ ಎಂದು ಹೇಳುತ್ತಿದೆ. ಮೇ 1ರಿಂದ ಲಸಿಕೆಗಳ ಕೊರತೆಯಾದರೆ, ಅದಕ್ಕೆ ರಾಜ್ಯ ಸರಕಾರಗಳೇ ಹೊಣೆಯಾಗುತ್ತವೆ. ಕೇಂದ್ರ ಸರಕಾರದ ಹೊಣೆ ಕೇವಲ ಮೊದಲ 30 ಕೋಟಿ ಆದ್ಯತೆಯ ವಿಭಾಗಗಳಿಗೆ ಉಚಿತವಾಗಿ ಲಸಿಕೆ ಹಾಕಿಸುವಷ್ಟಕ್ಕೇ ಸೀಮಿವಾಗುತ್ತದೆ. ಉಳಿದವರೆಲ್ಲರೂ ಈಗ ತೆರುವುದಕ್ಕಿಂತ ಹೆಚ್ಚಿನ ಬೆಲೆ ತೆತ್ತು ಲಸಿಕೆ ಹಾಕಿಸಿಕೊಳ್ಳಬೇಕಾಗುತ್ತದೆ. ಇದು ಈ 'ಉದಾರೀಕೃತ' ಮೂರನೇ ಘಟ್ಟದ ಕಾರ್ಯವ್ಯೂಹದ ಸಾರಾಂಶ.


ಇದು ಅತ್ಯಂತ ಪ್ರತಿಗಾಮಿ ಧೋರಣೆ, ಇದನ್ನು ರಾಜ್ಯ ಸರಕಾರಗಳು ವಿರೋಧಿಸಬೇಕಾಗಿದೆ ಎನ್ನುತ್ತಾರೆ ಪ್ರೊ. ರಾಮ ಕುಮಾರ್. ಇದು ರಾಜ್ಯಗಳ ಹಣಕಾಸಿನ ಮೇಲೆ ಗಂಭೀರ ಹೊರೆಯನ್ನು ಹಾಕುತ್ತದೆ. ಇದರಿಂದ ಲಸಿಕೆಗಳ ಬೆಲೆಗಳು ಏರುತ್ತವೆ. ಇದು ಭಾರತ ಸರಕಾರಕ್ಕೆ ಲಸಿಕೀಕರಣ ಯೋಜನೆಯಲ್ಲಿ ತನ್ನ ವಿಫಲತೆಗಳನ್ನು ಲಸಿಕೆ ತಯಾರಕರು ಮತ್ತು ರಾಜ್ಯ ಸರಕಾರಗಳ ನಡುವಿನ ಚೌಕಾಶಿಯ ಹಿಂದೆ ಮರೆಮಾಚಲು ಬಳಸಿಕೊಳ್ಳಲು ಅವಕಾಶ ಕೊಡುತ್ತದೆ. ವಾಸ್ತವವಾಗಿ ಇದು ಖಾಸಗಿ ಲಸಿಕೆ ತಯಾರಕರಿಗೆ ಉಡುಗೊರೆ, ಇದರ ಹೊರೆಯನ್ನು ಸದ್ದಿಲ್ಲದೆ ನಾಗರಿಕರ ಮೇಲೆ ದಾಟಿಸಲಾಗುತ್ತದೆ ಎಂದು ಪ್ರೊ. ರಾಮಕುಮಾರ್ ಹೇಳುತ್ತಾರೆ.

ಸರಕಾರ ಈ 'ಉದಾರ' ಧೋರಣೆಯನ್ನು ಪ್ರಕಟಿಸಿದ ಬೆನ್ನ ಹಿಂದೆಯೇ, ಅಸ್ಟ್ರಾ ಜೆನೆಕಾದ ಲಸಿಕೆ ಕೊವಿಶೀಲ್ಡ್‌ನ ತಯಾರಕ ಕಂಪನಿಯಾದ ಎಸ್‌ಐಐ ಇದುವರೆಗೆ ಕೇಂದ್ರ ಸರಕಾರಕ್ಕೆ ಪ್ರತಿ ಡೋಸಿಗೆ 150ರೂ. ಬೆಲೆ ಇಟ್ಟಿದ್ದನ್ನು, ಮೇ 1ರಂದು ಕೇಂದ್ರ ಸರಕಾರ ಮತ್ತು ರಾಜ್ಯ ಸರಕಾರಕ್ಕೆ 400ರೂ. ಮತ್ತು ಇತರರಿಗೆ 600ರೂ. ಬೆಲೆ ಇಡುವುದಾಗಿ ಪ್ರಕಟಿಸಿದೆ. ಖಾಸಗಿ ಮಾರಾಟದ ಬೆಲೆಯನ್ನು ಇದುವರೆಗೆ ರೂ.250ಕ್ಕೆ ಸೀಮಿತಗೊಳಿಸಲಾಗಿತ್ತು ಎಂಬುದನ್ನೂ ಗಮನಿಸಬೇಕು.



ಚಪ್ಪಾಳೆ, ತಟ್ಟೆ
ಐಡಿಯಾಗಳ ಸ್ಟಾಕ್
ಖಾಲಿಯಾಗಿದೆ

ವ್ಯಂಗ್ಯಚಿತ್ರ: ಸಜಿತ್ ಕುಮಾರ್, ಡೆಕ್ಕನ್ ಹೆರಾಲ್ಡ್



ಹೊಸ ಲಸಿಕೆ ಧೋರಣೆ ಪ್ರಕಟಣೆ ಎಸ್‌ಐಐ ರೇಟ್ ಕಾರ್ಡ್ ಬಿಡುಗಡೆ

ಸಾರ್ವಜನಿಕ ಆರೋಗ್ಯ ಮಾರುಕಟ್ಟೆ ರಿಸ್ಕ್‌ಗಳಿಗೆ ಒಳಪಟ್ಟಿದೆ. ಚುಚ್ಚಿಸಿಕೊಳ್ಳುವ ಮೊದಲು ಧೋರಣೆಯ ದಸ್ತಾವೇಜನ್ನು ಓದಿಕೊಳ್ಳಿ

ವ್ಯಂಗ್ಯಚಿತ್ರ: ಆರ್. ಪ್ರಸಾದ್, ಇಕನಾಮಿಕ್ ಟೈಮ್ಸ್

ಬಿಡೆನ್ ಪ್ಯಾಕೇಜ್ ಉದ್ದೇಶ ಒಳ್ಳೆಯದೇ, ಆದರೆ...



ಜೋ ಬಿಡೆನ್ ಅವರು ಕಲ್ಪಿಸಿಕೊಂಡ ಒಂದು ಅಸಾಧಾರಣ ಮಹತ್ವಾಕಾಂಕ್ಷೆಯ ವಿತ್ತೀಯ ಉತ್ತೇಜಕವು ಭಾರತದಂತಹ ಅರ್ಥವ್ಯವಸ್ಥೆಗಳಿಗೆ ರಫ್ತು ಅವಕಾಶಗಳನ್ನು ಹೆಚ್ಚಿಸುತ್ತದೆ, ನಿಜ. ಆದರೆ, ಅದರ ಜೊತೆಯಲ್ಲಿ ಒಟ್ಟಾರೆ ಚಟುವಟಿಕೆಗಳು ಮತ್ತು ಆರ್ಥಿಕ ಅಭಿವೃದ್ಧಿ ಸಂಕುಚಿತಗೊಳ್ಳುತ್ತವೆ. ವಾಸ್ತವವಾಗಿ ಇದು ಜಾಗತಿಕ ವಿಭಜನೆಯನ್ನು ಹೆಚ್ಚಿಸುತ್ತದೆ. ಮುಂದುವರಿದ ದೇಶಗಳು ಬೆಳವಣಿಗೆಯೊಂದಿಗೆ ಮುನ್ನುಗ್ಗುವಾಗ ಮೂರನೇ ಜಗತ್ತಿನ ದೇಶಗಳು ತೀವ್ರ ನಿರುದ್ಯೋಗದ ಮತ್ತು ವಿತ್ತೀಯ ಮಿತವ್ಯಯದ ಸಮಸ್ಯೆಗಳಲ್ಲಿ ಮುಳುಗುತ್ತವೆ. ಬಿಡೆನ್ ಅವರ ಪ್ಯಾಕೇಜ್ ಉದ್ದೇಶ ಒಳ್ಳೆಯದು ಹೌದು ಮತ್ತು ಅದನ್ನು ಮುಂದುವರಿದ ದೇಶಗಳ ಎಡಪಂಥೀಯರು ಬೆಂಬಲಿಸುತ್ತಾರೆ, ನಿಜ. ಆದರೆ, ಈ ಎಡಪಂಥೀಯರು ಮೂರನೇ ಜಗತ್ತಿನ ದೇಶಗಳ ವಿಪತ್ತುಗಳ ಬಗ್ಗೆಯೂ ಸಹ ಸಂವೇದನೆಯನ್ನು ಹೊಂದಿರಬೇಕಾಗುತ್ತದೆ.

ಪ್ರೊ. ಪ್ರಭಾತ್ ಪಟ್ನಾಯಕ್ ಅನು: ಕೆ.ಎಂ. ನಾಗರಾಜ್

ಅಮೇರಿಕಾದ ಮತ್ತು ವಿಶ್ವದ ಅರ್ಥವ್ಯವಸ್ಥೆಯನ್ನು ಪುನಶ್ಚೇತನಗೊಳಿಸುವ ಉದ್ದೇಶದಿಂದ ಅಮೆರಿಕದ ಅಧ್ಯಕ್ಷ ಜೋ ಬಿಡೆನ್ ಅವರು $ 1.9 ಟ್ರಿಲಿಯನ್ ಮೊತ್ತದ ಒಂದು ಮಹತ್ವಾಕಾಂಕ್ಷೆಯ ರಕ್ಷಣಾ ಪ್ಯಾಕೇಜ್‌ಅನ್ನು ಅನಾವರಣಗೊಳಿಸಿದ್ದಾರೆ. ಈ ಸಂಬಂಧವಾಗಿಯೇ ಹಿಂದಿನ ಅಧ್ಯಕ್ಷ ಟ್ರಂಪ್ ಕೂಡ ಮೊದಲು ಬಿಡುಗಡೆ ಮಾಡಿದ $2 ಟ್ರಿಲಿಯನ್ ಮೊತ್ತದ ಪ್ಯಾಕೇಜ್ ಜೊತೆಗೆ ಇನ್ನೂ $900 ಬಿಲಿಯನ್ ಮೊತ್ತವನ್ನೂ ಡಿಸೆಂಬರ್ 2020 ರಲ್ಲಿ ಘೋಷಿಸಿದ್ದರು. ಈ ಒಟ್ಟು ಪ್ಯಾಕೇಜ್‌ಗಳು, ಕೊರೊನಾ ಸಾಂಕ್ರಾಮಿಕದಿಂದ ಉಂಟಾದ ಸಮಸ್ಯೆಗಳಿಗೆ ಪರಿಹಾರ ಒದಗಿಸುವುದರ ಜೊತೆಗೆ ಅಮೆರಿಕದ ಅರ್ಥವ್ಯವಸ್ಥೆಗೆ ಕಾಯಕಲ್ಪ ನೀಡುವ ಉದ್ದೇಶವನ್ನೂ ಹೊಂದಿವೆ. ಈ ಪ್ಯಾಕೇಜ್‌ಗಳಿಗೆ ಬೇಕಾಗುವ ಹಣವನ್ನು ಸಾಲದ ಮೂಲಕ ಒದಗಿಸಿಕೊಂಡಾಗ ಅಮೇರಿಕಾದ ಜಿಡಿಪಿ–ವಿತ್ತೀಯ ಕೊರತೆಯ ಅನುಪಾತವು ಮಹಾ ಯುದ್ಧಾನಂತರದ ಇತಿಹಾಸದಲ್ಲೇ ಅಭೂತಪೂರ್ವ ಮಟ್ಟಕ್ಕೆ ಏರುತ್ತದೆ. ಪುನಶ್ಚೇತನದ ಈ ಕ್ರಮಗಳನ್ನು ಅನುಷ್ಠಾನಗೊಳಿಸಲು ಡೊನಾಲ್ಡ್ ಟ್ರಂಪ್ ಆಡಳಿತದ ಅಡಿಯಲ್ಲಿ ಆಮದುಗಳನ್ನು ತಡೆಗಟ್ಟಲು ಅಮೆರಿಕಾ ಕೈಗೊಂಡ ರಕ್ಷಣಾತ್ಮಕ ಕ್ರಮಗಳ ಹೊರತಾಗಿಯೂ, ಉಳಿದ ದೇಶಗಳಿಗೂ ಸ್ವಲ್ಪ ಮಟ್ಟಿನ ಪ್ರಯೋಜನ ಲಭಿಸುತ್ತದೆ.

ಎರಡನೆಯ ಮಹಾಯುದ್ಧಾನಂತರದ ಅವಧಿಯಲ್ಲಿ, ಬಂಡವಾಳಶಾಹಿ ಜಗತ್ತಿನಲ್ಲಿ, ಪ್ರಭುತ್ವದ ಸಕ್ರಿಯ ಮಧ್ಯಪ್ರವೇಶದ ಮೂಲಕ ಆರ್ಥಿಕ ಚಟುವಟಿಕೆಗಳು ಉತ್ಕೃಷ್ಟವಾಗಿ ಬೆಳೆಯುವಂತೆಯೂ ಮತ್ತು ಈ ಬೆಳವಣಿಗೆಯು ಬಹಳ ಕಾಲ ಬಾಳುವಂತೆಯೂ ನೋಡಿಕೊಳ್ಳಲಾಯಿತು. ಆದರೆ, ಹಣಕಾಸು ಬಂಡವಾಳವು ಜಗತ್ತಿನ ಉದ್ದಗಲಕ್ಕೂ ಹರಿದಾಡಿ ವ್ಯಾಪಿಸಿಕೊಳ್ಳಲು ಆರಂಭಿಸುತ್ತಿದ್ದಂತಯೇ, ಆರ್ಥಿಕ ಚಟುವಟಿಕೆಗಳ ಉತ್ಕರ್ಷದ ಮುಂದುವರಿಕೆ ಅಸಾಧ್ಯವಾಯಿತು: ರಾಷ್ಟ್ರೀಯ ಸರ್ಕಾರಗಳು ತಮ್ಮ ತಮ್ಮ ಅಭಿವೃದ್ಧಿ ಕಾರ್ಯಗಳಿಗೆ ಬೇಕಾಗುವ ಹಣ ಹೊಂದಿಸಿಕೊಳ್ಳುವ ಸಲುವಾಗಿ ಶ್ರೀಮಂತರ ಮೇಲೆ ತೆರಿಗೆ ಹಾಕುವ ಮತ್ತು ವಿತ್ತೀಯ ಕೊರತೆಯ ಬಜೆಟ್ ಕ್ರಮಗಳಿಗೆ ಹಣಕಾಸು ಬಂಡವಾಳದ ಎಂದಿನ ವಿರೋಧವು ಒಂದು ನಿರ್ಣಾಯಕ ಅಂಶವಾಗಿ ಪರಿಣಮಿಸಿತು. ಹೇಗೆಂದರೆ, ಜಾಗತೀಕರಣಗೊಂಡ ಹಣಕಾಸು ಬಂಡವಾಳವು ತಾನು ಹೂಡಿಕೆ ಮಾಡಿದ ದೇಶವು ತನ್ನ ಇಚ್ಛೆಗೆ ವಿರೋಧವಾಗಿ ನಡೆದುಕೊಂಡರೆ, ತನ್ನ ಹೂಡಿಕೆಯನ್ನು ಹಿಂತೆಗೆದುಕೊಂಡು ಆ ದೇಶದಿಂದ ಹೊರ ಹೋಗುವುದಾಗಿ ಬೆದರಿಕೆ ಹಾಕುತ್ತಿತ್ತು. ಆದ್ದರಿಂದ, ಬಂಡವಾಳವು ಹೊರ ಹೋಗುವ ಭೀತಿಗೆ ಒಳಗಾದ ರಾಷ್ಟ್ರ–ಪ್ರಭುತ್ವಗಳು ಹಣಕಾಸು ಬಂಡವಾಳದೊಂದಿಗೆ ದೈನ್ಯತೆಯಿಂದ ವರ್ತಿಸಲಾರಂಭಿಸಿದವು. ಈ ಅಂಶವನ್ನು ಬೇರೆ ರೀತಿಯಲ್ಲಿ ಹೇಳುವುದಾದರೆ, ಯಾವುದೇ ದೇಶದ ಪ್ರಭುತ್ವವು ಆರ್ಥಿಕ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಪಾಲ್ಗೊಂಡರೆ ಅಥವಾ ಶ್ರೀಮಂತರ ಮೇಲೆ ತೆರಿಗೆ ಹಾಕಿದರೆ ಅಥವಾ ಮಿತಿ–ಮೀರಿದ ಬಜೆಟ್ ಕೊರತೆಯಲ್ಲಿದ್ದರೆ ಅಥವಾ ಆರ್ಥಿಕ ಚಟುವಟಿಕೆಗಳಲ್ಲಿ ತಲೆ ತೂರಿಸಿದರೆ, ಆಗ ಹಣಕಾಸು ಬಂಡವಾಳವು ಆ ದೇಶವನ್ನು ತೊರೆದು ಬೇರೆಡೆಗೆ ಹೋಗುತ್ತದೆ.

ಆದರೆ, ಹಣಕಾಸು ಬಂಡವಾಳದ ಇಂತಹ ಒತ್ತಡಗಳಿಂದ ಅಮೇರಿಕಾ ಬಹುತೇಕ ಮುಕ್ತವಾಗಿತ್ತು, ಏಕೆಂದರೆ, ಅದರ ಡಾಲರ್ ಕರೆನ್ಸಿಯು "ಚಿನ್ನಕ್ಕೆ ಸಮಾನ" ಎಂದೇ ಪರಿಗಣಿಸಲ್ಪಟ್ಟಿತ್ತು ಮತ್ತು ಆಸ್ತಿ–ಸಂಪತ್ತನ್ನು ಹಿಡಿದಿಟ್ಟುಕೊಳ್ಳುವ ಒಂದು ಸುರಕ್ಷಿತ ಮಾಧ್ಯಮವಾಗಿತ್ತು. ಹಾಗಾಗಿ, ಅಮೇರಿಕಾದಿಂದ ಬಂಡವಾಳವು ದೊಡ್ಡ ಪ್ರಮಾಣದಲ್ಲಿ ಹೊರ ಹೋಗುವ ಸಾಧ್ಯತೆಗಳೇ ಇರಲಿಲ್ಲ. ಆದರೆ, ಅಮೇರಿಕಾದಲ್ಲಿ ಸರ್ಕಾರವು ಹೆಚ್ಚಿನ ಮಟ್ಟದ ವೆಚ್ಚಗಳನ್ನು ಕೈಗೊಂಡ ಕಾರಣದಿಂದಾಗಿ, ಸ್ವಲ್ಪ ಮಟ್ಟಿನ ಬೇಡಿಕೆಯು ವಿದೇಶಗಳಿಗೆ "ಸೋರಿಕೆ"ಯಾಯ್ತು ಮತ್ತು ಹೊರ ದೇಶಗಳಿಗೆ ಅಮೇರಿಕಾ ಸಾಲಗಾರನಾಯ್ತು ಮಾತ್ರವಲ್ಲ, ಸ್ವದೇಶದಲ್ಲಿ ಉದ್ಯೋಗಗಳನ್ನು ಸೃಷ್ಟಿಸುವ ಬದಲು ವಿದೇಶಗಳಲ್ಲಿ ಉದ್ಯೋಗಗಳನ್ನು ಸೃಷ್ಟಿಸಿತು. ವಿದೇಶಗಳಲ್ಲಿ ಉದ್ಯೋಗಗಳನ್ನು ಸೃಷ್ಟಿಸಿದ ಈ ಸಂಗತಿಯು, ಆರ್ಥಿಕ ಚಟುವಟಿಕೆಗಳಲ್ಲಿ ಪ್ರಭುತ್ವದ ಮಧ್ಯಪ್ರವೇಶಗಳಿಗೆ ಅಡ್ಡಿಯಾಗಿ ಪರಿಣಮಿಸಿತು. ಈ ಕಾರಣದಿಂದಾಗಿ, ಟ್ರಂಪ್, ಆಮದುಗಳನ್ನು ತಡೆಯುವ ರಕ್ಷಣಾತ್ಮಕ ಕ್ರಮಗಳ ಮೂಲಕ ಮತ್ತು ಅಮೇರಿಕಾದ ಅರ್ಥವ್ಯವಸ್ಥೆಗೆ ಉತ್ತೇಜನ ಒದಗಿಸುವ ಮೂಲಕ ಅಲ್ಲಿಯೇ ಉದ್ಯೋಗ ಸೃಷ್ಟಿಸಲು ಉದ್ದೇಶಿಸಿದ್ದರು. ಆದರೆ, ಅರ್ಥವ್ಯವಸ್ಥೆಗೆ ಒದಗಿಸಿದ ಬೃಹತ್ ಉತ್ತೇಜನ ಮತ್ತು ಆಮದುಗಳನ್ನು ತಡೆಯುವ ರಕ್ಷಣಾತ್ಮಕ ಕ್ರಮಗಳ ಹೊರತಾಗಿಯೂ, ಗಮನಾರ್ಹವಾಗಿ ಬೆಳೆದ ಅಮೇರಿಕಾದ ವಿದೇಶ ವ್ಯಾಪಾರ ಕೊರತೆಯು, ವಿದೇಶಗಳಿಗೆ "ಸೋರಿಕೆ"ಯಾಗುತ್ತಿರುವ ಬೇಡಿಕೆಯ ಗಾತ್ರವು ಇನ್ನೂ ಗಮನಾರ್ಹ ಪ್ರಮಾಣದಲ್ಲಿದೆ ಎಂಬುದನ್ನು ಸೂಚಿಸುತ್ತದೆ. ಆದಾಗ್ಯೂ, ಬಿಡೆನ್, ಸದ್ಯದ ಮಟ್ಟಿಗೆ, ರಕ್ಷಣಾತ್ಮಕ ಕ್ರಮಗಳನ್ನು ಬಿಗಿಗೊಳಿಸದೆ, ಅರ್ಥವ್ಯವಸ್ಥೆಗೆ ಉತ್ತೇಜನ ಒದಗಿಸುವ ಆಯ್ಕೆಯನ್ನು ಮಾತ್ರ ಮಾಡಿಕೊಂಡಿದ್ದಾರೆ.

ಅಮೇರಿಕಾದ ಅರ್ಥವ್ಯವಸ್ಥೆಗೆ ದೊರೆತ ಉತ್ತೇಜಕದ ಸ್ವಲ್ಪ ಮಟ್ಟಿನ ಲಾಭ ಭಾರತಕ್ಕೂ ಲಭಿಸುತ್ತದೆ ಎಂಬುದು ಅನೇಕ ವೀಕ್ಷಕರ ಅಭಿಪ್ರಾಯ. ಏಕೆಂದರೆ, ಅಮೇರಿಕಾ ಮತ್ತು ವಿಶ್ವದ ಅನೇಕ ದೇಶಗಳಲ್ಲಿ ಬೇಡಿಕೆಯು ಯಥಾ ಸ್ಥಿತಿಗೆ ಮರಳುವುದರಿಂದ ಭಾರತದ ರಫ್ತುಗಳು ಬೆಳೆಯುತ್ತವೆ. ಆದರೆ, ಯುದ್ಧಾನಂತರದ ಸನ್ನಿವೇಶಗಳಿಗೆ ಹೋಲಿಸಿದರೆ, ಪ್ರಸಕ್ತ ಸನ್ನಿವೇಶದಲ್ಲಿ ಒಂದು ಮೂಲಭೂತ ವ್ಯತ್ಯಾಸವಿರುವುದನ್ನು ಗಮನಿಸಬಹುದು. ವ್ಯತ್ಯಾಸವೆಂದರೆ, ಆಗ, ಪ್ರಭುತ್ವ–ಉತ್ತೇಜಿತ ಉತ್ಕರ್ಷವು ಭಾರತದ ಅರ್ಥವ್ಯವಸ್ಥೆಯ ಮೇಲೆ ಗುಣಕ ಪರಿಣಾಮಗಳನ್ನು ಬೀರುತ್ತಿತ್ತು ಮತ್ತು ಆ ಸಮಯದಲ್ಲಿ ಹಣಕಾಸು ಬಂಡವಾಳವು ಜಾಗತೀಕರಣಗೊಂಡಿರಲಿಲ್ಲ. ಆದರೆ, ಇಂದು ಹಣಕಾಸು ಬಂಡವಾಳವು ಜಾಗತೀಕರಣಗೊಂಡಿದೆ.

ಹಣಕಾಸು ಬಂಡವಾಳವು ಜಾಗತೀಕರಣಗೊಂಡದ್ದರಿಂದ ಉಂಟಾದ ಒಂದು ಪರಿಣಾಮವೆಂದರೆ, ಪ್ರತಿಯೊಂದು ದೇಶವೂ ತನ್ನ ಬಡ್ಡಿ ದರವನ್ನು ಅಮೇರಿಕಾದ ಬಡ್ಡಿ ದರದೊಂದಿಗೆ ಹೊಂದಿಸಿ ಕೊಳ್ಳಬೇಕಾಯಿತು. ಉದಾಹರಣೆಗೆ, ಒಬ್ಬ ವಿದೇಶಿ ಹೂಡಿಕೆದಾರನಿಗೆ ಭಾರತದಲ್ಲಿ ಸಿಗುವ ಬಡ್ಡಿ ದರವು ಅಮೇರಿಕಾದಲ್ಲಿರುವುದಕ್ಕಿಂತ ಹೆಚ್ಚಿನ ಮಟ್ಟದ್ದೂ ಮತ್ತು ಜೊತೆಗೆ ಭಾರತದಲ್ಲಿ ಹೂಡಿಕೆಯ ಅಪಾಯವನ್ನು ಸರಿದೂಗಿಸಲು ತಕ್ಕ ಪರಿಹಾರವನ್ನೂ ಒಳಗೊಂಡಿರಬೇಕಾಗುತ್ತದೆ. ಇಲ್ಲದಿದ್ದರೆ, ಹಣಕಾಸು ಬಂಡವಾಳವು ಭಾರತದಿಂದ ಅಮೆರಿಕಕ್ಕೆ ಹರಿಯುತ್ತದೆ.

ಇತ್ತೀಚಿನವರೆಗೆ, ಅಮೇರಿಕಾ ವಿತ್ತೀಯ ಕ್ರಿಯಾಶೀಲತೆಯನ್ನು ತ್ಯಜಿಸಿತ್ತು. ಹಣಕಾಸು ನೀತಿಯೊಂದರ ಮೂಲಕವೇ ಅರ್ಥವ್ಯವಸ್ಥೆಯನ್ನು ಉತ್ತೇಜಿಸಲು ಪ್ರಯತ್ನಿಸಿತು. ಆದ್ದರಿಂದ, ಬಡ್ಡಿ ದರಗಳನ್ನು ಬಹುತೇಕ ಶೂನ್ಯ ಮಟ್ಟಕ್ಕೆ ಇಳಿಸಿತ್ತು. ಮತ್ತೊಂದೆಡೆ, ವಿತ್ತೀಯ ಕ್ರಿಯಾಶೀಲತೆಯತ್ತ ಹೊರಳಿದಾಗ ಬಡ್ಡಿ ದರಗಳಲ್ಲಿ ಸ್ವಲ್ಪ ಮಟ್ಟಿನ ಏರಿಕೆಯಾಗುತ್ತದೆ. ಅಮೇರಿಕಾದಲ್ಲಿ ಈ ಬದಲಾವಣೆ ಈಗಾಗಲೇ ಕಾಣಿಸಿಕೊಂಡಿದೆ. ಪರಿಣಾಮವಾಗಿ, ಭಾರತದಂತಹ ಅನೇಕ ದೇಶಗಳಲ್ಲಿ ಬಡ್ಡಿ ದರಗಳು ಏರಿವೆ. ಈಗಾಗಲೇ ಭಾರತೀಯ ರಿಸರ್ವ್ ಬ್ಯಾಂಕ್ ಅಮೇರಿಕಾದ ಬಾಂಡ್–ಇಳುವರಿ ಏರಿಕೆಯಿಂದಾಗಿ, ಭಾರತದ ಬಾಂಡ್‌ಗಳ ಮೇಲಿನ ಬಡ್ಡಿ ದರಗಳನ್ನು ಕಡಿಮೆ ಮಾಡುವ ಸಂಬಂಧವಾಗಿ ಸಮಸ್ಯೆಗಳನ್ನು ಎದುರಿಸುತ್ತಿದೆ. ಈ ಸಮಸ್ಯೆಯು ಕಾಲಾನಂತರದಲ್ಲಿ ತೀವ್ರಗೊಳ್ಳುತ್ತದೆ. ಜೊತೆಗೆ, ಬಡ್ಡಿ ದರಗಳ ಹೆಚ್ಚಳದೊಂದಿಗೆ, ಹೂಡಿಕೆಗಳು ಮತ್ತಷ್ಟು ನಿರುತ್ಸಾಹಗೊಳ್ಳುತ್ತವೆ.

ಹೂಡಿಕೆಗಳ ಇಳಿಕೆಗೆ ಒಂದು ಅಧಿಕ ಕಾರಣವೂ ಇದೆ. ಅದು ಹಣದುಬ್ಬರ. ಈ ಅಂಶವನ್ನು ಅಮೇರಿಕಾದಲ್ಲಿ ಬಹಳವಾಗಿ ಚರ್ಚಿಸಲಾಗುತ್ತಿದೆ.



ಸಂಕ್ಷಿಪ್ತವಾಗಿ ಹೇಳುವುದಾದರೆ, ಬಿಡೆನ್ ಅವರ ಪ್ಯಾಕೇಜ್ ಒಂದು ಅಸಮರ್ಥನೀಯ ಊಹೆಯನ್ನು ಆಧರಿಸಿದೆ. ಅದೇನೆಂದರೆ, ಇಪ್ಪತ್ತನೇ ಶತಮಾನದ ಪ್ರಸಿದ್ಧ ಅರ್ಥಶಾಸ್ತ್ರಜ್ಞ ಜೆ.ಎಂ. ಕೀನ್ಸ್ ಅವರು ಪ್ರತಿಪಾದಿಸಿದ ವಿತ್ತೀಯ ವಿಧಾನಗಳ ಮೂಲಕ ಅರ್ಥವ್ಯವಸ್ಥೆಯನ್ನು ಉತ್ತೇಜಿಸಬಹುದು ಎಂಬುದು. ಆದರೆ, ಕೀನ್ಸ್ ಅವರು ಹೇಳಿದ್ದ "ಎಲ್ಲಕ್ಕಿಂತ ಮಿಗಿಲಾಗಿ ಬಂಡವಾಳವು ರಾಷ್ಟ್ರೀಯ ಮೂಲದ್ದಾಗಿರಬೇಕು" ಎಂಬ ಕಟ್ಟಳೆಯನ್ನು ನಿರ್ಲಕ್ಷಿಸಲಾಗಿದೆ. ಈ ಅಸಮರ್ಥನೀಯ ಊಹೆಯು, ಹಣಕಾಸು ಬಂಡವಾಳದ ಚಲನೆಯ ಮೇಲೆ ನಿರ್ಬಂಧಗಳನ್ನು ವಿಧಿಸದೆ, ನವ ಉದಾರವಾದಿ ಬಂಡವಾಳಶಾಹಿಯು ಜಾಗತಿಕ ಅರ್ಥವ್ಯವಸ್ಥೆಯನ್ನು ತಳ್ಳಿರುವ ದೀರ್ಘಕಾಲದ ಬಿಕ್ಕಟ್ಟಿನಿಂದ ಹೊರಬರಬಹುದು ಎಂಬ ಭ್ರಮೆಯ ಮೇಲೆ ನಿಂತಿದೆ.

ಬಿಡೆನ್ ಪ್ರಸ್ತಾಪಿಸಿರುವ ಮಟ್ಟದ ಆರ್ಥಿಕ ಉತ್ತೇಜನವು ಅಮೇರಿಕಾದಲ್ಲಿ ಹಣದುಬ್ಬರವನ್ನು ಹರಿಯಬಿಡುತ್ತದೆ ಎಂದು ಅಮೇರಿಕಾದ ಅನೇಕ ಮಧ್ಯ–ಬಲ ಪಂಥೀಯ ಅರ್ಥಶಾಸ್ತ್ರಜ್ಞರು ಆತಂಕ ವ್ಯಕ್ತಪಡಿಸಿದ್ದಾರೆ, ಆದರೆ, ಹಲವು ಮಧ್ಯ–ಎಡಪಂಥೀಯರು ಅಂತಹ ಹಣದುಬ್ಬರದ ಭೀತಿಯನ್ನು ತಿರಸ್ಕರಿಸುತ್ತಾರೆ. ಈ ಇಡೀ ಚರ್ಚೆಯು, ಅಮೇರಿಕಾದ ಆರ್ಥಿಕ ಉತ್ತೇಜಕವು ಅಮೇರಿಕಾದಲ್ಲಿ ಉಂಟುಮಾಡಬಹುದಾದ ಹಣದುಬ್ಬರದ ಮಟ್ಟಿಗೆ ಸೀಮಿತಗೊಂಡಿದೆ. ಆದರೆ, ಈ ಆರ್ಥಿಕ ಉತ್ತೇಜಕವು (ಬಿಡೆನ್ ಪ್ಯಾಕೇಜ್) ಇತರ ದೇಶಗಳಲ್ಲಿ ಹಣದುಬ್ಬರವನ್ನು ಉಂಟುಮಾಡುವ ಸಾಧ್ಯತೆಯ ಬಗ್ಗೆ ಚಕಾರ ಎತ್ತದಿರುವುದು ಆಶ್ಚರ್ಯಕರವಾಗಿದೆ. ಹಣದುಬ್ಬರದ ಈ ಪ್ರಶ್ನೆಯು ಭಾರತ ಮತ್ತು ಮೂರನೇ ಜಗತ್ತಿನ ಇತರ ದೇಶಗಳಿಗೆ ಬಹಳ ಮುಖ್ಯವಾಗುತ್ತದೆ. ಏಕೆಂದರೆ, ಈ ದೇಶಗಳು ತಮ್ಮ ವಿವಿಧ ಪ್ರಾಥಮಿಕ ಸರಕುಗಳನ್ನು ಅಮೇರಿಕಾ ಮತ್ತು ಇತರ ಬಂಡವಾಳಶಾಹಿ ದೇಶಗಳಿಗೆ ಒದಗಿಸುತ್ತವೆ.

ಅಮೇರಿಕಾದ ಈ ಉತ್ತೇಜಕವು ಖಂಡಿತವಾಗಿಯೂ ಪ್ರಾಥಮಿಕ ಸರಕುಗಳ ಮೇಲಿನ ಬೇಡಿಕೆಯನ್ನು ಹೆಚ್ಚಿಸುತ್ತದೆ. ಆದ್ದರಿಂದ, ಬಹುತೇಕ ಅವುಗಳ ಬೆಲೆಗಳನ್ನೂ ಹೆಚ್ಚಿಸುತ್ತದೆ. ಈ ಬೆಲೆ ಹೆಚ್ಚಳಗಳು ಅಮೇರಿಕಾದ ಹಣದುಬ್ಬರ ದರದ ಮೇಲೆ ಹೆಚ್ಚಿನ ಪರಿಣಾಮ ಬೀರದಿದ್ದರೂ ಸಹ, ಖಂಡಿತವಾಗಿಯೂ ಭಾರತದಂತಹ ಮೂರನೇ ಜಗತ್ತಿನ ಪ್ರಾಥಮಿಕ ಸರಕು ಪೂರೈಕೆದಾರ ದೇಶಗಳಲ್ಲಿ ಹಣದುಬ್ಬರವನ್ನು ಹೆಚ್ಚಿಸುತ್ತವೆ. ಪ್ರಾಥಮಿಕ ಸರಕುಗಳ ಬೆಲೆ ಏರಿಕೆಗೆ ಈ ದೇಶಗಳ ನೀತಿ–ಪ್ರತಿಕ್ರಿಯೆಯು ಹೇಗಿರುತ್ತದೆ ಎಂದರೆ, ಜಾಗತೀಕರಣಗೊಂಡ ಹಣಕಾಸು ಆಳ್ವಿಕೆಯ ಅಡಿಯಲ್ಲಿ, ಅದು ಏನಿರಬೇಕಿತ್ತೋ ಅದಕ್ಕೆ ತದ್ವಿರುದ್ಧವಾಗಿರುತ್ತದೆ ಮತ್ತು ಯುದ್ಧಾನಂತರದ ನಿಯಂತ್ರಣ–ನೀತಿಗಳ ಆಡಳಿತದಲ್ಲಿ ಏನಿರುತ್ತಿತ್ತೋ ಅದಕ್ಕೆ ವಿರುದ್ಧವಾಗಿರುತ್ತದೆ. ಬೇಡಿಕೆಯ ಹಠಾತ್ ಹೆಚ್ಚಳದಿಂದಾಗಿ ಪ್ರಾಥಮಿಕ ಸರಕುಗಳ ಬೆಲೆಗಳು ಏರಿಕೆಯಾದಾಗ, ಸಾಮಾನ್ಯವಾಗಿ, ಅಂತಹ ಸರಕುಗಳ ಉತ್ಪಾದನೆಗೆ ಅನುವಾಗುವ ವಲಯಗಳಲ್ಲಿ ಸಾರ್ವಜನಿಕ ಹೂಡಿಕೆಯನ್ನು ಹೆಚ್ಚಿಸುವ ಮೂಲಕ ಅಂತಹ ಸರಕುಗಳ ಪೂರೈಕೆಯನ್ನು ಹೆಚ್ಚಿಸುವ ಕ್ರಮಗಳನ್ನು ಸರ್ಕಾರವು ಕೈಗೊಳ್ಳಬೇಕಾಗುತ್ತದೆ. ಆದರೆ, ಜಾಗತೀಕರಣಗೊಂಡ ಹಣಕಾಸು ಬಂಡವಾಳದ ಆಳ್ವಿಕೆಯಲ್ಲಿ, ಈ ನೀತಿ–ಪ್ರತಿಕ್ರಿಯೆಯು ಹೇಗಿರುತ್ತದೆ ಅಂದರೆ, ಸಾರ್ವಜನಿಕ ಹೂಡಿಕೆಗಳನ್ನು ಮತ್ತು ಸಾರ್ವಜನಿಕ ವೆಚ್ಚಗಳನ್ನು ಮೊಟಕುಗೊಳಿಸಲಾಗುತ್ತದೆ. ಈ ರೀತಿಯಲ್ಲಿ ಹಣದುಬ್ಬರವನ್ನು ನಿಯಂತ್ರಣದಲ್ಲಿಡುವ ಸಲುವಾಗಿ ಪೂರೈಕೆಯನ್ನು ಹೆಚ್ಚಿಸುವುದರ ಬದಲು ದೇಶೀಯ ಬೇಡಿಕೆಯನ್ನು ಮೊಟಕುಗೊಳಿಸಲಾಗುತ್ತದೆ. ಅಂದರೆ, ಪ್ರಾಥಮಿಕ ಸರಕುಗಳನ್ನು ಪೂರೈಕೆ ಮಾಡುವ ದೇಶಗಳ ಮೇಲೆ ಮಿತವ್ಯಯ ನೀತಿಗಳನ್ನು ಹೇರಲಾಗುವುದು. ಈ ನೀತಿಗಳಿಂದಾಗಿ, ಈ ದೇಶಗಳ ಚಟುವಟಿಕೆಗಳ ಮಟ್ಟವೂ ಮತ್ತು ಆ ಮೂಲಕ ದೇಶದ ಬೆಳವಣಿಗೆಯ ದರವೂ ನಿರ್ಬಂಧಕ್ಕೊಳಗಾಗುತ್ತವೆ.

ಹೀಗಾಗಿ, ಭಾರತದಂತಹ ಅರ್ಥವ್ಯವಸ್ಥೆಗಳಿಗೆ, ಬಿಡೆನ್ ಅವರ ಪ್ಯಾಕೇಜ್ ಪರಿಣಾಮವಾಗಿ, ರಫ್ತು ಅವಕಾಶಗಳು ಹೆಚ್ಚುತ್ತವೆ, ನಿಜ. ಆದರೆ, ಹಣದುಬ್ಬರವನ್ನು ನಿಯಂತ್ರಣದಲ್ಲಿಡುವ ಸಲುವಾಗಿ ಪ್ರಾಥಮಿಕ ಸರಕುಗಳ ದೇಶೀಯ ಬೇಡಿಕೆಯನ್ನು ಹತ್ತಿಕ್ಕಲಾಗುವುದು. ಹಾಗಾಗಿ, ರಫ್ತುಗಳ ಹೆಚ್ಚಳದ

ಪುಟ 14 ನೋಡಿ

ಬಿಡೆನ್ ಪ್ಯಾಕೇಜ್..



ಪುಟ 13 ರಿಂದ

ಜೊತೆಯಲ್ಲಿ ಒಟ್ಟಾರೆ ಚಟುವಟಿಕೆಗಳು ಮತ್ತು ಆರ್ಥಿಕ ಅಭಿವೃದ್ಧಿ ಸಂಕುಚಿತಗೊಳ್ಳುತ್ತವೆ.

ಎರಡನೆಯ ಮಹಾಯುದ್ಧದ ನಂತರದ ಉತ್ಕರ್ಷದ ಸಮಯದಲ್ಲಿ ಪರಿಸ್ಥಿತಿ ಈ ರೀತಿಯಲ್ಲಿರಲಿಲ್ಲ. ಹಣಕಾಸು ಬಂಡವಾಳದ ಆಜ್ಞೆಗಳಿಗೆ ಸರ್ಕಾರಗಳು ತಲೆಬಾಗುವ ಪರಿಸ್ಥಿತಿ ಇರಲಿಲ್ಲ. ಪ್ರಾಥಮಿಕ ಸರಕುಗಳ ಬೆಲೆಗಳು ಏರಿಕೆಯಾದಾಗ ಸಾರ್ವಜನಿಕ ಹೂಡಿಕೆಯನ್ನು ಹೆಚ್ಚಿಸುವ ಮೂಲಕ ಅಂತಹ ಸರಕುಗಳ ಪೂರೈಕೆಯನ್ನು ಹೆಚ್ಚಿಸುತ್ತಿದ್ದವು. ಪ್ರಾಥಮಿಕ ಸರಕುಗಳ ಬೆಲೆಗಳು ಏರಿದ ಕೂಡಲೇ ದೇಶೀಯ ಬೇಡಿಕೆಯನ್ನು ಹತ್ತಿಕ್ಕುವ ಮತ್ತು ಸಾರ್ವಜನಿಕ ವೆಚ್ಚಗಳನ್ನು ಮೊಟಕುಗೊಳಿಸುವ ಕೆಲಸ ಮಾಡುತ್ತಿರಲಿಲ್ಲ. ಹಾಗಾಗಿ, ಆ ಅವಧಿಯ ಜಾಗತಿಕ ಉತ್ಕರ್ಷವು ಭಾರತದ ಅರ್ಥವ್ಯವಸ್ಥೆಯ ಮೇಲೆ ಉತ್ತೇಜನಕಾರೀ ಪರಿಣಾಮ ಬೀರಿತೇ ವಿನಃ ಸಂಕುಚಿತಗೊಳಿಸಲಿಲ್ಲ.

ಸಂಕ್ಷಿಪ್ತವಾಗಿ ಹೇಳುವುದಾದರೆ, ಬಿಡೆನ್ ಅವರ ಪ್ಯಾಕೇಜ್ ಒಂದು ಅಸಮರ್ಥನೀಯ ಊಹೆಯನ್ನು ಆಧರಿಸಿದೆ. ಅದೇನೆಂದರೆ, ಇಪ್ಪತ್ತನೇ ಶತಮಾನದ ಪ್ರಸಿದ್ಧ ಅರ್ಥಶಾಸ್ತ್ರಜ್ಞ ಜೆ. ಎಂ. ಕೀನ್ಸ್ ಅವರು ಪ್ರತಿಪಾದಿಸಿದ ವಿತ್ತೀಯ ವಿಧಾನಗಳ ಮೂಲಕ ಅರ್ಥವ್ಯವಸ್ಥೆಯನ್ನು ಉತ್ತೇಜಿಸಬಹುದು ಎಂಬುದು. ಆದರೆ, ಕೀನ್ಸ್ ಅವರು ಹೇಳಿದ್ದ "ಎಲ್ಲಕ್ಕಿಂತ ಮಿಗಿಲಾಗಿ ಬಂಡವಾಳವು ರಾಷ್ಟ್ರೀಯ ಮೂಲದ್ದಾಗಿರಬೇಕು" ಎಂಬ ಕಟ್ಟಳೆಯನ್ನು ನಿರ್ಲಕ್ಷಿಸಲಾಗಿದೆ. ಈ ಅಸಮರ್ಥನೀಯ ಊಹೆಯು, ಹಣಕಾಸು ಬಂಡವಾಳದ ಚಲನೆಯ ಮೇಲೆ ನಿರ್ಬಂಧಗಳನ್ನು ವಿಧಿಸದೆ, ನವ ಉದಾರವಾದಿ ಬಂಡವಾಳಶಾಹಿಯು ಜಾಗತಿಕ ಅರ್ಥವ್ಯವಸ್ಥೆಯನ್ನು ತಳ್ಳಿರುವ ದೀರ್ಘಕಾಲದ ಬಿಕ್ಕಟ್ಟಿನಿಂದ ಹೊರಬರಬಹುದು ಎಂಬ ಭ್ರಮೆಯ ಮೇಲೆ ನಿಂತಿದೆ. ಹಣಕಾಸು ಬಂಡವಾಳದ ಆಧಿಪತ್ಯದ ಹಾವಳಿಯಿಂದ ಅಮೇರಿಕಾ ಮತ್ತು ಕೆಲವು ಮುಂದುವರೆದ ದೇಶಗಳು ಹಾನಿಗೊಳಗಾಗದಿರಬಹುದು. ಆದರೆ, ಮೂರನೇ ಜಗತ್ತಿನ ದೇಶಗಳು ಅಷ್ಟು ಅದೃಷ್ಟಶಾಲಿಗಳಲ್ಲ. ದೇಶ ದೇಶಗಳು ಮತ್ತೊಮ್ಮೆ ತಮ್ಮ ಸ್ವಾಯತ್ತತೆಯನ್ನು ಮರಳಿ ಪಡೆಯುವಂತಹ ಒಂದು ಅಂತಾರಾಷ್ಟ್ರೀಯ ಆರ್ಥಿಕ ವ್ಯವಸ್ಥೆಯ ಏರ್ಪಾಟಿಗೆ ಕರೆ ಕೊಡುವ ಬದಲು, ಬಿಡೆನ್ ಪ್ಯಾಕೇಜ್, ಜಾಗತೀಕರಣಗೊಂಡ ಹಣಕಾಸು ಬಂಡವಾಳದ ಆಧಿಪತ್ಯದಲ್ಲಿ ಎಲ್ಲಾ ದೇಶಗಳೂ ಕೀನ್ಸಿಯನ್ ಬೇಡಿಕೆ ನಿರ್ವಹಣೆಯ ದಿನಗಳಿಗೆ ಮರಳಬಹುದು ಎಂದು ಭಾವಿಸುತ್ತದೆ.

ಜೋ ಬಿಡೆನ್ ಅವರು ಕಲ್ಪಿಸಿಕೊಂಡ ಒಂದು ಅಸಾಧಾರಣ ಮಹತ್ವಾಕಾಂಕ್ಷೆಯ ವಿತ್ತೀಯ ಉತ್ತೇಜಕವು ಜಾಗತಿಕ ವಿಭಜನೆಯನ್ನು ಹೆಚ್ಚಿಸುತ್ತದೆ. ಮುಂದುವರಿದ ದೇಶಗಳು ಬೆಳವಣಿಗೆಯೊಂದಿಗೆ ಮುನ್ನುಗ್ಗುವಾಗ ಮೂರನೇ ಜಗತ್ತಿನ ದೇಶಗಳು ತೀವ್ರ ನಿರುದ್ಯೋಗದ ಮತ್ತು ವಿತ್ತೀಯ ಮಿತವ್ಯಯದ ಸಮಸ್ಯೆಗಳಲ್ಲಿ ಮುಳುಗುತ್ತವೆ. ಈ ಊಹೆಯ ಮೂಲಭೂತ ಅಸಮರ್ಥನೆಯನ್ನು ಈ ಕೆಲವು ಅಂಶಗಳು ವ್ಯಕ್ತಪಡಿಸುತ್ತವೆ. ಐಎಂಎಫ್‌ನ ತಾರತಮ್ಯ ನೀತಿಗಳು ಜಾಗತಿಕ ವಿಭಜನೆಯನ್ನು ಹೆಚ್ಚಿಸುವ ನಿಟ್ಟಿನಲ್ಲಿ ಕಾರ್ಯಪ್ರವೃತ್ತವಾಗಿವೆ. ಆದರೆ, ಐಎಂಎಫ್‌ನ ಹೊರತಾಗಿಯೂ, ಹಣಕಾಸು ಬಂಡವಾಳದ ಪ್ರಾಧಾನ್ಯತೆಯ ಜಾಗತಿಕ ಅರ್ಥವ್ಯವಸ್ಥೆಯು ಈ ದಿಕ್ಕಿನ್ನೇ ಸ್ವಯಂಪ್ರೇರಿತವಾಗಿ ಆಯ್ಕೆ ಮಾಡಿಕೊಳ್ಳುತ್ತದೆ.

ಬಿಡೆನ್ ಅವರ ಪ್ಯಾಕೇಜ್ ಉದ್ದೇಶ ಒಳ್ಳೆಯದು ಹೌದು ಮತ್ತು ಅದನ್ನು ಮುಂದುವರಿದ ದೇಶಗಳ ಎಡಪಂಥೀಯರು ಬೆಂಬಲಿಸುತ್ತಾರೆ, ನಿಜ. ಆದರೆ, ಈ ಎಡಪಂಥೀಯರು ಮೂರನೇ ಜಗತ್ತಿನ ದೇಶಗಳ ವಿಪತ್ತುಗಳ ಬಗ್ಗೆಯೂ ಸಹ ಸಂವೇದನೆಯನ್ನು ಹೊಂದಿರಬೇಕಾಗುತ್ತದೆ.

ಪ್ರತಿಯೊಂದು ರಾಜ್ಯಕ್ಕೆ ಉಚಿತ ಲಸಿಕೆ ಒದಗಿಸಿ–ಪಿಣರಾಯಿ ವಿಜಯನ್

ಕೇರಳ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಎಲ್ಲ ರಾಜ್ಯ ಸರಕಾರಗಳಿಗೆ ಉಚಿತವಾಗಿ ಲಸಿಕೆಗಳನ್ನು ಪೂರೈಸಬೇಕು ಎಂದು ಆಗ್ರಹಿಸಿ ಪ್ರಧಾನ ಮಂತ್ರಿಗಳಿಗೆ ಪತ್ರ ಬರೆದಿದ್ದಾರೆ. ಕೊವಿಡ್–19ರ ಎರಡನೇ ಅಲೆ ಪ್ರತಿದಿನ ಸೋಂಕಿನ ಪ್ರಕರಣಗಳನ್ನು ಹೆಚ್ಚಿಸುತ್ತಿದೆ. ಕೇಂದ್ರ ಮತ್ತು ರಾಜ್ಯ ಸರಕಾರಗಳು ಈ ಏರುಗತಿಯನ್ನು ತಡೆಯಲು ಒಟ್ಟಿಗೇ ಕೆಲಸ ಮಾಡಬೇಕಾಗಿದೆ. 18ವರ್ಷಕ್ಕೆ ಮೇಲ್ಪಟ್ಟ ಎಲ್ಲರಿಗೂ ಲಸಿಕೆ ಹಾಕಿಸುವ ಕೇಂದ್ರ ಸರಕಾರದ ನಿರ್ಧಾರವನ್ನು ಬೆಂಬಲಿಸಿರುವ ಅವರು, ಇದನ್ನು ಎಲ್ಲ ರಾಜ್ಯಗಳಿಗೆ ಉಚಿತವಾಗಿ ಪೂರೈಸಬೇಕು ಎಂದು ಹೇಳಿದ್ದಾರೆ.

ಎಪ್ರಿಲ್ 19 ರಂದು ಪ್ರಕಟಿಸಿರುವ ಹೊಸ ಲಸಿಕೆ ಧೋರಣೆಯ ವಿವಿಧ ಆಯಾಮಗಳತ್ತ ತಮ್ಮ ಪತ್ರದಲ್ಲಿ ಕೇರಳದ ಮುಖ್ಯಮಂತ್ರಿಗಳು ಪ್ರಧಾನ ಮಂತ್ರಿಗಳ ಗಮನ ಸೆಳೆದಿದ್ದಾರೆ.

ಲಸಿಕೆ ತಯಾರಕರು ಕೇಂದ್ರೀಯ ಔಷಧಿ ಪ್ರಯೋಗಾಲಯ (ಸಿಡಿಎಲ್) ಪ್ರತಿ ತಿಂಗಳು ಬಿಡುಗಡೆ ಮಾಡುವ ತಮ್ಮ ಲಸಿಕೆ ಡೋಸುಗಳಲ್ಲಿ 50 ಶೇಕಡಾವನ್ನು ಭಾರತ ಸರಕಾರಕ್ಕೆ ಪೂರೈಸುತ್ತಾರೆ, ಉಳಿದ 50 ಶೇಕಡಾವನ್ನು ರಾಜ್ಯ ಸರಕಾರಗಳಿಗೆ ಮತ್ತು ಬಹಿರಂಗ ಮಾರುಕಟ್ಟೆಗೆ ಪೂರೈಸಲು ಸ್ವತಂತ್ರರಿರುತ್ತಾರೆ ಎಂದು ಹೊಸ ಧೋರಣೆ ಹೇಳುತ್ತದೆ. ರಾಜ್ಯ ಸರಕಾರಗಳು ಲಸಿಕೆ ತಯಾರಕರಿಂದ ಅದರ ಬೆಲೆ ಕೊಟ್ಟು ಖರೀದಿಸಬೇಕು ಎಂದು ಹೇಳಲಾಗಿದೆ.

ರಾಜ್ಯ ಸರಕಾರಗಳು ಈಗಾಗಲೇ ಮಹಾಸೋಂಕಿನ ಪರಿಣಾಮವಾಗಿ ಹೆಚ್ಚುವರಿ ಹಣಕಾಸು ಒದಗಿಸಬೇಕಾಗಿ ಬಂದಿದೆ. ಮತ್ತು ಈ ಲಸಿಕೆಗಳನ್ನು ತಮ್ಮ ರಾಜ್ಯದ ಜನರಿಗೆ ಉಚಿತವಾಗಿ ಕೊಡಬೇಕಾಗಿದೆ. ಇದು ಈಗಾಗಲೇ ಹಣಕಾಸು ಸಮಸ್ಯೆಗಳನ್ನು ಎದುರಿಸುತ್ತಿರುವ ರಾಜ್ಯ ಸರಕಾರಗಳ ಮೇಲೆ ಅಗಾಧ ಹೊರೆಯನ್ನು ಹೇರುತ್ತದೆ ಎಂಬ ಸಂಗತಿಯನ್ನು ಕೇರಳ ಮುಖ್ಯಮಂತ್ರಿಗಳು ಪ್ರಧಾನ ಮಂತ್ರಿಗಳ ಗಮನ ಸೆಳೆದಿದ್ದಾರೆ.

ಭಾರತ ಸರಕಾರದ ಪತ್ರಿಕಾ ಹೇಳಿಕೆಯಲ್ಲಿ ಕೇಂದ್ರ ಸರಕಾರಕ್ಕೆ 50 ಶೇ. ಮೀಸಲಾಗಿರುತ್ತದೆ, ಉಳಿದದ್ದು ರಾಜ್ಯ ಸರಕಾರಗಳು ಹಾಗೂ ಬಹಿರಂಗ ಮಾರುಕಟ್ಟೆಗೆ ವಿತರಣೆಯಾಗುತ್ತದೆ ಎನ್ನಲಾಗಿದೆ. ಆದರೆ ರಾಜ್ಯ ಸರಕಾರಗಳಿಗೆ ಆರೋಗ್ಯ ವಲಯದಲ್ಲಿ ಸಾಂವಿಧಾನಿಕ ಬದ್ಧತೆಗಳಿವೆ. ಆದ್ದರಿಂದ ರಾಜ್ಯಗಳಿಗೆ ಕೊವಿಡ್–19ರ ಒಂದು ಆಶ್ವಾಸನಾಬದ್ಧ ಕೋಟಾ ಸಿಗಬೇಕು, ಮತ್ತು ಇದನ್ನು ಮಹಾಸೋಂಕಿನ ಸಂದರ್ಭದಲ್ಲಿ ಉಚಿತವಾಗಿ ಒದಗಿಸಬೇಕಾಗಿದೆ. ರಾಜ್ಯಗಳಿಗೆ ಲಸಿಕೆಯನ್ನು ಒಂದು ಸಾರ್ವಜನಿಕ ಒಳಿತಿನ ಸರಕೆಂದು ಉಚಿತವಾಗಿ ಕೊಡಬೇಕಾಗಿದೆ ಎಂದು ವಿಜಯನ್ ತಮ್ಮ ಪತ್ರದಲ್ಲಿ ಪ್ರಧಾನಿಗಳಿಗೆ ಹೇಳಿದ್ದಾರೆ.

ಕೇಂದ್ರ ಸರಕಾರ ತನ್ನ 50 ಶೇ. ಕೋಟಾದಿಂದ ರಾಜ್ಯಗಳಿಗೆ ಮಾನದಂಡದ ಆಧಾರದಲ್ಲಿ ಉಚಿತವಾಗಿ ಪೂರೈಸುತ್ತದೆ ಎಂದು ಹೊಸ ಲಸಿಕೆ ಧೋರಣೆ ಹೇಳುತ್ತದೆ. ಈ ವಿಷಯದಲ್ಲಿ ರಾಜ್ಯ ಸರಕಾರಗಳು ಬಹಿರಂಗ ಮಾರುಕಟ್ಟೆಯಲ್ಲಿ ಖಾಸಗಿಯವರೊಂದಿಗೆ ಸ್ಪರ್ಧಿಸುವಂತೆ ಮಾಡುವುದಿಲ್ಲ ಎಂಬ ಭರವಸೆಯನ್ನು ಕೇಂದ್ರ ಸರಕಾರ ಕೊಡಬೇಕು. ಲಸಿಕೆ ವಿತರಣೆಗೆ ಭಾರತ ಸರಕಾರದ ಚಾನೆಲ್ ಎಂಬುದರ ಬದಲು, ರಾಜ್ಯ ಸರಕಾರಗಳನ್ನೂ ಒಳಗೊಳ್ಳುವ ಸರಕಾರೀ ಚಾನೆಲ್ ಎಂಬುದು ಇರಬೇಕು ಎಂದೂ ವಿಜಯನ್ ಸೂಚಿಸಿದ್ದಾರೆ.

ಕೇರಳ ಸರಕಾರ 50 ಲಕ್ಷ ಡೋಸುಗಳನ್ನು ಕೇಳಿದೆ, ಆದರೆ ಇದುವರೆಗೆ ಒದಗಿಸಿರುವುದು 5.5 ಲಕ್ಷ ಡೋಸುಗಳನ್ನು ಮಾತ್ರ, ಇದು ಲಸಿಕೆ ಅಭಿಯಾನವನ್ನು ಮಿತಗೊಳಿಸಿದೆ, ಆದ್ದರಿಂದ ಉಳಿದ ಡೋಸುಗಳನ್ನು ಸಾಧ್ಯವಾದಷ್ಟು ಬೇಗನೇ ಒದಗಿಸಬೇಕು ಎಂದು ಕೋರಿರುವ ವಿಜಯನ್ ಅವರು, ಲಸಿಕೆಗಳನ್ನು ರಾಜ್ಯ ಸರಕಾರಗಳಿಗೆ ಸಂಪೂರ್ಣವಾಗಿ ಉಚಿತವಾಗಿ ಒದಗಿಸುವಂತೆ ತಮ್ಮ ಧೋರಣೆಯ ಬಗ್ಗೆ ಪುನರಾಲೋಚನೆ ಮಾಡಬೇಕು ಎಂದು ತಮ್ಮ ಪತ್ರದಲ್ಲಿ ಪ್ರಧಾನ ಮಂತ್ರಿಗಳನ್ನು ಆಗ್ರಹಿಸಿದ್ದಾರೆ.

ಸರ್ಕಾರಿ ಮತ್ತು ಇತರ ನೌಕರರ ಸಂಘಗಳು



ಪುಟ 11 ರಿಂದ

ರಚನೆ ಮಾಡಿಕೊಂಡವು. ಆದರೆ ರೈಲ್ವೆ ಮತ್ತು ರಕ್ಷಣಾ ವಿಭಾಗದ ನೌಕರರು ಮತ್ತು ಕಾರ್ಮಿಕರು ಈ ಒಕ್ಕೂಟದಿಂದ ದೂರ ಉಳಿದಿದ್ದರು.

ಖಾಸಗಿ ನಿರ್ವಹಣೆಯಡಿಯಲ್ಲಿ ಭಾರತದಲ್ಲಿ ರೈಲ್ವೆಗಳನ್ನು ಪರಿಚಯಿಸಲಾಯಿತು. 1942 ರಲ್ಲಿ ಸರ್ಕಾರವು ಭಾರತದ ಸಂಪೂರ್ಣ ರೈಲ್ವೆ ವ್ಯವಸ್ಥೆಯ ನಿರ್ವಹಣೆಯನ್ನು ವಹಿಸಿಕೊಂಡಿತು ಮತ್ತು ಅಂದಿನಿಂದ ಎಲ್ಲಾ ರೈಲ್ವೆ ನೌಕರರನ್ನು ಸರ್ಕಾರಿ ನೌಕರರೆಂದು ಪರಿಗಣಿಸಲಾಗುತ್ತದೆ.

ಆದರೆ ರೈಲ್ವೆ ಕಾರ್ಮಿಕರ ನಡುವೆ ಸಂಘಗಳ ರಚನೆಯು ರೈಲ್ವೆಯ ಖಾಸಗಿ ಮಾಲೀಕತ್ವದ ಅವಧಿಯಲ್ಲಿಯೇ ಪ್ರಾರಂಭವಾಗಿತ್ತು. ಇದರ ಪರಿಣಾಮವಾಗಿ, ರೈಲ್ವೆ ಕಾರ್ಮಿಕರ ಸಂಘಗಳ ವಿಷಯದಲ್ಲಿ ಸರ್ಕಾರಿ ನೌಕರರ ಸಂಘಗಳನ್ನು ಸುತ್ತುವರೆದಿರುವ ನಿರ್ಬಂಧಗಳು ಸಂಪೂರ್ಣವಾಗಿ ಅನ್ವಯವಾಗಲಿಲ್ಲ. ಅವರು ಇತರ ಕೈಗಾರಿಕಾ ಕಾರ್ಮಿಕರೊಂದಿಗೆ ಸಮನಾಗಿ ಟ್ರೇಡ್ ಯೂನಿಯನ್ ಹಕ್ಕುಗಳನ್ನು ಅನುಭವಿಸಿದರು. ಆದ್ದರಿಂದ ನಿರ್ವಹಣೆಯನ್ನು ವಹಿಸಿಕೊಂಡ ನಂತರವೂ ರೈಲ್ವೆ ಕಾರ್ಮಿಕರು ಹಿಂದೆ ಗಳಿಸಿದ್ದ ಹಕ್ಕುಗಳು ಮತ್ತು ಸೌಲಭ್ಯಗಳನ್ನು ಸಂಪೂರ್ಣವಾಗಿ ಕಸಿದುಕೊಳ್ಳಲು ಸರ್ಕಾರಕ್ಕೆ ಸಾಧ್ಯವಾಗಲಿಲ್ಲ.

1924 ರಲ್ಲಿ ಕಲ್ಕತ್ತಾದಲ್ಲಿ ನಡೆದ ಎಐಟಿಯುಸಿಯ ನಾಲ್ಕನೇ ಅಧಿವೇಶನಕ್ಕೆ ಹಾಜರಾದ ರೈಲ್ವೆ ಒಕ್ಕೂಟಗಳ ಪ್ರತಿನಿಧಿಗಳು ಸಭೆ ಸೇರಿ, ಐಕ್ಯತೆಯ ದಿಕ್ಕಿನಲ್ಲಿ ಪರಿಣಾಮಕಾರಿ ಕ್ರಮಗಳನ್ನು ಕೈಗೊಳ್ಳುವುದಕ್ಕಾಗಿ ಒಂದು ಸಮಿತಿಯನ್ನು ರಚಿಸಿದರು. 1925 ರಲ್ಲಿ ಮುಂಬೈಯಲ್ಲಿ ನಡೆದ ಎಐಟಿಯುಸಿಯ ಐದನೇ ಅಧಿವೇಶನದಲ್ಲಿ ರೈಲ್ವೆ ನೌಕರರ ಯೂನಿಯನ್‌ಗಳ ಕೇಂದ್ರ ಸಂಘಟನೆಯಾದ ಆಲ್ ಇಂಡಿಯಾ ರೈಲ್ವೆಮೆನ್ ಫೆಡರೇಶನ್ ಜನಿಸಿತು. 1930 ರಲ್ಲಿ ರೈಲ್ವೆ ಮಂಡಳಿ ಈ ಒಕ್ಕೂಟಕ್ಕೆ ಅಧಿಕೃತ ಮಾನ್ಯತೆ ನೀಡಿತು.

ರಿಸರ್ವ್ ಬ್ಯಾಂಕ್ ಉದ್ಯೋಗಿಗಳ ಸಂಘಗಳು 1922–24ರ ಅವಧಿಯಲ್ಲಿ ಮುಂಬೈ, ಕಲಕತ್ತಾ ಮತ್ತು ಮದ್ರಾಸ್‌ನಂತಹ ವಲಯಗಳಲ್ಲಿ ಕರೆನ್ಸಿ ಅಸೋಸಿಯೇಷನ್‌ಗಳ ಹೆಸರಿನಲ್ಲಿ ಅಸ್ತಿತ್ವಕ್ಕೆ ಬಂದವು. ಅಖಿಲ ಭಾರತ ಸಂಘಟನೆಯನ್ನು ರಚಿಸುವ ಪ್ರಯತ್ನಗಳು 1924 ರಿಂದಲೇ ಪ್ರಾರಂಭವಾಗಿ, 1925 ರಲ್ಲಿ ಕಲ್ಕತ್ತಾದಲ್ಲಿ ನಡೆದ ಸಮ್ಮೇಳನದಲ್ಲಿ ಅಖಿಲ ಭಾರತ ಸಂಘಟನೆಯು ರೂಪುಗೊಂಡಿತು. ಈಗ ಆಲ್ ಇಂಡಿಯಾ ರಿಸರ್ವ್ ಬ್ಯಾಂಕ್ ಎಂಪ್ಲಾಯೀಸ್ ಅಸೋಸಿಯೇಷನ್ ಎಂದು ಕರೆಯಲ್ಪಡುವ ಈ ಸಂಘ, ಇತ್ತೀಚೆಗೆ ಭಾರತದ ಟ್ರೇಡ್ ಯೂನಿಯನ್ ಆಂದೋಲನದಲ್ಲಿ ಪ್ರಮುಖ ಸ್ಥಾನವನ್ನು ಪಡೆದುಕೊಂಡಿದೆ.

ಯುದ್ಧದ ಪ್ರಭಾವದ ಅಡಿಯಲ್ಲಿ ಪ್ರಾಂತೀಯ ಸರ್ಕಾರಿ ನೌಕರರು ಸಹ ಸಂಘಗಳನ್ನು ರಚಿಸುವತ್ತ ಒಲವು ತೋರಿದರು. 1920–21ರ ಅವಧಿಯಲ್ಲಿ ವಿವಿಧ ಪ್ರಾಂತ್ಯಗಳಲ್ಲಿನ ಪ್ರಾಂತೀಯ ಸರ್ಕಾರಿ ನೌಕರರ ಸಂಘಗಳು ರೂಪುಗೊಳ್ಳಲು ಪ್ರಾರಂಭವಾಯಿತು.

ಬಂಗಾಳದಲ್ಲಿಯೂ ಸಹ ಪ್ರಾಂತೀಯ ಸರ್ಕಾರಿ ನೌಕರರು ಈ ಅವಧಿಯಲ್ಲಿ ಸಂಘಗಳನ್ನು ರಚಿಸಿದರು ಮತ್ತು ಈ ರೀತಿಯ ಮೊದಲ ಸಂಘವೆಂದರೆ ಆಲ್ ಬಂಗಾಳ ಮಿನಿಸ್ಟ್ರಿಯಲ್ ಆಫಿಸರ್ಸ್ ಅಸೋಸಿಯೇಶನ್ಸ್, ಫೆಬ್ರವರಿ 1920 ರಲ್ಲಿ ಅಸ್ತಿತ್ವಕ್ಕೆ ಬಂದರೂ, ಬಂಗಾಳ ಸರ್ಕಾರದಿಂದ ಅಧಿಕೃತ ಮಾನ್ಯತೆಯನ್ನು 1923 ರ ನವೆಂಬರ್‌ನಲ್ಲಿ ಮಾತ್ರ ಪಡೆಯಿತು.

ಅಂತೆಯೇ ದೇಶದ ಇತರ ಪ್ರಾಂತ್ಯಗಳಲ್ಲಿ, ಪ್ರಾಂತೀಯ ನೌಕರರ ಸಂಘಟನೆಗಳು ಬೆಳೆದವು. ಈ ಸಂಘಗಳ ಚಟುವಟಿಕೆಗಳು ಸಮಾಲೋಚನೆ, ಮನವಿಗಳ ಸಲ್ಲಿಕೆ ಮತ್ತು ವಾರ್ಷಿಕ ಅಧಿವೇಶನಗಳನ್ನು ನಡೆಸುವ ನಾಲ್ಕು ಗೋಡೆಗಳೊಳಗೆ ಸೀಮಿತವಾಗಿ ಉಳಿದವು.

ಆದರೆ 1960 ರ ಜನವರಿ 23–24 ರಂದು ಹೈದರಾಬಾದ್‌ನಲ್ಲಿ ನಡೆದ ಅಖಿಲ ಭಾರತ ಸಮ್ಮೇಳನದ ಮೂಲಕ ನೌಕರರ ರಾಜ್ಯ–ಮಟ್ಟದ ವಿವಿಧ ಸಂಘಗಳನ್ನು ಒಳಗೊಂಡ.ಆಲ್ ಇಂಡಿಯಾ ಸ್ಟೇಟ್ ಗವರ್ನಮೆಂಟ್ ಎಂಪ್ಲಾಯೀಸ್ ಫೆಡರೇಶನ್ ಅಸ್ತಿತ್ವಕ್ಕೆ ಬಂದಿತು. ಕಲ್ಕತ್ತಾದಲ್ಲಿ ಜೂನ್ 11–13, 1965 ರಂದು ನಡೆದ ಅಖಿಲ ಭಾರತ ಸಮಾವೇಶ ಮತ್ತು ತಿರುವನಂತಪುರದಲ್ಲಿ 5 ನವೆಂಬರ್ 1966 ರಂದು ನಡೆದ ಮೊದಲ ಅಖಿಲ ಭಾರತ ಸಮ್ಮೇಳನದ ಮೂಲಕ ಯಶಸ್ವಿಯಾಗಿ ಪೂರ್ಣ ಚಟುವಟಿಕೆಗೆ ಬಂದಿತು.

ಖಾಸಗಿ ವಲಯದ ಬ್ಯಾಂಕ್, ವಿಮೆ ಮತ್ತು ಇತರ ಕೈಗಾರಿಕೆಗಳಲ್ಲಿ ಅಖಿಲ ಭಾರತ ಸಂಘಟನೆಯನ್ನು ರಚಿಸುವ ಪ್ರಯತ್ನಗಳು ಸ್ವಾತಂತ್ರ್ಯೋತ್ತರ ಅವಧಿಯಲ್ಲಿ ಮಾತ್ರ ಪ್ರಾರಂಭವಾದವು. 1951 ರ ಜೂನ್ 30 ಮತ್ತು ಜುಲೈ 1 ರಂದು ಮುಂಬೈಯಲ್ಲಿ ನಡೆದ ವಿಮಾ ನೌಕರರ ಮೊದಲ ಅಖಿಲ ಭಾರತ ಸಮಾವೇಶದಲ್ಲಿ ಆಲ್ ಇಂಡಿಯಾ ಇನ್ಶೂರೆನ್ಸ್ ಎಂಪ್ಲಾಯೀಸ್ ಅಸೋಸಿಯೇಶನ್ ರಚಿಸಲಾಯಿತು. ವಿಮಾ ಉದ್ಯಮದ ರಾಷ್ಟ್ರೀಕರಣದ ಬೇಡಿಕೆಯನ್ನು ಸಮಾವೇಶವು ಮುಂದಿಟ್ಟಿತು.

ಆಲ್ ಇಂಡಿಯಾ ಬ್ಯಾಂಕ್ ಎಂಪ್ಲಾಯೀಸ್ ಅಸೋಸಿಯೇಶನ್ 1946 ರಲ್ಲಿ ರೂಪುಗೊಂಡಿತು, ಆದರೂ ಬಿಡಿ ಬ್ಯಾಂಕುಗಳಲ್ಲಿನ ಬ್ಯಾಂಕ್ ಉದ್ಯೋಗಿಗಳ ಸಂಘಗಳು ಅದಾಗಲೇ 1925 ಕ್ಕಿಂತ ಮೊದಲು ಅಸ್ತಿತ್ವಕ್ಕೆ ಬರಲಾರಂಭಿಸಿದ್ದವು. ಪ್ರಸ್ತುತ ಇಡೀ ಜೀವ ವಿಮಾ ಉದ್ಯಮ ಮತ್ತು ಬ್ಯಾಂಕ್ ಉದ್ಯಮದ ಪ್ರಮುಖ ಭಾಗವನ್ನು ರಾಷ್ಟ್ರೀಕರಣಗೊಳಿಸಲಾಗಿದೆ.

ಮೊದಲನೆಯ ಮಹಾಯುದ್ಧದ ನಂತರದ ಅವಧಿಯಲ್ಲಿ ಖಾಸಗಿ ಶಾಲೆಗಳಲ್ಲಿ ಕೆಲಸ ಮಾಡುವ ಶಿಕ್ಷಕರ ಸಂಘಟನೆಗಳು ಸಹ ಅಭಿವೃದ್ಧಿ ಹೊಂದಿದವು. ಆಲ್ ಬಂಗಾಲ್ ಟೀಚರ್ಸ್ ಅಸೋಸಿಯೇಶನ್ಸ್ ಅನ್ನು ಬಂಗಾಳದಲ್ಲಿ 27 ಮಾರ್ಚ್ 1921 ರಂದು ರಚಿಸಲಾಯಿತು. ಅದೇ ಅವಧಿಯಲ್ಲಿ ಇತರ ಪ್ರಾಂತ್ಯಗಳಲ್ಲಿಯೂ ಇದೇ ರೀತಿಯ ಸಂಘಟನೆಗಳನ್ನು ರಚಿಸಲಾಯಿತು. ಆಲ್ ಇಂಡಿಯಾ ಫೆಡರೇಶನ್ ಆಫ್ ಟೀಚರ್ಸ್ ಎಂದು ಕರೆಯಲ್ಪಡುವ ಒಂದು ಸಂಘಟನೆಯೂ 1928 ರ ಸುಮಾರಿಗೆ ರೂಪುಗೊಂಡಿತು.

ಸರ್ಕಾರಿ ನೌಕರರ ಸಂಘಗಳು ಎಐಟಿಯುಸಿಗೆ ಸಂಯೋಜನೆಯಾಗಿರಲಿಲ್ಲ, ಈಗಿರುವ ಸರ್ಕಾರಿ ನಿಯಮಾವಳಿಗಳ ಪ್ರಕಾರ ಹಾಗೆ ಮಾಡಲು ಅವರಿಗೆ ಅನುಮತಿ ಇಲ್ಲ. ಖಾಸಗಿ ನಿರ್ವಹಣೆಯಡಿಯಲ್ಲಿ ರೈಲ್ವೆ ಕಾರ್ಮಿಕರ ಸಂಘಗಳು ಎಐಟಿಯುಸಿಗೆ ಸಂಯೋಜನೆ ಹೊಂದಿದ್ದವು. ಅಧಿಕೃತ ನಿರ್ಬಂಧಗಳ ಜೊತೆಗೆ, ಪ್ರತ್ಯೇಕವಾಗಿರಲು ಬಯಸುವ ಮನೋಭಾವ, ಯಾವುದೇ ಕೇಂದ್ರ ಕಾರ್ಮಿಕ ಸಂಘಗಳ ಸಾಂಸ್ಥಿಕ ಚೌಕಟ್ಟಿನ ಹೊರಗೆ ವಿಭಿನ್ನ ನೆಲೆಯಲ್ಲಿ ವೈಟ್ ಕಾಲರ್ ನೌಕರರ ಸಂಘಗಳ ಅಭಿವೃದ್ಧಿಗೆ ಸ್ವಲ್ಪ ಮಟ್ಟಿಗೆ ಕಾರಣವಾಗಿದೆ. ಆದರೆ ಇತ್ತೀಚಿನ ದಿನಗಳಲ್ಲಿ ಕೇಂದ್ರ ಕಾರ್ಮಿಕ ಸಂಘಗಳಿಗೆ ಸೇರಿದ ಕೈಗಾರಿಕಾ ಕಾರ್ಮಿಕರು ಮತ್ತು ಪ್ರತ್ಯೇಕ ಸಂಘಗಳು ಮತ್ತು ಒಕ್ಕೂಟಗಳಾಗಿ ಸಂಘಟಿತವಾದ ವೈಟ್ ಕಾಲರ್ ನೌಕರರ ದೇಶವ್ಯಾಪಿ ಐಕ್ಯ ಚಳುವಳಿಗಳು ಕಂಡುಬರುತ್ತಿವೆ. ಸರ್ಕಾರಿ ಅಥವಾ ಖಾಸಗಿ ವಲಯಗಳಲ್ಲಿರಲಿ ಭಾರತದ ವೈಟ್ ಕಾಲರ್ ನೌಕರರ ಟ್ರೇಡ್ ಯೂನಿಯನ್ ಮತ್ತು ರಾಜಕೀಯ ಪ್ರಜ್ಞೆ ಈಗ ಸಾಕಷ್ಟು ಉನ್ನತ ಮಟ್ಟದ ಅಭಿವೃದ್ಧಿಯನ್ನು ತಲುಪಿದೆ.

ಅಮೆರಿಕದ 'ಅಮೆಜಾನ್' ಎಂಬ ದೈತ್ಯ ಕಂಪನಿಯು 'ಯೂನಿಯನ್-ಮುರುಕತನ' ದಲ್ಲಿ ತೊಡಗಿದೆ ಎಂಬ ದೂರನ್ನು, ಖಫಆಖಾ ಯೂನಿಯನ್ ಲೇಬರ್ ರಿಲೇಶನ್ಸ್ ಬೋರ್ಡ್ ಗೆ ನೀಡಿದೆ. ಯು.ಎಸ್ ನ ಎರಡನೇ ಅತಿ ದೊಡ್ಡ ಸಂಖ್ಯೆಯ (8 ಲಕ್ಷ) ಕಾರ್ಮಿಕರನ್ನು ಹೊಂದಿರುವ ಮತ್ತು ಜಗತ್ತಿನ ಅತಿ ದೊಡ್ಡ ಇ-ವ್ಯಾಪಾರ ಕಂಪನಿ ಆಗಿರುವ 'ಅಮೆಜಾನ್' ತನ್ನ ಯಾವುದೇ ಘಟಕದಲ್ಲಿ ಯೂನಿಯನ್ ಸಂಘಟಿಸುವುದರ ವಿರುದ್ಧ ತೀವ್ರ ಕ್ರಮ ಕೈಗೊಳ್ಳುತ್ತಾ ಬಂದಿದೆ . ಕಾರ್ಮಿಕರ ಮೇಲೆ ಒತ್ತಡ ಮತ್ತು ದಮನಕಾರಿ ಕ್ರಮಗಳ ಮೂಲಕ, ಬೆಸ್ಸೆಮರ್ ನಲ್ಲಿರುವ ಅಮೆಜಾನ್ ನ ಗೋದಾಮಿ ನ ಕಾರ್ಮಿಕರು ಯೂನಿಯನ್ ಗೆ ಸೇರುವುದಿಲ್ಲವೆಂಬ ಅಭಿಮತಕ್ಕೆ ಬಹುಮತ ಬರುವಂತೆ ಆ ಪ್ರಕ್ರಿಯೆಯನ್ನು ತಿರುಚಿದೆ ಎಂದು ದೂರು ತಿಳಿಸಿದೆ. ಗೋದಾಮಿನಲ್ಲಿ ಕೆಲಸದ ಪರಿಸ್ಥಿತಿ ಹೇಗಿತ್ತು ? ಅಮೆಜಾನ್ ನ ಯೂನಿಯನ್-ಮುರುಕ ಕ್ರಮಗಳೇನು? RWDSU ಸೋತಿದೆಯೇ? ಸೋತಿದ್ದರೆ ಯಾಕೆ ಸೋತಿತು? ಮುಂದಿನ ಹೋರಾಟದ ರೂಪುರೇಷೆಗಳು ಏನು? ಈ ಕುರಿತು ವಿವರಿಸುವ ಲೇಖನ

'ಯೂನಿಯನ್-ಮುರುಕ ಅಮೆಜಾನ್' ವಿರುದ್ಧ ಲೇಬರ್ ಬೋರ್ಡಿಗೆ ದೂರು

ಜಗದ ಸುತ್ತ

ವಸಂತರಾಜ ಎನ್.ಕೆ



ಅಮೆರಿಕದ 'ಅಮೆಜಾನ್' ಎಂಬ ದೈತ್ಯ ಕಂಪನಿಯು (ಜನಭಾಷೆಯಲ್ಲಿ 'ಯೂನಿಯನ್-ಮುರುಕತನ' ಅಥವಾ ಯೂನಿಯನ್-ಬಸ್ಟಿಂಗ್ ಎಂದು ಕರೆಯಲಾಗುವ) 'ಅನ್ಯಾಯಯುತ ಕಾರ್ಮಿಕ ಆಚರಣೆ'ಗಳಲ್ಲಿ ತೊಡಗಿದೆ ಎಂಬ ದೂರನ್ನು, RWDSU (ರಿಟೈಲ್, ವೇರ್ ಹೌಸ್, ಡಿಪಾರ್ಟ್ ಮೆಂಟಲ್ ಸ್ಟೋರ್ ಯೂನಿಯನ್) ಅಲ್ಲಿನ NLRB (ನೇಶನಲ್ ಲೇಬರ್ ರಿಲೇಶನ್ಸ್ ಬೋರ್ಡ್) ಗೆ ನೀಡಿದೆ. ಯು.ಎಸ್ ನ ಎರಡನೇ ಅತಿ ದೊಡ್ಡ ಸಂಖ್ಯೆಯ (8 ಲಕ್ಷ) ಕಾರ್ಮಿಕರನ್ನು ಹೊಂದಿರುವ ಮತ್ತು ಜಗತ್ತಿನ ಅತಿ ದೊಡ್ಡ ಇ-ವ್ಯಾಪಾರ ಕಂಪನಿ ಆಗಿರುವ 'ಅಮೆಜಾನ್' ತನ್ನ ಯಾವುದೇ ಘಟಕದಲ್ಲಿ ಯೂನಿಯನ್ ಸಂಘಟಿಸುವುದರ ವಿರುದ್ಧ ತೀವ್ರ ಕ್ರಮ ಕೈಗೊಳ್ಳುತ್ತಾ ಬಂದಿದೆ. ಅಲಬಾಮಾ ರಾಜ್ಯದ ಬೆಸ್ಸೆಮರ್ ನಲ್ಲಿರುವ ಅಮೆಜಾನ್ ನ ಅತಿ ದೊಡ್ಡ ಗೋದಾಮಿ (ವೇರ್ ಹೌಸ್) ನಲ್ಲಿ ಯೂನಿಯನ್ ಮಾಡುವುದರ ಕುರಿತು ನಡೆದ ಕಾರ್ಮಿಕರ ಅಭಿಪ್ರಾಯ ಸಂಗ್ರಹದಲ್ಲಿ ಆ ಕಂಪನಿ ಕಾರ್ಮಿಕರ ಮೇಲೆ ಒತ್ತಡ ಮತ್ತು ದಮನಕಾರಿ ಕ್ರಮಗಳ ಮೂಲಕ ಯೂನಿಯನ್ ಗೆ ಸೇರುವುದಿಲ್ಲವೆಂಬ ಅಭಿಮತಕ್ಕೆ ಬಹುಮತ ಬರುವಂತೆ ಆ ಪ್ರಕ್ರಿಯೆಯನ್ನು ತಿರುಚಿದೆ ಎಂದು ದೂರು ತಿಳಿಸಿದೆ. ಆದ್ದರಿಂದ ಈ ಅಭಿಪ್ರಾಯ ಸಂಗ್ರಹವನ್ನು ರದ್ದು ಮಾಡಿ ಪುನಃ ನಡೆಸಬೇಕು ಎಂದು RWDSU ಒತ್ತಾಯಿಸಿದೆ.

ಗೋದಾಮಿನಲ್ಲಿ ಅಸಹನೀಯ ಕೆಲಸದ ಪರಿಸ್ಥಿತಿ

ಅಮೆರಿಕದ ಕಾರ್ಮಿಕ ಕಾನೂನುಗಳ ಪ್ರಕಾರ ಒಂದು ಕಂಪನಿ ಅಥವಾ ಘಟಕದಲ್ಲಿ ಯೂನಿಯನ್ ಮಾಡಬೇಕಾದರೆ ಕಾರ್ಮಿಕರಲ್ಲಿ ಅವರು 'ಯೂನಿಯನ್ ಸೇರಲು ಬಯಸುತ್ತಾರಾ?' ಎಂಬುದರ ಕುರಿತು ಗುಪ್ತ ಮತದಾನದ ಮೂಲಕ ಅಭಿಪ್ರಾಯ ಸಂಗ್ರಹ ಮಾಡಬೇಕು. ಅದರಲ್ಲಿ "ಯೂನಿಯನ್ ಸೇರಲು ಬಯಸುವ" ಕುರಿತು ಬಹುಮತ ಬಂದರೆ ಯೂನಿಯನ್ ರಚಿಸಬಹುದು ಮತ್ತು ಅದನ್ನು NLRB ರಿಜಿಸ್ಟರ್ ಮಾಡುತ್ತದೆ ಆಗ ಮಾತ್ರ ಕಂಪನಿಯ ಜೊತೆಗೆ ಸಾಮೂಹಿಕ ಚೌಕಾಶಿ ಮಾಡುವ ಅವಕಾಶವಿರುತ್ತದೆ. ಬೆಸ್ಸೆಮರ್ ಕಾರ್ಮಿಕರ ನಡುವೆ RWDSU ಯೂನಿಯನ್ ಸೇರಲು ಅಭಿಮತ ಸಂಗ್ರಹದ ಗುಪ್ತ ಮತದಾನ ನಡೆಸಲು ತೀರ್ಮಾನಿಸಿ ಆ ಕುರಿತು ತೀವ್ರ ಪ್ರಚಾರ ನಡೆಸಿತ್ತು. ಅಮೆಜಾನ್ ಕಂಪನಿ ಸಹ ತೀವ್ರ ಪ್ರತಿ-ಪ್ರಚಾರ ಮಾಡಿತ್ತು. ಇದು ಯು.ಎಸ್ ನಲ್ಲಿ ಮತ್ತು ಅಂತರರಾಷ್ಟ್ರೀಯವಾಗಿಯೂ ತೀವ್ರ ಗಮನ ಸೆಳೆದಿತ್ತು. ಆದರೆ ಎಪ್ರಿಲ್ 9 ರಂದು ನಡೆದ ಮತದಾನದಲ್ಲಿ ಬೆಸ್ಸೆಮರ್ ಗೋದಾಮಿನ ಕಾರ್ಮಿಕರ ಶೇ.55 ಮತದಾನ ಮಾಡಿದ್ದು 738 ಮತಗಳು ಯೂನಿಯನ್ ಸೇರುವ ಪರವಾಗಿ ಮತ್ತು 1798 ವಿರುದ್ಧವಾಗಿ ಬಿದ್ದಿದ್ದವು. 76 ಮತಗಳು ಅಸಿಂಧುವಾಗಿದ್ದವು. 505 ಮತಗಳು ವಿವಾದಾಸ್ಪದವಾಗಿದ್ದವು. ಯೂನಿಯನ್ ಸೇರುವ ಪ್ರಸ್ತಾವ ಅಸ್ವೀಕೃತವಾಗಿತ್ತು. ಆದರೆ ಇದು ಅಮೆಜಾನ್ ಕಂಪನಿಯ ಒತ್ತಡ ಮತ್ತು ದಮನದ ಫಲವೆಂದು ಯೂನಿಯನ್ ಆಪಾದಿಸಿದೆ.

ಬೆಸ್ಸೆಮರ್ ಗೋದಾಮಿನ ಕಾರ್ಮಿಕರನ್ನು ಅಮೆಜಾನ್ ನಡೆಸಿಕೊಳ್ಳುವ ರೀತಿ ಬಹಳ ಕೆಟ್ಟದಾಗಿದ್ದು ಅತೃಪ್ತಿ ಮಡುಗಟ್ಟಲು ಆರಂಭವಾಗಿತ್ತು. ಕೊವಿಡ್ ಲಾಕ್ ಡೌನ್ ನ ಮೊದಲ ತಿಂಗಳುಗಳಲ್ಲಿ ಆನ್ ಲೈನ್ ಅಥವಾ ಇ-ಕಾಮರ್ಸ್ ವ್ಯಾಪಾರ ವಿಪರೀತವಾಗಿ ಏರಿದ್ದು ಕೆಲಸದ ಅವಧಿ ಮತ್ತು ತೀವ್ರತೆ ಎರಡೂ ಅಸಹನೀಯವಾಗಿ ಹೆಚ್ಚಿತ್ತು. ಕೆಲಸದ ತೀವ್ರತೆಯನ್ನು ಅಥವಾ 'ಉತ್ಪಾದಕತೆ'ಯನ್ನು ಏರಿಸುತ್ತಲೇ ಹೋಗಲಾಗುತ್ತಿತ್ತು. ಕೆಲಸದ ಸ್ಥಳದಿಂದ ಕೆಲವು ನಿಮಿಷಗಳು ಹೆಚ್ಚು ದೂರವಿದ್ದರೂ (ಅದನ್ನು ಕಂಪ್ಯೂಟರುಗಳ ಕಣ್ಗಾವಲಿನಿಂದ ಅಳೆಯಲಾಗುತ್ತಿತ್ತು) ಅಮಾನತು ಮತ್ತು ಕೆಲಸದಿಂದ ತೆಗೆದು ಹಾಕುವ ತೀವ್ರ ಶಿಕ್ಷೆಗೆ ಗುರಿಯಾಗಬೇಕಿತ್ತು. ಶೌಚಾಲಯಕ್ಕೆ ಹೋಗಿ ಬರುವ ಸಮಯದ ಮೇಲೂ



ತೀವ್ರ ಪ್ರತಿಬಂಧಗಳಿದ್ದವು. ಸುಮಾರು 6 ಸಾವಿರ ಕಾರ್ಮಿಕರು ಕೆಲಸ ಮಾಡುವ ನಾಲ್ಕು ಮಾಳಿಗೆಯ ಗೋದಾಮಿನಲ್ಲಿ ಸರಕುಗಳಿಗೆ ಹಲವಾರು ಲಿಫ್ಟ್ ಗಳು ಇದ್ದರೆ, ಕಾರ್ಮಿಕರ ಉಪಯೋಗಕ್ಕೆ ಒಂದೇ ಲಿಫ್ಟ್ ಇತ್ತು. ಹೆಚ್ಚಿನ ಕಾರ್ಮಿಕರು ಗಂಟೆಗೆ 7.5 ಡಾಲರು ಗಳ ಅಮೆರಿಕದ ಕನಿಷ್ಟ ವೇತನವನ್ನಷ್ಟೇ ಪಡೆಯುತ್ತಿದ್ದರು. ಕೊವಿಡ್ ತೀವ್ರವಾಗಿದ್ದಾಗ ಕೆಲವು ತಿಂಗಳುಗಳ ಕಾಲ 'ಸಂಕಷ್ಟದ ಭತ್ಯೆ' ಕೊಟ್ಟ ಕಂಪನಿ ಅದನ್ನು ಆ ಮೇಲೆ ಹಿಂತೆಗೆದುಕೊಂಡಿತು. ಸಾಲದೆಂಬಂತೆ ಅಮೆಜಾನ್ ನ ಮತ್ತು ಇಡೀ ದೇಶದ (ಯಾಕೆ ಜಗತ್ತಿನ) ಕಾರ್ಮಿಕರು ಕಂಗಾಲಾಗಿದ್ದಾಗ, ಯು.ಎಸ್ ನ ನಂಬರ್ 1 ಶ್ರೀಮಂತನಾದ ಅಮೆಜಾನ್ ನ ಸ್ಥಾಪಕ-ಮಾಲೀಕ ಜೆಫ್ ಬೆಝೋ ಮತ್ತು ಕಂಪನಿಯ ಆಸ್ತಿ ಮೌಲ್ಯ ಕೊವಿದ್ ಕಾಲದಲ್ಲಿ ಅತ್ಯಂತ ಹೆಚ್ಚು ಏರಿತ್ತು. ಇದು ಕಾರ್ಮಿಕರ ಗಾಯದ ಮೇಲೆ ಬರೆ ಎಳೆದಂತೆ ಆಗಿತ್ತು.

ಅಮೆಜಾನ್ ನ ಯೂನಿಯನ್-ಮುರುಕ ಕ್ರಮಗಳು

ಇಂತಹ ಪರಿಸ್ಥಿತಿಯನ್ನು ತಾಳಲಾರದೆ ಬೆಸ್ಸೆಮರ್ ನಲ್ಲಿನ ಅಮೆಜಾನ್ ಗೋದಾಮಿನ ಕೆಲವು ಕಾರ್ಮಿಕರು RWDSU ಯೂನಿಯನ್ ಸಂಪರ್ಕಿಸಿ ಅದನ್ನು ಸೇರುವ ಪ್ರಸ್ತಾವವನ್ನು ತಮ್ಮ ಸಹೋದ್ಯೋಗಿಗಳ ಮುಂದೆ ಇಟ್ಟಿದ್ದರು. ಆ ನಂತರ RWDSU ಯೂನಿಯನ್ ಮತ್ತು ಅಮೆರಿಕದ ಕೇಂದ್ರೀಯ ಯೂನಿಯನ್ AFL-CIO ಗಳು ತೀವ್ರ ಪ್ರಚಾರ ನಡೆಸಿದ್ದವು. ಆದರೆ ಕಾರ್ಮಿಕರ ಸಾಮೂಹಿಕ ಚೌಕಾಶಿಗೆ ಒಡ್ಡಿಕೊಳ್ಳುವ ಭಯದಿಂದ, ಅಮೆಜಾನ್ ಯೂನಿಯನ್ ಸೇರುವುದರ ವಿರುದ್ಧ ತೀವ್ರ ಪ್ರತಿಪ್ರಚಾರ ನಡೆಸಿತು. "ಯಾಕೆ ಯೂನಿಯನ್ ಸೇರಬಾರದು" ಎಂಬುದರ ಕುರಿತು ಕಾರ್ಮಿಕರಿಗೆ ಆಗಾಗ ಸತತವಾಗಿ ಕೆಲಸದ ಸ್ಥಳದಲ್ಲೇ ಕಡ್ಡಾಯ ಕ್ಲಾಸುಗಳನ್ನು ನಡೆಸಲಾಯಿತು. ಈ ಕ್ಲಾಸುಗಳಲ್ಲಿ ಸುಳ್ಳುಗಳು ಮತ್ತು ಅರೆಸತ್ಯಗಳನ್ನು ಹರಿಯಬಿಡಲಾಯಿತು. ಕಾರ್ಮಿಕರ ಮೇಲೆ ಪೋಸ್ಟರುಗಳು, ಮೊಬೈಲ್ ಸಂದೇಶಗಳು, ಸಾಮಾಜಿಕ ಮಾಧ್ಯಮ ಸಂದೇಶಗಳ ಹೊಳೆಯನ್ನೇ ಹರಿಸಲಾಯಿತು. ಇಂತಹ ಯೂನಿಯನ್-ವಿರೋಧಿ ಪೋಸ್ಟರುಗಳನ್ನು ಕೆಲಸದ ಸ್ಥಳಗಳು, ಶೌಚಾಲಯಗಳಲ್ಲಿ ವ್ಯಾಪಕವಾಗಿ ಹಚ್ಚಲಾಯಿತು. ಆದರೆ ಯೂನಿಯನ್-ಪರ ಪ್ರಚಾರಕ್ಕೆ ಯಾವುದೇ ಅವಕಾಶವಿರಲಿಲ್ಲ. ಯೂನಿಯನ್-ವಿರೋಧಿ ಪ್ರಚಾರಕರನ್ನು ಕೆಲಸದ ಸ್ಥಳಕ್ಕೆ ಬಿಟ್ಟು ಅವರು ಪ್ರತಿ ಕಾರ್ಮಿಕರ ಬಳಿ ಅವರ ಅಭಿಮತ ವಿಚಾರಿಸಿ ಅವರು ಯೂನಿಯನ್-ಪರವಾಗಿದ್ದರೆ ಅವರಲ್ಲಿ ಸುಳ್ಳು, ಅರೆಸತ್ಯಗಳ ಮೂಲಕ ಗೊಂದಲ ಹುಟ್ಟಿಸಲಾಯಿತು. ಬೆದರಿಕೆ ಹಾಕಲಾಯಿತು. ಯೂನಿಯನ್ ರಚನೆ ಆದದ್ದೇ ಆದರೆ, ಕಾನೂನು ಏನೇ ಹೇಳಲಿ ಅದರ ಜತೆ ಸಹಕರಿಸುವುದಿಲ್ಲ. ಯಾವುದೇ ಹೊಸ ಸವಲತ್ತು ಕೊಡುವುದಿಲ್ಲ. ಇದ್ದ ಸವಲತ್ತುಗಳನ್ನು ಕಳೆದುಕೊಳ್ಳಬಹುದು ಎಂಬ ಬೆದರಿಕೆ ಹಾಕಲಾಯಿತು. ವೇತನ ಏರಿಕೆಗೆ ಒಪ್ಪಿಕೊಳ್ಳುವುದಿಲ್ಲ. ಈಗ ಸರಾಸರಿ ಕೂಲಿ ಗಂಟೆಗೆ 15 ಡಾಲರು ಇದೆ. ಕನಿಷ್ಠ ವೇತನ ಗಂಟೆಗೆ 7.5 ಡಾಲರುಗಳಿಗಿಂತ ಹೆಚ್ಚಿಗೆ ಕಾನೂನು ಪ್ರಕಾರ ಕೊಡಬೇಕಾಗಿಲ್ಲ ಎಂದು ಹೇಳಲಾಯಿತು. ಆದರೆ ಈಗಾಗಲೇ ಸುಮಾರು ಶೇ.75ಕ್ಕಿಂತಲೂ ಹೆಚ್ಚು ಕಾರ್ಮಿಕರು ಕನಿಷ್ಟ ವೇತನ ಗಂಟೆಗೆ 7.5 ಡಾಲರುಗಳನ್ನಷ್ಟೇ ಪಡೆಯುತ್ತಿರುವುದು ಎಂಬ ಸತ್ಯವನ್ನು ಮರೆಮಾಚಲಾಯಿತು.

ಕ್ಲಾಸುಗಳಲ್ಲಿ ಮತ್ತು ಸಂದೇಶಗಳಲ್ಲಿ ಕಾರ್ಮಿಕರಲ್ಲಿ "ಗೊಂದಲ ಉಂಟು ಮಾಡುವ, ಜುಲುಮೆ, ಪ್ರತೀಕಾರದ ಬೆದರಿಕೆಗಳನ್ನು ಹಾಕುವ ಮೂಲಕ ಕಾರ್ಮಿಕರ ಆಯ್ಕೆಯ ಸ್ವಾತಂತ್ರ್ಯವನ್ನು ಬುಡಮೇಲು ಮಾಡಲಾಯಿತು" ಎಂದು RWDSU ಯು ಲೇಬರ್ ಬೋರ್ಡಿಗೆ ಕೊಟ್ಟ ದೂರಿನಲ್ಲಿ ತಿಳಿಸಿದೆ. ಕಾನೂನುಬಾಹಿರವಾದ ಇಂತಹ ಅಮೆಜಾನ್ ನ ಕ್ರಮಗಳ ಹಲವು ಪುರಾವೆಗಳನ್ನೂ ಬೋರ್ಡಿಗೆ ನೀಡಿದೆ. ಯು.ಎಸ್ ಪೋಸ್ಟ್ ಜತೆ ಸೇರಿ ಕಾರ್ಮಿಕರು ಮತ ಹಾಕಲು ಗೋದಾಮಿನ ಆವರಣದಲ್ಲೇ ವಿಶೇಷ ಬಾಕ್ಸುಗಳ ವ್ಯವಸ್ಥೆ ಮಾಡಿದ್ದು ಇವುಗಳಲ್ಲಿ ಒಂದು. ಇದರ ಮುಂದೆ ಕ್ಯಾಮೆರಾಗಳನ್ನು ಅಳವಡಿಸಿ ಯೂನಿಯನ್ ಪರ ಮತ ಹಾಕಬಹುದಾದವರನ್ನು ಬೆದರಿಸುವ ಪ್ರಯತ್ನ ಮಾಡಲಾಯಿತು. ಗೋದಾಮಿನ ಸುತ್ತಮುತ್ತಲಿನ ಪ್ರದೇಶದಲ್ಲಿ ಟ್ರಾಫಿಕ್ ಸಿಗ್ನಲ್ ಗಳ ನಿಲುಗಡೆ ಅವಧಿಯನ್ನು ತೀರಾ ಕಡಿಮೆ ಮಾಡಲಾಯಿತು. ಕೆಲಸಕ್ಕೆ ಬರುವ ಕಾರ್ಮಿಕರು ಕಾರಿನಲ್ಲಿ ಟ್ರಾಫಿಕ್ ಸಿಗ್ನಲಿನಲ್ಲಿ ನಿಂತಾಗ ಯೂನಿಯನ್-ಪರ ಪ್ರಚಾರಕರು ಅವರ ಜತೆ ಮಾತನಾಡುತ್ತಿದ್ದರು. ಇದನ್ನು ಕಡಿಮೆ ಅಥವಾ ಅಸಾಧ್ಯವಾಗಿಸಲು ಸ್ಥಳೀಯ ಆಡಳಿತದ ಮೇಲೆ ಒತ್ತಡ ಹಾಕಿ ಹೀಗೆ ಮಾಡಲಾಯಿತು. ಇಂತಹ ನೀಚ ಮಟ್ಟಕ್ಕೂ ಅಮೆಜಾನ್ ಇಳಿಯಿತು ಎಂದು RWDSU ಲೇಬರ್ ಬೋರ್ಡಿಗೆ ಕೊಟ್ಟ ದೂರಿನಲ್ಲಿ ಆಪಾದಿಸಿದೆ.

RWDSU ಸೋತಿದೆಯೇ?

ಅಮೆಜಾನ್ ನ ಯೂನಿಯನ್-ಮುರುಕತನದ ತೀವ್ರ ಮತ್ತು ದೃಢ ಕ್ರಮಗಳು ಕಾರ್ಮಿಕರ ಅಭಿಮತದ ಮೇಲೆ ಪರಿಣಾಮ ಉಂಟು ಮಾಡಿದವು ಎಂಬುದು ಸ್ಪಷ್ಟ ಆದರೆ 2:1 (ಎರಡಕ್ಕೆ ಒಂದು) ಪ್ರಮಾಣದಲ್ಲಿ ಕಾರ್ಮಿಕರು ಯೂನಿಯನ್ ಸೇರುವುದರ ವಿರುದ್ಧ ಮತನೀಡಿದ್ದನ್ನು ಇದು ಪೂರ್ಣವಾಗಿ ವಿವರಿಸುತ್ತದೆಯೆ ಎಂಬ ಪ್ರಶ್ನೆಗೆ RWDSU ಮತ್ತು AFL-CIO ವಕ್ತಾರರು, ಇಲ್ಲ ಎಂದು ಒಪ್ಪಿಕೊಳ್ಳುತ್ತಾರೆ. ಈ ಎರಡೂ ಸಂಘಟನೆಗಳು ಸ್ಥಳೀಯವಾಗಿಯೂ ದೇಶವ್ಯಾಪಿಯಾಗಿಯೂ ಪ್ರಚಾರದಲ್ಲಿ ಯಾವುದೇ ಕೊರತೆ ಮಾಡಲಿಲ್ಲ. ಬೆಸ್ಸೆಮರ್ ಅಮೆಜಾನ್ ಗೋದಾಮಿನ ಉದ್ಯೋಗಿಗಳಲ್ಲಿ ಸುಮಾರು ಶೇ. 80ರಷ್ಟು ಕರಿಯರಾಗಿದ್ದು ಇದಕ್ಕೆ ನಾಗರಿಕ ಹಕ್ಕುಗಳ ಹೋರಾಟಗಾರರು, ಬ್ಲಾಕ್-ಲೈವ್ಸ್-ಮ್ಯಾಟರ್ ಚಳುವಳಿಯ ಕಾರ್ಯಕರ್ತರು, ಡೆಮೊಕ್ರಾಟಿಕ್ ಪಕ್ಷದ ತಳಮಟ್ಟದ ಕಾರ್ಯಕರ್ತರು, ಹಲವು ಸಂಸತ್ ಸದಸ್ಯರು, ಕಲಾವಿದರು ಬುದ್ಧಿಜೀವಿಗಳು



ಯೂನಿಯನ್ ನ್ನು ಬೆಂಬಲಿಸಿದ್ದರು. ಈ ಹಿನ್ನೆಲೆಯಲ್ಲಿ ಈ ಪ್ರಮಾಣದ ಸೋಲನ್ನು ಖಂಡಿತ ನಿರೀಕ್ಷಿಸಿರಲಿಲ್ಲ. ಅಮೆಜಾನ್ ನ "ಗೊಂದಲ ಉಂಟು ಮಾಡುವ, ಜುಲುಮೆ, ಪ್ರತೀಕಾರದ ಬೆದರಿಕೆಗಳ" ಇಂತಹ ತೀವ್ರ ಕ್ರಮಗಳ ಅನಿರೀಕ್ಷಿತ ಪರಿಣಾಮಕಾರಿತನವು ಇಂದಿನ ಅದರಲ್ಲೂ ಕರಿಯರ ದಿನೇ ಹದಗೆಡುತ್ತಿರುವ ಅಭದ್ರ ಜೀವನೋಪಾಯದ ಪರಿಸ್ಥಿತಿಯ ಫಲ. ಅಲ್ಲದೆ ಅಲಬಾಮಾ ದಂತಹ ದಕ್ಷಿಣ ಪ್ರಾಂತ್ಯಗಳಲ್ಲಿ ಕಾರ್ಮಿಕರಲ್ಲಿ ವ್ಯಾಪಕವಾಗಿರುವ ಸಾಮಾನ್ಯ ಯೂನಿಯನ್-ವಿರೋಧಿ ಮತ್ತು ವರ್ಣಬೇಧದ ದಾಳಿಗಳಿಂದ ಜರ್ಝರಿತವಾದ ಕರಿಯರ ಆತಂಕದ ಧೋರಣೆಯೂ ಕಾರಣವಾಗಿರಬಹುದು. ಇದೇ ಪರಿಸ್ಥಿತಿಯಲ್ಲಿ ಉತ್ತರ ಪ್ರಾಂತ್ಯಗಳಲ್ಲಿ ಇದರ ಫಲಿತಾಂಶ ಬೇರೆನೇ ಆಗಿರುತ್ತಿತ್ತು ಎನ್ನುತ್ತಾರೆ ಈ ನಾಯಕರು.

ಸಂಘಟಿಸುವ ಹಕ್ಕು ರಕ್ಷಿಸುವ ಕಾನೂನಿಗಾಗಿ (PRO Act) ಹೋರಾಟ

ಇನ್ನು ಮುಂದಿನ ಹೋರಾಟದಲ್ಲಿ ಏನನ್ನು ನಿರೀಕ್ಷಿಸಬಹುದು? RWDSU ಯು ಲೇಬರ್ ಬೋರ್ಡಿಗೆ ಕೊಟ್ಟ ದೂರಿನ ವಿಚಾರಣೆಯಲ್ಲಿ ಗರಿಷ್ಟ ನಿರೀಕ್ಷಿಸಬಹುದಾದ್ದು ಈಗಿನ ಅಭಿಮತ ಸಂಗ್ರಹ ರದ್ದು ಮಾಡಿ ಅದನ್ನು ಪುನಃ ನಡೆಸಲು ಬೋರ್ಡ್ ಆಜ್ಞೆಯನ್ನು. ಅಂತಹ ಸಾಧ್ಯತೆ ಕಡಿಮೆ ಮತ್ತು ಈ ಪ್ರಕ್ರಿಯೆ ಹಲವು ವರುಷಗಳ ಕಾಲ ತೆಗೆದುಕೊಳ್ಳಬಹುದು. ಒಂದು ಕಂಪನಿ 'ಅನ್ಯಾಯಯುತ ಕಾರ್ಮಿಕ ಆಚರಣೆ'ಗಳಲ್ಲಿ ತೊಡಗಿದೆ ಎಂದು ರುಜುವಾತು ಆದರೆ, ಹೆಚ್ಚಾಗಿ ಲೇಬರ್ ಬೋರ್ಡ್ ಕೊಡುವ 'ಶಿಕ್ಷೆ' ಕೆಲವು ಸಾವಿರ ಡಾಲರುಗಳ ದಂಡ ಮತ್ತು ಕಂಪನಿಯ ನೋಟೀಸು ಬೋರ್ಡುಗಳಲ್ಲಿ 'ತಪ್ಪೊಪ್ಪಿಗೆ' !!

ಹಾಗಾದರೆ ಈ ಹೋರಾಟವನ್ನು ಹೇಗೆ ಏಕೆ ಮುಂದುವರೆಸಬೇಕು ಎಂಬ ಪ್ರಶ್ನೆಗೆ ಕಾರ್ಮಿಕ ನಾಯಕರಲ್ಲಿ ಸ್ಪಷ್ಟ ಉತ್ತರವಿದೆ. ಈ ಹೋರಾಟ ಬರಿಯ ಬೆಸ್ಸೆಮರ್ ಅಮೆಜಾನ್ ಗೋದಾಮಿನ 6 ಸಾವಿರ ಕಾರ್ಮಿಕರ ಹಕ್ಕುಗಳ ಕುರಿತು ಮಾತ್ರವಲ್ಲ, ಅಮೆಜಾನಿನ 8 ಲಕ್ಷ ಕಾರ್ಮಿಕರ ಹಕ್ಕುಗಳ ಕುರಿತು ಸಹ ಆಗಿದೆ. ಅಮೆಜಾನಿನ ಇತರ ಘಟಕಗಳ ಕಾರ್ಮಿಕರೂ ಇದನ್ನು ಆಸಕ್ತಿಯಿಂದ ಗಮನಿಸುತ್ತಿದ್ದರು. ಹಲವಾರು ಅಮೆಜಾನ್ ಘಟಕಗಳಿಂದ ಯೂನಿಯನ್ ಸೇರುವುದಕ್ಕೆ ಆಸಕ್ತಿ ತೋರಿಸಿ ಸಂದೇಶಗಳು ಬರುತ್ತಿವೆ. ಅವರೆಲ್ಲರು ಈ ಸೋಲಿನಿಂದ ಹತಾಶರಾಗಿಲ್ಲ. ಕೆಲವರು ಹೆಚ್ಚಿನ ಆಕ್ರೋಶದಿಂದ ಮುನ್ನಡೆಯಬೇಕೆಂದಿದ್ದಾರೆ. ಇಂದಿನ ಪರಿಸ್ಥಿತಿಯಲ್ಲಿ ಅದರಲ್ಲೂ ಕೊವಿಡ್ ಪರಿಹಾರದ ದೊಡ್ಡ ಪಾಲು ಬಾಚಿಕೊಂಡು ಕಾರ್ಮಿಕರನ್ನು ಇನ್ನಷ್ಟು ದುರ್ಭರ ಸ್ಥಿತಿಗೆ ತಳ್ಳುತ್ತಿರುವ ಇತರ ಕಂಪನಿಗಳ ಕಾರ್ಮಿಕರೂ ಯೂನಿಯನ್ ಗಳನ್ನು ಸೇರುವುದಕ್ಕೆ ಆಸಕ್ತರಾಗುತ್ತಿದ್ದಾರೆ. ಲೇಬರ್ ಬೋರ್ಡಿನಲ್ಲಿ ದೂರು ವಿಚಾರಣೆ ಒತ್ತಾಯಿಸುವ ಮೂಲಕ ಅಮೆಜಾನ್ ವಿರುದ್ಧ ಕ್ರಮ ಒತ್ತಾಯಿಸುವ ಮೂಲಕ ಎಷ್ಟೇ ಪ್ರಭಾವಶಾಲಿಯಾಗಿದ್ದರೂ ದೈತ್ಯ ಕಂಪನಿಗಳನ್ನು ಮಣಿಸಬಹುದು ಎಂಬ ಸಂದೇಶ ರವಾನೆ ಮಾಡಬಯಸುತ್ತೇವೆ. ಜೊತೆಗೆ ಇಂದಿನ ಕಾರ್ಮಿಕ ಕಾನೂನುಗಳ ಕಾರ್ಮಿಕ-ವಿರೋಧಿ ಮಾಲೀಕ-ಪರ ವಾಲುವಿಕೆ ಹಾಗೂ ಸೀಮಿತತೆಗಳನ್ನು ಬಯಲಿಗೆಳೆಯುತ್ತೇವೆ. ಕಾರ್ಮಿಕರು ಯೂನಿಯನ್ ಸೇರುವುದಕ್ಕೇನೇ ಬಹುಮತದ ಒಪ್ಪಿಗೆ ಇರಬೇಕಾದ ಇಂದಿನ ಷರತ್ತುಗಳನ್ನು ರದ್ದು ಮಾಡುವ ಹೊಸ ಕಾರ್ಮಿಕ ಕಾನೂನುಗಳಿಗಾಗಿ ಹೋರಾಟದ ಕುರಿತು ಕಾರ್ಮಿಕರಲ್ಲಿ ವ್ಯಾಪಕ ಪ್ರಚಾರ ಮಾಡಲು ಇದು ಅವಕಾಶ ಮಾಡಿಕೊಡುತ್ತದೆ. ಕಾರ್ಮಿಕರಲ್ಲಿ ಯೂನಿಯನ್ ಗಳಲ್ಲಿ ಸಂಘಟಿತರಾದವರ ಪ್ರಮಾಣ ಕೇವಲ ಶೇ. 10ಕ್ಕೆ ಕುಸಿದಿದ್ದು ಹಲವಾರು ಪ್ರಜಾಪ್ರಭುತ್ವವಾದಿಗಳಲ್ಲಿ ವ್ಯಾಪಕ ಆತಂಕ ಉಂಟುಮಾಡಿದೆ. ಇಂತಹ ಕಾನೂನು PRO (Protecting Right to Organise – ಸಂಘಟಿಸುವ ಹಕ್ಕು ರಕ್ಷಿಸುವ ಕಾನೂನು) Act ಈಗಾಗಲೇ ಸಂಸತ್ತಿನ ಕೆಳಮನೆ (ಪ್ರತಿನಿಧಿ ಸಭೆ) ಯಲ್ಲಿ ಪಾಸಾಗಿದ್ದು ಸೆನೆಟ್ ಮುಂದಿದೆ. ಆದರೆ ಅಲ್ಲಿ ರಿಪಬ್ಲಿಕನ್ ಬಹುಮತದಿಂದಾಗಿ ಸವಾಲು ಎದುರಿಸಬಹುದು. ಇದಕ್ಕಾಗಿ ಕೆಲವು ರಿಪಬ್ಲಿಕನ್ ಸೆನೆಟರುಗಳ ಮೇಲೆ ಈ ಮಸೂದೆಗೆ ಬೆಂಬಲಿಸಲು ಒತ್ತಡ ಹಾಕಬೇಕಾಗಬಹುದು. ಇದು RWDSU ಮತ್ತು AFL-CIO ನಾಯಕರು ಕೊಟ್ಟ ಮುಂದಿನ ಹೋರಾಟದ ರೂಪುರೇಷೆಗಳು.

JANASHAKTHI KANNADA VARA PATRIKE April 26-May 2, 2021 Price: Rs. 10/- Date of Publication: 23 April 2021 RNI No. KARKAN /2006/17926 Posted on every Saturday
"REGISTERD" Postal Reg. No. RNP/KA/BGS/2078/2019-21 Posted at BG PSO, BG - 560026 Licensed to Post without prepayment License No. PMG/BG/WPP-283/2019-21





ಸಂಶೋಧನೆಗಳು ಸಾವಯವ ಬೌದ್ಧಿಕತೆಯನ್ನು ಆಧರಿಸಿರಬೇಕು

ಪಿ.ಆರ್. ವೆಂಕಟೇಶ್

ಪಿ.ಎಚ್.ಡಿ. ಪದವಿ ಪಡೆದ ಗೆಳೆಯರೊಂದಿಗೆ ಒಂದು ಆತ್ಮೀಯ ಸಂವಾದ

10 ಏಪ್ರೀಲ್ 2021 ರಂದು ಹೊಸಪೇಟೆಯ ಸಿದ್ಧಾರ್ಥ ಸಭಾಂಗಣದಲ್ಲಿ ಬೆಳಿಗ್ಗೆ 11.00 ಗಂಟೆಗೆ ಸಮುದಾಯ ಕರ್ನಾಟಕ ಬಳ್ಳಾರಿ ಜಿಲ್ಲಾ ಸಮಿತಿಯ ಮುತುವರ್ಜಿಯಲ್ಲಿ **'ಆದಿವಾಸಿಗಳ ಕುರಿತ ಪ್ರಭುತ್ವದ ದೃಷ್ಟಿಕೋನ: ತಾತ್ವಿಕ ವಿವೇಚನೆ' ಹಾಗೂ 'ಸಮುದಾಯ' ರಂಗ ಚಳವಳಿಯ ಚಾರಿತ್ರಿಕ ವಿಶ್ಲೇಷಣೆ ಮತ್ತು 'ಜಿ.ಮಾದೇಗೌಡರ ಚಿಂತನೆ ಹಾಗೂ ಹೋರಾಟ : ಒಂದು ಅಧ್ಯಯನ'** ಎಂಬ ಮೂರು ವಿಷಯಗಳ ಕುರಿತು ಡಾ.ಎಸ್.ವೈ.ಗುರುಶಾಂತ್, ಡಾ. ಎಂ.ಮುನಿರಾಜು, ಡಾ. ಬಿ.ಸಿ.ಬಾಬು ಇವರೊಂದಿಗೆ ಆತ್ಮೀಯ ಸಂವಾದ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಸಮುದಾಯದೊಂದಿಗೆ ಸಿ.ಐ.ಟಿ.ಯು, ಡಿ.ವೈ.ಎಫ್.ಐ, ಎಸ್.ಎಫ್.ಐ, ಜೀವ ವಿಮಾ ನೌಕರರು–ಏಜೆಂಟರುಗಳ ಸಂಘ, ದಲಿತ ಹಕ್ಕುಗಳ ಸಮಿತಿ, ಸರ್ಕಾರಿ ನೌಕರರ ಸಂಘ, ಜನ ವಿಜ್ಞಾನ ಚಳುವಳಿ ಮುಂತಾದ ಸಂಸ್ಥೆಗಳೂ ಜೊತೆಗೂಡಿದ್ದವು. 'ನಮ್ಮ ಶಿಕ್ಷಣ ಸಾಮಾಜಿಕ ವಿಮೋಚನೆಯ ಹಾದಿ ತೋರುವ ಕೇಂದ್ರವಾಗದೇ, ಅಸಮಾನತೆಯ ಪುನರ್ ನಿರ್ಮಾಣಕ್ಕೆ ಆಧಾರವನ್ನು ಒದಗಿಸುವ ಕೇಂದ್ರವಾಗಿ ಬದಲಾಗುತ್ತಿರುವ ಬಗ್ಗೆ ಕಳವಳ' ವ್ಯಕ್ತಪಡಿಸಿದರು. ಈ ಗೆಳೆಯರು ಕೈಗೊಂಡ ಸಂಶೋಧನೆಗಳಿಗೆ ಜನತೆ ಮತ್ತು ಜನ ಚಳುವಳಿಗಳ ಕುರಿತ ಚಾರಿತ್ರಿಕ ವಸ್ತುವೇ ಕೇಂದ್ರ. ಈ ವಿಚಾರಗಳ ಕುರಿತಾಗಿ ಕಳೆದ ಐದು ವರ್ಷಗಳ ಅಧ್ಯಯನ ನಡೆಸಿದ ನಮ್ಮ ಸಂಗಾತಿಗಳು ದೇಸೀಯ ಬೇರುಗಳನ್ನು ಬಿಡದೇ ತಮ್ಮ ಸಂಶೋಧನೆಯಲ್ಲಿ ಜೈವಿಕತೆಯನ್ನು ಉಳಿಸಿಕೊಂಡು ಹೊಸ ಆಂದೋಲನಗಳಿಗೆ ಮುನ್ನುಡಿ ಬರೆಯುವಂತಹ ಫಲಿತಗಳನ್ನು ಕಂಡುಕೊಂಡಿದ್ದಾರೆ. ನಮ್ಮೆದುರು ಬಿರುಗಾಳಿಯಂತೆ ನುಗ್ಗಿ ಬರುತ್ತಿರುವ ಜಾಗತೀಕರಣಕ್ಕೆ ಪ್ರತಿರೋಧವಾಗಿ ಅವರು ತಮ್ಮ ಸಂಶೋಧನೆಯನ್ನು ಪೂರೈಸಿದ್ದಾರೆ. ಈ ಮೂಲಕ ಕುಸಿಯುತ್ತಿರುವ ಜೈವಿಕ ಸಂಬಂಧಗಳನ್ನು ಬೆಸೆದು ಹೊಸ ಚಿಂತನೆಗಳಿಗೆ ನಾಂದಿ ಹಾಡ ಬಲ್ಲುದು ಎಂದು ನಾನಾದರೂ ಭಾವಿಸುವೆ' ಎಂದರು. 'ಇತ್ತೀಚಿನ ಬಹುತೇಕ ಸಂಶೋಧನೆಗಳು ಕೇವಲ ಅಕಾಡೆಮಿಕ್ ಸಂಗತಿಗಳಿಗೆ ಸೀಮಿತಗೊಳ್ಳುತ್ತಿವೆ. ಸಂಶೋಧನೆಗಳು ಜನ ಹಾಗೂ ನೆಲ ಮೂಲದ ಕಸುವು ಪಡೆದು ಸಾವಯವ ಬೌದ್ಧಿಕತೆಯಾಗಿ ಅರಳಬೇಕು' ಎಂದು ಆಶಿಸಿದರು.

ಆಡಳಿತ ವರ್ಗದ ವಿರುದ್ಧ ಬರೆದರೆ ಜೈಲಿಗೆ ಹಾಕುವ ಬ್ರಿಟಿಷರ ಕಾಲದ ಸ್ಥಿತಿ ಈಗಲೂ ಮುಂದುವರಿದಿದೆ. ಬುಡಕಟ್ಟು ಭಾಗದಲ್ಲಿ ಇಂದಿಗೂ ನಿರಂತರವಾಗಿ ದಾಳಿ ನಡೆಸಲಾಗುತ್ತಿದೆ. ರಾಜ ತನ್ನ ಖುಷಿಗೋಸ್ಕರ ಗರ್ಭಿಣಿಯರ ಹೊಟ್ಟೆ ಸೀಳುವುದು, ಜನರನ್ನು ಸುಡುವ ವಿಕೃತಿಗೆ ಬುಡಕಟ್ಟು ಜನಾಂಗದವರನ್ನು ಬಳಸುತ್ತಿದ್ದ ಎಂಬುದು ಕಲ್ಹಣನ ರಾಜತರಂಗಿಣಿಯಲ್ಲಿ ನಮೂದಾಗಿದೆ ಎಂದೂ ವೆಂಕಟೇಶ್ ರವರು ಪ್ರಸ್ತಾಪಿಸಿದರು.

ಅಳಿವಿನ ಅಂಚಿನಲ್ಲಿರುವ ಆದಿವಾಸಿ ಸಮುದಾಯಗಳು


ಭಾರತದ ಆದಿವಾಸಿ–ಬುಡಕಟ್ಟು ಸಮುದಾಯಗಳು ಪ್ರಮಾಣಾತ್ಮವಾಗಿ ಮತ್ತು ಗುಣಾತ್ಮ ಸ್ಥಾನವನ್ನು ಹೊಂದಿದ್ದರೂ ಈ ಸಮುದಾಯಗಳಿಗೆ ಸಮಾನತೆಯ ಸ್ಥಾನವನ್ನು ಪ್ರಭುತ್ವ ಕೊಟ್ಟಿಲ್ಲ. ಅವರು ಬಯಸಿದಂತೆ ಬದುಕುವ ಅವರು ಬಯಸಿದಂತೆ ಬದುಕುವ ಮುಕ್ತ ಅವಕಾಶ ಕಲ್ಪಿಸುವ, ಪಾಲಿಸಿ ಪೊರೆಯುವುದಾಗಿ ವಚನ ನೀಡಿದ್ದ ಪ್ರಭುತ್ವ ವಂಚನೆ ಎಸಗುತ್ತಲೇ ಬಂದಿದೆ. ಆದಿವಾಸಿಗಳು ಪ್ರಭುತ್ವಕ್ಕೆ ನಿವಾರಿಸಿಕೊಳ್ಳಬೇಕಾದ ವಿಷಯವಾಗಿ ಬಿಟ್ಟಿದೆ. ಅಭಿವೃದ್ಧಿಯ ಪ್ರತಿ ಯೋಜನೆ, ಹೆಜ್ಜೆಗಳೂ ಆದಿವಾಸಿಗಳನ್ನು ಅವಸಾನದಂಚಿಗೆ ಬಿಟ್ಟಿವೆ. ಬಜೆಟ್ ಸೇರಿದಂತೆ ವಿವಿಧ ಯೋಜನೆಗಳಲ್ಲಿ ಸರ್ಕಾರಗಳ ಆದಿವಾಸಿ ಹಾಗೂ ದಲಿತ ಸಮುದಾಯಗಳಿಗೆ ಮಾಡಿದ ಘೋಷಣೆಗೂ ವಾಸ್ತವಕ್ಕೆ ಅಜಗಜಾಂತರ ವ್ಯತ್ಯಾಸವಿದೆ. ಅರಣ್ಯ ಹಕ್ಕು ಕಾಯ್ದೆ ಹಾಗೂ ಭೂ ಸುಧಾರಣಾ ಕಾಯ್ದೆಯಂತೆ ಒಂದು ತುಂಡು ಭೂಮಿಯೂ ಸಿಗುತ್ತಿಲ್ಲ. ಈ ಪರಿಸ್ಥಿತಿ ಸಮುದಾಯದ ಅಸ್ತಿತ್ವಕ್ಕೆ ಮಾರಕವಾಗಿ ಪರಿಣಮಿಸುತ್ತಿವೆ ಎಂದರು. ಹೆಚ್ಚು ಜನಸಂಖ್ಯೆ ಇದ್ದರೂ ಒಂದು ವೇದಿಕೆಯಲ್ಲಿ ಸಂಘಟನಾತ್ಮಕವಾಗಿ ಕೂಡಲು ಆಗದ ಸಮುದಾಯ ತಮ್ಮ ಇರುವಿಕೆಯನ್ನು ಕಳೆದುಕೊಳ್ಳುವ ಸ್ಥಿತಿ ಇದೆ. ಸರ್ಕಾರಗಳ ನೀತಿಗಳು ದುರ್ಬಲರನ್ನು ಸಬಲರಾಗಿಸುವ ದಿಕ್ಕಿನಲ್ಲಿರಬೇಕು. ಆದರೆ, ಬಲಿಷ್ಠರಿಗೇ ಬಲ ತುಂಬುತ್ತಿವೆ. ಹೀಗಾಗಿ ಆದಿವಾಸಿಗಳ ಅಸ್ತಿತ್ವಕ್ಕೆ ಆತಂಕ ಉಂಟಾಗಿದೆ ಎಂದು ವಿಷಾದಿಸಿದರು. ಅಧ್ಯಯನ ಕಾಲಕ್ಕೆ ಕಂಡುಂಡ ಕೆಲವು ಸಂಗತಿಗಳನ್ನು, ಕೆಲ ಫಲಿತಗಳನ್ನು ವಿವರಿಸಿದರು.

ಬೀದಿ ನಾಟಕಗಳಿಂದ ಚಳವಳಿಗೆ ಇಂಬು ಸಮುದಾಯದಿಂದ ಸಾಂಸ್ಕೃತಿಕ ಆಂದೋಲನ

ಬೀದಿ ನಾಟಕಗಳು ಜನರ ನೋವಿಗೆ ಮಿಡಿಯುತ್ತಾ ಜೊತೆ ಜೊತೆಗೆ ಸಂಘಟನೆಗಳು, ಚಳವಳಿಗಳು ಆರಂಭವಾಗಿ, ಸಾಮಾಜಿಕವಾಗಿ ಜಾಗೃತ ಪ್ರಜ್ಞೆಯನ್ನು ಮೂಡಿಸಲು ನಾಂದಿಯಾದವು. ಪ್ರಗತಿಪರ ಲೇಖಕರ ಸಂಘವು ಕಾರ್ಯ ಚಟುವಟಿಕೆ ಆರಂಭಿಸಿದ ದಿನಗಳಲ್ಲಿ ಸಾಮಾಜಿಕ ಸಮಸ್ಯೆಗಳ ಕುರಿತಾದ ನಾಟಕಗಳು ರಚನೆಯಾದವು. ಆಯಾ ಕಾಲದ ತನ್ನತನವನ್ನು ವಿಕಸಿಸಿಕೊಳ್ಳುತ್ತ ಚಳವಳಿಯನ್ನು ಹಂತ–ಹಂತವಾಗಿ ಬೆಳಿಸಿಕೊಂಡಿತು. 1975ರಲ್ಲಿ ಭಾರತದ ತುರ್ತು ಪರಿಸ್ಥಿತಿಯ ಸಂದರ್ಭದಲ್ಲಿ ಹುಟ್ಟಿಕೊಂಡಂತಹ ಸಮುದಾಯ ಸಾಂಸ್ಕೃತಿಕ ಸಂಘಟನೆಯು ಬೀದಿ ನಾಟಕಗಳ ಮೂಲಕ ರಂಗ ಚಳುವಳಿಯನ್ನೇ ಉಂಟುಮಾಡಿದ್ದು, ಚಾರಿತ್ರಿಕವಾಗಿ ಗುರುತಿಸಬಹುದು ಸಮುದಾಯದ ಪ್ರಮುಖ ನಾಟಕಗಳಾದ ಹುತ್ತವ ಬಡಿದರೆ, ತಾಯಿ, ಗೆಲಿಲಿಯೋ, ಬೆಲ್ಚಿ, ಕತ್ತಲೆ ದಾರಿ ದೂರ, ಸೂರ್ಯಶಿಕಾರಿ, ಸ್ಪಾರ್ಟಕಸ್, ಪಂಪಭಾರತ, ಕೇಸರಿ ಬಿಳಿ ಹಸಿರು, ತೊಘಲಕ್, ಮಹಾಚೈತ್ರ, ಕುರಿ, ಮುಂತಾದ ಸಾಮಾಜಿಕ–ರಾಜಕೀಯ, ಸಿದ್ಧಾಂತ ಒಳಗೊಂಡ ನಾಟಕಗಳು ಸಮುದಾಯದ ಜಿಲ್ಲಾ ಮತ್ತು ರಾಜ್ಯ ಮಟ್ಟದ ಜಾಥಾಗಳ ಮೂಲಕ ಹಳ್ಳಿಗಳಲ್ಲಿ ಹಾಗೂ ನಗರಗಳ ಸ್ಲಂ ಗಳಲ್ಲಿ ಬೀದಿ ನಾಟಕಗಳ ಮೂಲಕ ಪ್ರದರ್ಶನ ಮಾಡಿ ಪರಿಣಾಮ ಬೀರಿದವು. 80ರ ದಶಕದ ಆರಂಭದಲ್ಲಿ ನರಗುಂದ–ನವಲುಗುಂದದ ರೈತ ಚಳುವಳಿಯೊಂದಿಗೆ ಸಮುದಾಯ ಜಾಥಾ, ಕಾರ್ಮಿಕರ ಪರವಾದ ನಾಟಕಗಳು ವಿದ್ಯಾರ್ಥಿ ಯುವಜನ ಹಾಗೂ ಮಹಿಳಾ ಪರ ನಾಟಕಗಳು, ಜಾತಿದಮನ, ಅಸ್ಪೃಶ್ಯತೆ ವಿರೋಧಿ ಘಟನೆಗಳ ವಸ್ತುಗಳು ಸಾಮಾನ್ಯ ಜನಗಳ ಮೇಲೆ ಪ್ರಭಾವ ಬೀರಿತು. ಆ ವಿಭಾಗಗಳ ಜನರು ಚಳುವಳಿಯೊಂದಿಗೆ ಗುರುತಿಸಿಕೊಂಡು ಒಂದು ಸಾಂಸ್ಕೃತಿಕ ರಂಗ ಚಳುವಳಿಯಾಗಿ ಬೆಳವಣಿಗೆ ಹೊಂದಲು ಇಂಬು ನೀಡಿತು. ಕರ್ನಾಟಕದಲ್ಲಿ ಸಾಮಾಜಿಕ, ರಾಜಕೀಯ ಮತ್ತು ಸಾಂಸ್ಕೃತಿಕ ಬದಲಾವಣೆಗಳನ್ನು ತರಲು ಸಮುದಾಯ ಸಾಂಸ್ಕೃತಿಕ ಸಂಘಟನೆಯಿಂದ ಮಾತ್ರ ಸಾಧ್ಯವಾಗಿದೆ ಎಂದು ಚಾರಿತ್ರಿಕವಾಗಿ ಅಧ್ಯಯನ ಮಾಡಲಾಗಿದೆ ಎಂದು ಡಾ.ಎಂ.ಮುನಿರಾಜು ವಿವರಿಸಿದರು. ಆಡಳಿತವನ್ನು ವಿಮರ್ಶಿಸಿ ಬರೆದರೆ ಜೈಲಿಗೆ ಹಾಕುವ ಬ್ರಿಟೀಷರ ಕಾಲದ ಸ್ಥಿತಿ ಈಗಲೂ ಮುಂದುವರಿದಿರುವುದು ವಿಷಾಧನೀಯ ಎಂದರು. ಬಾಬುರವರು ತಮ್ಮ ಸಂಶೋಧನೆಯ ಸಾರವನ್ನು ಮಂಡಿಸಿದರು. ಈ ಸಂಶೋಧನೆಗಳಿಗೆ ಕನ್ನಡ ವಿ.ವಿ.

ಸಂವಾದದಲ್ಲಿ ಎಸ್.ವೈ.ಗುರುಶಾಂತ್, ಮುನಿರಾಜು ಎಂ. ಬಿ.ಸಿ.ಬಾಬು ಭಾಗವಹಿಸಿ ಮಾತನಾಡಿದರು. ಸಂವಾದದ ಬಳಿಕ ಅಭಿನಂದಿಸಲಾಯಿತು. ಅಧ್ಯಕ್ಷತೆಯನ್ನು ಸಿ.ಐ.ಟಿಯು ಬಳ್ಳಾರಿ ಜಿಲ್ಲಾಧ್ಯಕ್ಷರೂ, ಸಿಪಿಐ(ಎಂ) ಜಿಲ್ಲಾ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಭಾಸ್ಕರ್ ರೆಡ್ಡಿ ವಹಿಸಿ ಮಾತನಾಡಿದರು. ಅತಿಥಿಗಳಾಗಿ ಎಂ.ಜಂಬಯ್ಯನಾಯಕ, ಎಲ್.ಮಂಜುನಾಥ, ಕೆ.ನಾಗರತ್ನಮ್ಮ, ಬಿ.ತಾಯಪ್ಪನಾಯಕ, ಜೆ.ಪ್ರಕಾಶ್, ಜೆ.ಎಂ.ಚನ್ನಬಸಯ್ಯ, ಮಹೇಶ್ ಬಿಸಾಟಿ, ಶಿವಕುಮಾರ್.ಜೆ ಉಪಸ್ಥಿತರಿದ್ದರು. ಪ್ರಧಾನ ಕಾರ್ಯದರ್ಶಿ ಬಸವರಾಜ್ ಕಮ್ಮಾರ್ ಸ್ವಾಗತಿಸಿದರು. ನಿರೂಪಣೆಯನ್ನು ವೀರಣ್ಣ ಕಲ್ಮನಿ ಮಾಡಿದರು. ನಂತರದಲ್ಲಿ ಸಂತಸ ಭೋಜನ ಕೂಟ ನಡೆಯಿತು. ಈ ಕಾರ್ಯಕ್ರಮದಲ್ಲಿ ವಿವಿಧ ಸಂಘಟನೆಗಳ ಪ್ರಮುಖರು, ಮಾಧ್ಯಮ ಮಿತ್ರರು ಹಾಗೂ ಹಂಪಿ ವಿಶ್ವವಿದ್ಯಾಲಯದ ಮಾಜಿ ಕುಲಸಚಿವ ಹಾಗೂ ಡೀನ್‌ರಾಗಿದ್ದ ಪ್ರಾಧ್ಯಾಪಕ ಡಾ.ಮಂಜುನಾಥ ಬೇವಿನಕಟ್ಟಿಯವರು, ಸಂಶೋಧನಾ ವಿದ್ಯಾರ್ಥಿಗಳು, ಹಲವು ಹಿತೈಷಿಗಳು ಆಗಮಿಸಿದ್ದರು. ಹಗರಿಬೊಮ್ಮನಹಳ್ಳಿ ಸಮುದಾಯ ಘಟಕದ ಮಹಂತೇಶ್ ಗೆಳೆಯರ ತಂಡ ಹಾಡುಗಳನ್ನು ಹಾಡಿತು.

ವರದಿ: ಬಸವರಾಜ್ ಕಮ್ಮಾರ್



'ಭಾರತದ ಕಮ್ಯುನಿಸ್ಟ್ ಆಂದೋಲನ–ಹೋರಾಟದ ನೂರು ವರ್ಷಗಳು' ಪುಸ್ತಕ ಪ್ರಕಟ

ಈ ತಲೆಬರಹದ ಪುಸ್ತಕ ಇದೀಗ ಪ್ರಕಟವಾಗಿದೆ. ಅಕ್ಟೋಬರ್ 17, 1920ರಂದು ಹಿಂದಿನ ಸೋವಿಯೆತ್ ಒಕ್ಕೂಟದ ತಾಷ್ಕೆಂಟಿನಲ್ಲಿ ಭಾರತ ಕಮ್ಯುನಿಸ್ಟ್ ಪಕ್ಷದ ಸ್ಥಾಪನೆಯೊಂದಿಗೆ ಭಾರತದಲ್ಲಿ ಸಮಾನತೆಯ ಸಮಾಜವನ್ನು ನಿರ್ಮಿಸುವ ಹೋರಾಟ ಒಂದು ಹೊಸ ಘಟ್ಟವನ್ನು ಪ್ರವೇಶಿಸಿತು. ಈ ನಿಟ್ಟಿನಲ್ಲಿ ಕಳೆದ ನೂರು ವರ್ಷಗಳು ಯುಗಪ್ರವರ್ತಕ ಘಟನೆಗಳು, ಹೋರಾಟಗಳು, ತ್ಯಾಗ–ಬಲಿದಾನಗಳು, ಪ್ರಮುಖ ನೀತಿ ನಿರೂಪಕ ನಿರ್ಧಾರಗಳನ್ನು, ಮುನ್ನಡೆಗಳನ್ನು ಕಂಡ ಅವಧಿ. ಈ ಮುನ್ನಡೆಗಳ ವಿವಿಧ ಆಯಾಮಗಳನ್ನು ಪರಾಮರ್ಶಿಸುವ ಲೇಖನಗಳ ಸಂಗ್ರಹ ಈ ಪುಸ್ತಕ. ಕಳೆದ ನೂರು ವರ್ಷಗಳಲ್ಲಿ ಸ್ವಾತಂತ್ರ್ಯ ಹೋರಾಟದಲ್ಲಿ, ಜಾತ್ಯತೀತ ಪ್ರಜಾಪ್ರಭುತ್ವದ ಸ್ಥಾಪನೆ ಮತ್ತು ರಕ್ಷಣೆಯಲ್ಲಿ, ಕಾರ್ಮಿಕ ಮತ್ತು ರೈತಾಪಿ ವರ್ಗದ ಸಂಘಟನೆಯಲ್ಲಿ, ಮಹಿಳಾ ವಿಮೋಚನೆ ಮತ್ತು ಸಾಮಾಜಿಕ ನ್ಯಾಯಕ್ಕಾಗಿ ಹೋರಾಟದಲ್ಲಿ, ಇಂದಿನ ವಿಶಿಷ್ಟ ಸವಾಲುಗಳನ್ನು ಎದುರಿಸುವಲ್ಲಿ ಕಮ್ಯುನಿಸ್ಟರ ಕಮ್ಯುನಿಸ್ಟ್ ಪಕ್ಷ/ಆಂದೋಲನಗಳ ಪಾತ್ರದ ಕುರಿತು ದೇಶದ ಪ್ರಮುಖ ನಾಯಕರ ಮಹತ್ವದ ಲೇಖನಗಳು ಇಲ್ಲಿವೆ. ಕರ್ನಾಟಕದಲ್ಲಿ ಕಮ್ಯುನಿಸ್ಟ್ ಚಳುವಳಿಯ ಕುರಿತು ಸಹ ಒಂದು ಲೇಖನ ಇದೆ. ಇದು ಜನಶಕ್ತಿ ಪ್ರಕಟಣೆಯಾಗಿದ್ದು ಪುಸ್ತಕದ ಬೆಲೆ ರೂ. 70. ಇದು ಸಂಗ್ರಹಯೋಗ್ಯ ಮತ್ತು ಬಹುಕಾಲ ಪ್ರಸ್ತುತವಾಗಿರುವ ಪುಸ್ತಕ.



JANASHAKTHI KANNADA VARA PATRIKE: Printed, Published by **G.N.NAGARAJ**, No. 12, 18th Cross, Sampangirama Nagar, Bangalore 560027, Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana**, No. 12, 18th Cross, Sampangirama Nagar, Bangalore 560027
Editor : **G.V.SRIRAMA REDDY**